20 January 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾವನಾಂತರಂಗ

ಕಣ್ಣಿಂದ ಜಾರುವ ನೀರಿಗೆ
ತೂಕವಿಲ್ಲದಿರಬಹುದು!ಆದರೆ
ಅದರಲ್ಲಿ ಕೂಡಿಟ್ಟ ನೋವಿಗೆ
ಅತಿಯಾದ ತೂಕವಿರುತ್ತದೆ!
-ಸ್ನೇಹಾ ಆನಂದ್

ವರ್ತಮಾನ

ಭವಿಷ್ಯದ ಮುನ್ನುಡಿ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಒಂದೊಳ್ಳೆ ಮಾತು

ಸಮಯ ನಂಬಿಕೆ ಮತ್ತು
ಮರಣ
ಈ ಮೂರು ಪಕ್ಷಿಗಳಿದ್ದಂತೆ
ಒಮ್ಮೆ ಕೈಯಿಂದ
ಹಾರಿ ಹೋದರೆ ಎಷ್ಟೇ
ಕಷ್ಟಪಟ್ಟರು ಮತ್ತೇ
ಹಿಂತಿರುಗಿ ಬರುವುದು ಅಸಾಧ್ಯ
ಮೈಲಾರ ಸಾವಿತ್ರಿಬಾಯಿ

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 78 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಡಿಜಿಪಿ 'ರಾಮ'ಚಂದ್ರನ ರಾಸಲೀಲೆ

* ಕಚೇರಿಯಲ್ಲೇ 'ಕಾಮದಾಟ'ದ ವಿಡಿಯೋ, ಸರಸ ಸಂಭಾಷಣೆ ಆಡಿಯೋ ವೈರಲ್

ಬೆಂಗಳೂರು: ರಾಜ್ಯದ ಮತ್ತೊಬ್ಬ ಉನ್ನತಾಧಿಕಾರಿ ರಾಸಲೀಲೆ ಪ್ರಕರಣ ಬಹಿರಂಗವಾಗಿದೆ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿಜಿಪಿ ರಾಮಚಂದ್ರರಾವ್ ತಮ್ಮ ಕಚೇರಿಯಲ್ಲೇ ಮಾಡೆಲ್ ಜೊತೆ ರಾಸಲೀಲೆಯಲ್ಲಿ ತೊಡಗಿರುವ ವಿಡಿಯೋಗಳು ಈಗ ವೈರಲ್ ಆಗಿದೆ.

ರಾಜ್ಯದಲ್ಲಿ ಪೊಲೀಸರು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವ ಪ್ರಕರಣಗಳು ಹೆಚ್ಚುತ್ತಿರುವ ಸಂದರ್ಭದಲ್ಲಿಯೇ ಈ ವಿಡಿಯೋ ವೈರಲ್ ಆಗಿರುವುದರಿಂದ ಸರ್ಕಾರಕ್ಕೂ ಮುಜುಗರವಾಗಿದೆ. ವಿಡಿಯೋ ವೈರಲ್ ಆದ ಕೆಲ ಸಮಯದಲ್ಲಿಯೇ ಸರಸ ಸಂಭಾಷಣೆಯ ಆಡಿಯೋ ಕೂಡ ವೈರಲ್ ಆಗಿದೆ.

ಡಿಜಿಪಿ ಕಚೇರಿಯಲ್ಲಿಯೇ ಮಹಿಳೆಯ ಜೊತೆ ಡಿಜಿಪಿ ಡಾ.ಕೆ.ರಾಮಚಂದ್ರರಾವ್ ರಾಸಲೀಲೆ ನಡೆಸಿರುವ ವಿಡಿಯೋ ಸಾಮಾಜಿಕ ಜಾಲತಾಣ ಮತ್ತು ಟಿವಿ ಚಾನಲ್‌ಗಳಲ್ಲಿ ವೈರಲ್ ಆಗಿವೆ. ರಾಮಚಂದ್ರರಾವ್ ಅವರು ತಮ್ಮ ಹುದ್ದೆಯ ಘನತೆ ಮರೆತು ಸಮವಸ್ತ್ರದಲ್ಲಿಯೇ ಮಹಿಳೆಯ ಜೊತೆ ಕಚೇರಿಯಲ್ಲೇ ರಾಸಲೀಲೆ ನಡೆಸಿದ್ದಾರೆ.

ವೈರಲ್ ಆಗಿರುವ ವಿಡಿಯೊಗಳಲ್ಲಿ ರಾಮಚಂದ್ರ ರಾವ್ ಅವರು ತಮ್ಮ ಕಚೇರಿಯಲ್ಲಿ, ಸಮವಸ್ತ್ರದಲ್ಲಿರುವಾಗಲೇ ಹಲವು ಮಹಿಳೆಯರೊಂದಿಗೆ ಅಸಭ್ಯವಾಗಿ ವರ್ತಿಸಿರುವುದು ಕಂಡುಬಂದಿದೆ. ಮಾಡೆಲ್ ಸೇರಿ ಹಲವು ಮಹಿಳೆಯರ ಜತೆ ಸರಸವಾಡಿತ್ತಿರುವುದು ವಿಡಿಯೊದಲ್ಲಿ ಕಂಡುಬಂದಿದೆ. ಕಚೇರಿಗೆ ಕೆಲಸದ ನಿಮಿತ್ತ ಬರುವ ಮಹಿಳೆಯರ ಜತೆಗೆ ಈ ಅಧಿಕಾರಿ ಸರಸವಾಡುತ್ತಿದ್ದರು ಎನ್ನಲಾಗಿದೆ. ಕಾಮಕಾಂಡದ ವಿಡಿಯೊಗಳು ಈಗ ಹೊರಬಂದಿವೆ.

ಖಾಕಿ ಸಮವಸ್ತ್ರದಲ್ಲೇ ಕಚೇರಿಯ ಕುರ್ಚಿ ಮೇಲೆ ಕುಳಿತು ಯುವತಿಗೆ ಮುತ್ತು ಕೊಡುವ ದೃಶ್ಯಗಳು,

8 ವರ್ಷದ ಹಿಂದಿನ ವಿಡಿಯೋ: ಡಿಜೆಪಿ ರಾವ್ ಅಚ್ಚರಿ ಹೇಳಿಕೆ

ಬೆಂಗಳೂರು: ಈಗ ವೈರಲ್ ಆಗಿರುವ ವಿಡಿಯೋಗಳು 8 ವರ್ಷಗಳ ಹಿಂದಿನದು. ನಾನು ಬೆಳಗಾವಿಯಲ್ಲಿ ಅಧಿಕಾರಿ ಆಗಿದ್ದಾಗ ನಡೆದಿತ್ತು ಎಂದು ಡಿಜಿಪಿ ರಾಮಚಂದ್ರರಾವ್ ಅವರು ಮಾಧ್ಯಮಗಳಿಗೆ ಅಚ್ಚರಿ ಆಗುವಂತೆ ಪ್ರತಿಕ್ರಿಯೆ ನೀಡಿದ್ದಾರೆ.ಆದರೆ ಆನಂತರ ಉಲ್ಟಾ ಹೊಡೆದಿದ್ದಾರೆ. ರಾಸಲೀಲೆ ಆರೋಪವನ್ನು ಡಿಜಿಪಿ ರಾಮಚಂದ್ರ ರಾವ್ ಅವರು ಅಲ್ಲಗಳೆದಿದ್ದಾರೆ. ಅದು ಎಐ ವಿಡಿಯೋ, ನನ್ನ ವಿರುದ್ಧ ದೊಡ್ಡ ಷಡ್ಯಂತ್ರ ನಡೆದಿದೆ ಎಂದು ಆರೋಪಿಸಿದ್ದಾರೆ. ಇದು ನನ್ನ ತೇಜೋವಧೆ ಮಾಡಲು ನಡೆಸಿ ರುವ ವ್ಯವಸ್ಥಿತ ಷಡ್ಯಂತ್ರವಾಗಿದೆ. ಪುಟ 2ಕ್ಕೆ

ಭೇಟಿಗೆ ಪರಂ ನಿರಾಕರಣೆ

ಬೆಂಗಳೂರು: ರಾಸಲೀಲೆ ವಿಡಿಯೋ ಬಹಿರಂಗ ಪ್ರಕರಣದ ಬಗ್ಗೆ ಸ್ಪಷ್ಟನೆ ನೀಡಲು ರಾಮಚಂದ್ರ ರಾವ್ ಗೃಹ ಸಚಿವ ಡಾ.ಪರಮೇಶ್ವರ್ ಅವರ ಕಚೇರಿಗೆ ಸೋಮವಾರ ಆಗಮಿಸಿದ್ದರು. ಮನೆ ಒಳಗೆ ಪುಟ 2ಕ್ಕೆ

ವರದಿ ನೀಡಲು ಸಿಎಂ ಸೂಚನೆ

ಬೆಂಗಳೂರು: ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿಜಿಪಿ ರಾಮಚಂದ್ರ ರಾವ್ ರಾಸಲೀಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಇಲಾಖೆಗೆ ವರದಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. ಪುಟ 2ಕ್ಕೆ

ಅಜ್ಞಾತ ಸ್ಥಳಕ್ಕೆ ಪರಾರಿ

ಬೆಂಗಳೂರು: ಮಹಿಳೆಯೊಂದಿಗಿನ ರಾಸಲೀಲೆ ವಿಡಿಯೋ ವೈರಲ್ ಬೆನ್ನಲ್ಲೇ ಡಿಜಿಪಿ ಡಾ. ರಾಮಚಂದ್ರ ರಾವ್ ಅವರು ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ.

▸▸ 10 ದಿನ ರಜೆ ಹಾಕಿದ ಡಾ.ರಾಮಚಂದ್ರ

10 ದಿನ ರಜೆ ಹಾಕಿರುವ ರಾಮಚಂದ್ರ ರಾವ್ ಕಾನೂನಾತ್ಮಕ ಹೋರಾಟದ ಕುರಿತು ರಹಸ್ಯ ಸ್ಥಳದಲ್ಲಿ ವಕೀಲರ ತಂಡದ ಜೊತೆ ಚರ್ಚಿಸಲಿದ್ದಾರೆ. ಮತ್ತೊಂದೆಡೆ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ ಯಾವುದೇ ಕ್ಷಣದಲ್ಲೂ ಅಧಿಕಾರಿ ವಿರುದ್ಧ ಅಮಾನತು ಆದೇಶ ಹೊರಡಿಸುವ ಸಾಧ್ಯತೆ ಇದೆ.

ಸಿಎಂ ಕ್ಷೇತ್ರದಲ್ಲಿ ಒತ್ತುವರಿ ತೆರವು

ಮೈಸೂರು: ಮುಖ್ಯಮಂತ್ರಿ ಸ್ವಕ್ಷೇತ್ರದಲ್ಲಿ ಮಹಿಳಾ ಅಧಿಕಾರಿಗೆ ಧಮ್ಕಿ ಹಾಕಿದ್ದ ಪ್ರಕರಣದಲ್ಲಿ ಸ್ಥಳಕ್ಕೆ ತಹಶೀಲ್ದಾರ್ ಮಹೇಶ್ ಭೇಟಿ ನೀಡಿ ಒತ್ತುವರಿಯಾಗಿದ್ದ 20 ಎಕರೆ ಸರ್ಕಾರಿ ಜಾಗವನ್ನ ವಶಕ್ಕೆ ಪಡೆದಿದ್ದಾರೆ. ಇಲ್ಲಿ ಸಿಎಂ ಕನಸಿನ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣವಾಗಲಿದೆ. ಗುಡಮಾದನಹಳ್ಳಿಯಲ್ಲಿರುವ ಒತ್ತುವರಿ ಜಾಗ ವೀಕ್ಷಣೆಗೆ ಗ್ರಾಮ ಆಡಳಿತ ಅಧಿಕಾರಿ ಜಿ.ಭವ್ಯ ಹಾಗೂ ಗ್ರಾಮ ಸಹಾಯಕ ನವೀನ್ ತೆರಳಿದ್ದ ವೇಳೆ ಜಿ.ಎಂ.ಪುಟ್ಟಸ್ವಾಮಿ ಎಂಬಾತ ಅವಾಚ್ಯ ಶಬ್ದಗಳಿಂದ ನಿಂದಿಸಿ, ಧಮ್ಕಿ ಹಾಕಿದ್ದ.

140 ಶಾಸಕರ ಬೆಂಬಲ: ಡಿಕೆಶಿ

ಬೆಂಗಳೂರು: ಕಾಂಗ್ರೆಸ್ ಪಕ್ಷದ 140 ಶಾಸಕರೂ ನನ್ನ ಬೆಂಬಲಕ್ಕೆ ಇದ್ದಾರೆ. ನಮ್ಮ ನಡುವೆ ಏನು ಚರ್ಚೆಯಾಗಿದೆ ಎಂದು ನಮಗೆ ಮಾತ್ರ ಗೊತ್ತು. ಇದನ್ನೆಲ್ಲಾ ಪುಟ 2ಕ್ಕೆ

ನನ್ನ ವಿರುದ್ಧ ದೊಡ್ಡ ಕುತಂತ್ರ: ಅಬಕಾರಿ ಸಚಿವ ತಿಮ್ಮಾಪುರ

ಬಾಗಲಕೋಟೆ: ನನ್ನ ವಿರುದ್ಧ ದೊಡ್ಡ ಕುತಂತ್ರ ನಡೆಯುತ್ತಿದೆ. ನಾನು ಏನು ತಪ್ಪು ಮಾಡಿದ್ದೇನೆ. ನಾನು ದುಡ್ಡು ಕೇಳಿದ್ದೇನಾ? ಎಂದು ಅಬಕಾರಿ ಸಚಿವ ಆರ್‌ಬಿ ತಿಮ್ಮಾಪುರ ಪ್ರಶ್ನಿಸಿದರು.

ಅಬಕಾರಿ ಇಲಾಖೆಯಲ್ಲಿ ಸಿಎಲ್ 7 ಲೈಸೆನ್ಸ್ ನೀಡಲು ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ ಹಾಗೂ ಅವರ ಪುತ್ರ, ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂಬ ಆಡಿಯೋ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ನನ್ನ ಮಗ ಇದರಲ್ಲಿ ಯಾಕೆ ಬರುತ್ತಾನೆ? ಆಡಿಯೋದಲ್ಲಿ ಯರ‍್ಯಾರ ಹೆಸರನ್ನು ಹೇಳುವರ ವಿರುದ್ಧ ನಾನು ಕಾನೂನು ಹೋರಾಟ ನಡೆಸುತ್ತೇನ ಎಂದರು. ಇಲ್ಲಿಯವರೆಗೆ ಮುಖ್ಯಮಂತ್ರಿಗಳು ನನಗೆ ಏನನ್ನೂ ಪುಟ 2ಕ್ಕೆ

ತಿಮ್ಮಾಪುರ ವಿರುದ್ಧ ಲೋಕಾಯುಕ್ತಕ್ಕೆ ದೂರು

ಬೆಂಗಳೂರು: ಅಬಕಾರಿ ಡಿಸಿ 25 ಲಕ್ಷ ರೂ. ಲಂಚ ಪಡೆದ ಪ್ರಕರಣದಲ್ಲಿ ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ ವಿರುದ್ಧವೂ ಲೋಕಾಯುಕ್ತಕ್ಕೆ ದೂರು ನೀಡಲಾಗಿದೆ.

ಅಬಕಾರಿ ಉಪ ಆಯುಕ್ತ ಜಗದೀಶ್ ನಾಯಕ್ ಅವರು ಬಾರ್ ಲೈಸೆನ್ಸ್ ನೀಡಲು 25 ಲಕ್ಷ ರೂ. ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದದ್ದರು. ಜಗದೀಶ್ ಸೇರಿದಂತೆ ಐವರು ಅಬಕಾರಿ ಅಧಿಕಾರಿಗಳನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಈಗ ಬಹಿರಂಗವಾಗಿರುವ ಆಡಿಯೋ ಕ್ಲಿಪ್‌ನಲ್ಲಿ ಅಬಕಾರಿ ಉಪ ಆಯುಕ್ತ ಜಗದೀಶ್ ನಾಯಕ್ ಅವರು ಸಚಿವರ ಹೆಸರನ್ನು ಉಲ್ಲೇಖಿಸಿದ್ದಾರೆ ಎಂದು ಆರೋಪಿಸಿ ಅಬಕಾರಿ ಸಚಿವರ ವಿರುದ್ಧ ಲಕ್ಷ್ಮಿ ನಾರಾಯಣ ದೂರು ನೀಡಿದ್ದಾರೆ ಎಂದು ಲೋಕಾಯುಕ್ತ ಅಧಿಕಾರಿ ತಿಳಿಸಿದ್ದಾರೆ.

ಶಾಲಾ ಬಸ್ ಡಿಕ್ಕಿ: ತಾಯಿ-ಮಗ ಸಾವು

ಬೆಂಗಳೂರು: ಮಗನನ್ನು ಶಾಲೆಗೆ ಬಿಡಲು ಹೋಗುತ್ತಿದ್ದಾಗ ಕಾಲೇಜು ಬಸ್ ಡಿಕ್ಕಿಯಾಗಿ ತಾಯಿ ಮತ್ತು ಮಗ ಇಬ್ಬರೂ ಸಾವನ್ನಪ್ಪಿರುವ ದುರ್ಘಟನೆ ವಿವೇಕನಗರ ಮುಖ್ಯ ರಸ್ತೆಯಲ್ಲಿ ನಡೆದಿದೆ. ಆಂಧ್ರಪ್ರದೇಶದ ತಾಯಿ ಸಂಗೀತಾ (37) ಮತ್ತು ಮಗ ಪಾರ್ಥ (8) ಮೃತ ದುರ್ದೈವಿಗಳು.

ಸಂಗೀತಾ ಆರ್ಮಿ ಪಬ್ಲಿಕ್ ಶಾಲೆಯಲ್ಲಿ ಕೆಲಸ ಮಾಡ್ತಿದ್ದರು. ಇಬ್ಬರು ಮಕ್ಕಳಿದ್ದು, ಅದೇ ಶಾಲೆಗೆ ಸೇರಿಸಿದ್ದರು. ಸೋಮವಾರ ಬೆಳಿಗ್ಗೆ ಮಗನೊಂದಿಗೆ ಶಾಲೆಗೆ ಕೆಲಸಕ್ಕೆ ತೆರಳ್ತಿದ್ದರು. ಈ ವೇಳೆ ರಸ್ತೆ ದಾಟುವಾಗ ಖಾಸಗಿ ಕಾಲೇಜಿನ ಬಸ್ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಸ್ಥಳದಲ್ಲೇ ತಾಯಿ-ಮಗ ಸಾವನ್ನಪ್ಪಿದ್ದಾರೆ. ಅಪಘಾತವೆಸಗಿ ಪುಟ 2ಕ್ಕೆ

ಕೆಜಿಗೆ 3 ಲಕ್ಷ ದಾಟಿದ ಬೆಳ್ಳಿ

ಮುಂಬೈ: ದೇಶದಲ್ಲಿ ಚಿನ್ನ ಮತ್ತು ಬೆಳ್ಳಿ ಬೆಲೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಸೋಮವಾರ ಬೆಳ್ಳಿ ಬೆಲೆ ಮೊದಲ ಬಾರಿಗೆ ಕೆಜಿಗೆ 3 ಲಕ್ಷ ರೂ. ದಾಟಿದೆ.

ಚಿನ್ನ ಮತ್ತು ಬೆಳ್ಳಿ ಬೆಲೆ ಭಾರಿ ಪ್ರಮಾಣದ ಏರಿಕೆಯಾಗಿದೆ. ಇಂದು ಬೆಂಗಳೂರು ಮಾರುಕಟ್ಟೆಯಲ್ಲಿ ಪ್ರತಿ ಕೆಜಿ ಬೆಳ್ಳಿ ದರ ರೂ. 3,05,000 ಆಗಿದೆ. ಚೆನ್ನೈನಲ್ಲಿ ಒಂದು ಕೆಜಿ ಬೆಳ್ಳಿ ದರ ರೂ. 3,18,000 ಆಗಿದ್ದರೆ, ದೆಹಲಿ, ಮುಂಬೈ, ಕೊಲ್ಕತ್ತದಲ್ಲೂ ರೂ. 3,05,000 ಆಗಿದೆ. 10 ಗ್ರಾಂ ಚಿನ್ನದ ಬೆಲೆಯಲ್ಲಿ 1,750 ರೂ ಏರಿಕೆಯಾಗಿದೆ. ಪ್ರತಿ ಗ್ರಾಂಗೆ 175ರೂ ಏರಿಕೆಯಾಗಿದೆ. 10 ಗ್ರಾಂ 22 ಕ್ಯಾರಟ್ ಚಿನ್ನದ ಬೆಲೆ 1,33,550 ರೂ. ಇದೆ. 24 ಕ್ಯಾರಟ್ ನ ಅಪರಂಜಿ ಚಿನ್ನದ ಬೆಲೆ 1,45,690 ರೂ.ಗೆ ಏರಿಕೆ ಆಗಿದೆ.

ಜೆಡಿಎಸ್ ನಲ್ಲೇ ಇರುವೆ: ಜಿಟಿಡಿ

ಮೈಸೂರು: ಜೆಡಿಎಸ್ ಟಿಕೆಟ್ ನಿಂದ ನಾನು ಗೆದ್ದಿದ್ದೇನೆ. ಈಗ ಇಲ್ಲೇ ಇದ್ದೇನೆ. ಮುಂದೆಯೂ ಇರುತ್ತೇನೆಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಯಾರಿಗೂ ದ್ರೋಹ ಮಾಡುವ ಬುದ್ಧಿ ನನಗಿಲ್ಲ. ಸಿದ್ದರಾಮಯ್ಯ ಅವರು ಕಾಂಗ್ರೆಸ್‌ಗೆ ಹೋದ ಮೇಲೆ ಮೈಸೂರು ಭಾಗದಲ್ಲಿ ಜೆಡಿಎಸ್ ಕಟ್ಟಿದ್ದೇನೆ. ವಿವಿಧ ಹುದ್ದೆಗಳಲ್ಲಿ ಪಕ್ಷಕ್ಕಾಗಿ ದುಡಿದಿದ್ದೇನೆ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಲೆಂದು ಪಕ್ಷ ಕಟ್ಟಿದ್ದೇನೆ. ವರಿಷ್ಠರ ಬಗ್ಗೆ ಯಾವತ್ತೂ ಟೀಕೆ ಮಾಡಿಲ್ಲ ಎಂದು ಹೇಳಿದರು.



ಬೆಂಗಳೂರಿನಲ್ಲಿ ಪಕ್ಷದ ವರಿಷ್ಠರು ನನ್ನ ಗೈರುಹಾಜರಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಸಭೆ ನಡೆಸಿದ್ದಾರೆ ಎಂಬ ಬಗ್ಗೆ ಮಾಧ್ಯಮ ಪ್ರತಿನಿಧಿಗಳಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ಚುನಾವಣ್ೆಗ ಇನ್ನೂ ಎರ ಪುಟ 2ಕ್ಕೆ

ಸ್ಥಳೀಯ ಸಂಸ್ಥೆಗೆ ಬ್ಯಾಲೆಟ್ ಪೇಪರ್

ರಾಜ್ಯ ಚುನಾವಣಾ ಆಯೋಗ ನಿರ್ಧಾರ । ಆಯುಕ್ತ ಸಂಗ್ರೇಶ್ ಘೋಷಣೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ), ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಸೇರಿದಂತೆ ರಾಜ್ಯದಲ್ಲಿ ಎಲ್ಲಾ ಸ್ಥಳೀಯ ಚುನಾವಣೆಗಳಲ್ಲಿ ಬ್ಯಾಲೆಟ್ ಪೇಪರ್ ಬಳಸಲಾಗುವುದು ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಸಂಗ್ರೇಶ್ ತಿಳಿಸಿದರು.

ದೇಶಾದ್ಯಂತ ವೋಟ್ ಚೋರಿ ಕುರಿತು ಕಾಂಗ್ರೆಸ್ ನಿರಂತರ ಆರೋಪ ಮಾಡುತ್ತಿರುವ ಬೆನ್ನಲ್ಲೇ ಇವಿಎಂ ಬದಲಿಗೆ ಬ್ಯಾಲೆಟ್ ಪೇಪರ್‌ಗಳ ಮೂಲಕ ನಡೆಸಲು ರಾಜ್ಯ ಚುನಾವಣಾ ಆಯೋಗ ನಿರ್ಧರಿಸಿದೆ.

ಜಿಬಿಎ ವ್ಯಾಪ್ತಿಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಕರಡು ಮತದಾರರ ಪಟ್ಟಿ ಬಿಡುಗಡೆ ಮಾಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಗೆ

ಮಾತ್ರ ಇವಿಎಂ ಮಾಡಿದ್ದೇವೆ. ಬ್ಯಾಲೆಟ್ ಪೇಪರ್‌ನಲ್ಲಿ ಮಾಡಬಾರದು ಅಂತೇನಿಲ್ಲ. ಮುಂಬರುವ ಜಿಬಿಎ ಎಲೆಕ್ಷನ್, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಕೂಡ ಬ್ಯಾಲೆಟ್ ಪೇಪರ್‌ನಲ್ಲೇ ನಡೆಯಲಿದೆ ಎಂದು ಅವರು ತಿಳಿಸಿದರು.

ಮೇ ಅಥವಾ ಜೂನ್ ನಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆ ಮಾಡಬೇಕೆಂದು ಇದ್ದೇವೆ. ಡಿ ಲಿಮಿಟೇಷನ್ ರಿಪೋರ್ಟ್ ಅನ್ನು ಸರ್ಕಾರ ನಮಗೆ ಪುಟ 2ಕ್ಕೆ

ಆಯೋಗಕ್ಕೆ ವಿವೇಚನಾ ಅಧಿಕಾರ

ಬೆಂಗಳೂರು: ಮತಪತ್ರಗಳನ್ನು ಬಳಸುವ ನಿರ್ಧಾರವು ಸರ್ಕಾರದ ಒತ್ತಡದಿಂದ ಆಗಿದೆಯಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯ ಚುನಾವಣೆಯು ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿದೆ. ಕಾನೂನು ಬ್ಯಾಲೆಟ್ ಪೇಪರ್‌ಗಳು ಅಥವಾ ಇವಿಎಂಗಳನ್ನು ಬಳಸಿಕೊಂಡು ಚುನಾವಣೆಗಳನ್ನು ನಡೆಸಲು ಅವಕಾಶ ನೀಡಿದೆ ಬ್ಯಾಲೆಟ್ ಪೇಪರ್ ಬಳಸಬಾರದು ಎಂದು ಸುಪ್ರೀಂ ಕೋರ್ಟ್ ಎಲ್ಲಿಯೂ ಹೇಳಿಲ್ಲ. ಅಲ್ಲದೆ, ಆಯೋಗವು ನಿರ್ಧರಿಸುವ ಪುಟ 2ಕ್ಕೆ

ಮೈಸೂರಿನ ಲಾಡ್ಜ್‌ನಲ್ಲಿ ಅರಣ್ಯಾಧಿಕಾರಿ ಶವ ಪತ್ತೆ

ಮೈಸೂರು: ಟಿ.ನರಸೀಪುರ ಸಾಮಾಜಿಕ ಅರಣ್ಯ ವಲಯದ ರೇಂಜ್ ಫಾರೆಸ್ಟ್ ಅಧಿಕಾರಿ (ಆರ್‌ಎಫ್‌ಒ) ಕಾಂತರಾಜ್ ಚೌಹಾಣ್ ಅವರ ಮೃತದೇಹ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಅನುಮಾನಾಸ್ಪದವಾಗಿಪತ್ತೆಯಾಗಿದೆ. ಸಬ್ ಅರ್ಬನ್ ಬಸ್ ನಿಲ್ದಾಣ ಸಮೀಪದ ಯುವರಾಜ್ ಗೆಲಾಕ್ಸಿ ಲಾಡ್ಜ್ ರೂಮಿನಲ್ಲಿ ಶವ ಪತ್ತೆಯಾಗಿದೆ.

ವಿಜಯಪುರ ಮೂಲದ ಕಾಂತರಾಜ್ 15 ದಿನಗಳ ಹಿಂದೆ ಟಿ.ನರಸೀಪುರಕ್ಕೆ ವರ್ಗಾವಣೆಯಾಗಿದ್ದರು. ಸ್ನೇಹಿತ ಮಲ್ಲನಗೌಡ ಪಾಟೀಲ್ ಜೊತೆಗೆ ಭಾನುವಾರ ಮಧ್ಯಾಹ್ನ ಯುವರಾಜ್ ಅವರು ಗೆಲಾಕ್ಸಿ ಲಾಡ್ಜಲ್ಲಿ ರೂಮ್ ಬುಕ್ ಮಾಡಿದ್ದರು. ಇಂದು ಅದೇ ಲಾಡ್ಜ್ನ ಕುಮರನ್ ಜುವೆಲರ್ಸ್ ಹಿಂಭಾಗದ ಕಾರಿಡಾರ್‌ನಲ್ಲಿ ಶವ ಪತ್ತೆಯಾಗಿದೆ.

ಶವ ಪತ್ತೆಯಾದ ಬೆನ್ನಲ್ಲೇ ಜೊತೆಗಿದ್ದ ಗಂಗಾವತಿ ಮೂಲದ ಮಲ್ಲನಗೌಡ ಪಾಟೀಲ್ ಸ್ಥಳದಿಂದ ಪರಾರಿ ಆಗಿದ್ದಾರೆ. ಸ್ನೇಹಿತನ ನಡೆ ತೀವ್ರ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಲಷ್ಕರ್ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಲೋಲಾಕ್ಷಿ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಶವವನ್ನ ಮರಣೋತ್ತರ ಪರೀಕ್ಷೆಗೆ ಕಳಿಸಿದ್ದಾರೆ. ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಚಿನ್ನದಂಗಡಿ ದರೋಡೆ: ಇಬ್ಬರ ಬಂಧನ

ದರೋಡೆ ಆಗಿದ್ದು 8.34 ಕೆಜಿ, ವಶಕ್ಕೆ ಪಡೆದಿದ್ದು 12,5 ಗ್ರಾಂ ಚಿನ್ನಾಭರಣ

ಮೈಸೂರು: ಹುಣಸೂರಿನಲ್ಲಿ ನಡೆದಿದ್ದ ಚಿನ್ನದ ಅಂಗಡಿ ದರೋಡೆ ಪ್ರಕರಣದಲ್ಲಿ ಪೊಲೀಸರು ಬಿಹಾರ ರಾಜ್ಯದಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಉಳಿದ 10ಕ್ಕೂ ಹೆಚ್ಚು ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ.

ನಗರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಹುಣಸೂರಿನ ದರೋಡೆ ಪ್ರಕರಣದ ಆರೋಪಿಗಳು ಕೃತ್ಯ ನಡೆಸುವಾಗ ಮೊಬೈಲ್ ಬಳಸದೆ ಪೊಲೀಸರಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದರು. ಮುಖಚರ್ಯೆ ಗುರುತಿಸಿ ನಟೋರಿಯಸ್ ಗ್ಯಾಂಗ್ ಇಬ್ಬರನ್ನು ಬಂಧಿಸಿದ್ದೇವೆ ಎಂದು ಹೇಳಿದರು.

ಪ್ರಕರಣದ ತನಿಖೆ ಆರಂಭಿಸಿದಾಗ ಐವರು ಬಂದು ದರೋಡೆ ನಡೆಸಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ದೃಶ್ಯಗಳಲ್ಲಿ ಮೂವರ ಮುಖ ಕಾಣಿಸುತ್ತಿತ್ತು. ಅವರ ಮುಖಚಹರೆ ಹಾಗೂ ನಮ್ಮಲ್ಲಿರುವ ತಂತ್ರಜ್ಞಾನ

ಬಳಸಿದಾಗ ಬಿಹಾರ ರಾಜ್ಯದವರೆಂದು ತಿಳಿಯಿತು. ಅಲ್ಲಿನ ಪೊಲೀಸರನ್ನು ಸಂಪರ್ಕಿಸಿದಾಗ, ಆರೋಪಿಗಳ ಗುರುತು ಪತ್ತೆಹಚ್ಚಿದರು. ಎಎಸ್‌ಪಿ ಎಲ್.ನಾಗೇಶ್ ನೇತೃತ್ವದಲ್ಲಿ ಐದು ತಂಡ ರಚಿಸಿ ವಿವಿಧ ಜಿಲ್ಲೆಗಳಿಗೆ ಕಳಿಸಿಕೊಡಲಾಯಿತು ಎಂದು ಮಾಹಿತಿ ನೀಡಿದರು. ಪುಟ 2ಕ್ಕೆ

12.5 ಗ್ರಾಂ ಮಾತ್ರ ಪತ್ತೆ

ಹುಣಸೂರಿನ ಸ್ಕೈ ಗೋಲ್ಡ್ ಆಂಡ್ ಡೈಮಂಡ್ ಮಳಿಗೆಯ ಸಿಬ್ಬಂದಿಗಳಿಗೆ ಪಿಸ್ತೂಲ್ ತೋರಿಸಿ ಬೆದರಿಸಿ, 450 ವಿವಿಧ ಮಾದರಿಯ 10 ಕೋಟಿ ಮೌಲ್ಯದ 8.34 ಕೆಜಿ ಚಿನ್ನಾಭರಣ ದೋಚಲಾಗಿತ್ತು. ಆದರೆ ಇದುವರೆಗೆ ಆರೋಪಿಗಳಿಂದ 12.5 ಗ್ರಾಂ ಚಿನ್ನಾಭರಣ ಹಾಗೂ 92 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ. ಸ್ಕೈ ಗೋಲ್ಡ್ ಚಿಹ್ನೆ ಇರುವ ಒಂದು ಬಾಕ್ಸ್, ರಾಯಲ್ ಎನ್‌ಫೀಲ್ಡ್ ಬೈಕ್ ವಶಕ್ಕೆ ಪಡೆಯಲಾಗಿದೆ. ಚಿನ್ನಾಭರಣ ದೋಚಿದ ಆರೋಪಿಗಳನ್ನು ಬಂಧಿಸುವುದರೊಂದಿಗೆ, 8 ಕೆ.ಜಿ ಆಭರಣ ಎಲ್ಲಿ ಹೋಗಿದೆ ಎಂಬುದನ್ನು ಪತ್ತೆಹಚ್ಚಿ ವಶಕ್ಕೆ ಪಡೆಯಲು ಆದ್ಯತೆ ನೀಡಲಾಗಿದೆ ಎಂದು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಸಿದ್ದು ಬಜೆಟ್ ಮಂಡನೆ ಖಚಿತ

ಬೆಂಗಳೂರು: ಈ ವರ್ಷವೂ ಸಿಎಂ ಸಿದ್ದರಾಮಯ್ಯ ನೂರಕ್ಕೆ ನೂರರಷ್ಟು ಬಜೆಟ್ ಮಂಡನೆ ಮಾಡ್ತಾರೆ ಎಂದು ಸಚಿವ ಬೋಸರಾಜು ಅಭಿಪ್ರಾಯಪಟ್ಟರು.

ವಿಕಾಸಸೌಧದಲ್ಲಿ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಗೊಂದಲ ವಿಚಾರಕ್ಕೆ ಸೋಮವಾರ ಪ್ರತಿಕ್ರಿಯೆ ನೀಡಿದ ಅವರು, ನಾಯಕತ್ವ ಬದಲಾವಣೆ ಅನ್ನೋದು ಮುಗಿದ ಅಧ್ಯಾಯ ಅಂತಲ್ಲ. ಸಿಎಂ, ಡಿಸಿಎಂ ಕೂಡ ಕ್ಲಿಯರ್ ಆಗಿ ಹೇಳಿದ್ದಾರೆ. ಹೈಕಮಾಂಡ್ ನಿರ್ಧಾರಕ್ಕೆ ಬದ್ಧ ಅಂದಿದ್ದಾರೆ. ಈಗ ಬದಲಾವಣೆ ಪರಿಸ್ಥಿತಿ ಇಲ್ಲ, ಅಂತಹ ಪರಿಸ್ಥಿತಿ ಬಂದರೆ ಹೈಕಮಾಂಡ್ ತೀರ್ಮಾನ ಮಾಡಲಿದೆ. ಬೆಳಿಗ್ಗೆಯಿಂದ ಸಂಜೆ ತನಕ ಬಿಜೆಪಿಯವರು ಬೊಗಳುತ್ತಿರುತ್ತಾರೆ. ಸುಮ್ಮನೆ ಸುಳ್ಳು ಹೇಳುವುದಲ್ಲ. ಹೊಸದಾಗಿ ಬಂದಿರುವ ಶಾಸಕರು ಉತ್ಸಾಹದಲ್ಲಿ ಹೇಳ್ತಾರೆ. ನೂರಕ್ಕೆ ನೂರು ಪರ್ಸೆಂಟ್ ಸಿಎಂ ಬಜೆಟ್ ಮಂಡಿಸುತ್ತಾರೆ ಎಂದು ಹೇಳಿದರು.

ಶ್ರೀರಾಮುಲು ವಿರುದ್ಧ ಕೇಸ್ ದಾಖಲು ಮಾಡಿರುವ ವಿಚಾರವಾಗಿ ಮಾತನಾಡಿ, ಸರ್ಕಾರ ಮಾಡುವ ಕೆಲಸಗಳನ್ನ ವಿಮರ್ಶೆ ಮಾಡುವುದು ಅವರ ಕೆಲಸ. ರಾಮುಲು ಮಂತ್ರಿಯಾಗಿ ಕೆಲಸ ಮಾಡಿದವರು. ಏನ್ ವಿಷಯದ ಬಗ್ಗೆ ಮಾತನಾಡಬೇಕು ಎಂಬುದು ತಿಳಿದು ಮಾತನಾಡಬೇಕು. ಹೀಗೆ ಮಾತಾಡಿದರೆ ಆ ಹುಡುಗಿಯ ಕುಟುಂಬದ ಪರಿಸ್ಥಿತಿ ಏನಾಬೇಕು. ಕಾನೂನು ಪ್ರಕಾರ ಪೊಲೀಸರು ಎಫ್‌ಐಆರ್ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಅಬಕಾರಿ ಇಲಾಖೆ ಭ್ರಷ್ಟಾಚಾರ ಕೇಸ್ ವಿಚಾರವಾಗಿ ಮಾತನಾಡಿ, ಬಿಜೆಪಿಯವರು ಆರೋಪ ಮಾಡ್ತಾರೆ. ಜನರನ್ನು ದಾರಿತಪ್ಪಿಸುವ ಪುಟ 2ಕ್ಕೆ

ಸ್ಥಳೀಯ ಸಂಸ್ಥೆಗೆ ಬ್ಯಾಲೆಟ್ ಪೇಪರ್

ಸಲ್ಲಿಸಬೇಕಿದೆ. ಜನವರಿ 30ಕ್ಕೆ ಕೋರ್ಟ್ ಅಲ್ಲಿ ಒಂದು ಪಿಟಿಷನ್ ಇದೆ. ಅದು ಆದ ಬಳಿಕ ತೀರ್ಮಾನ ಆಗಲಿದೆ. ಗ್ರಾಮ ಪಂಚಾಯ್ತಿ ಚುನಾವಣೆ ಕೂಡ ಮಾಡಬೇಕು. ಅದೂ ಬ್ಯಾಲೆಟ್ ಪೇಪರ್‌ನಲ್ಲೇ ಇರಲಿದೆ. ಸಾಕಷ್ಟು ಜನ ಬ್ಯಾಲೆಟ್‌ನಲ್ಲಿ ಮಾಡಿ, ಇವಿಎಂನಲ್ಲಿ ಬೇಡ ಅಂತ ಪತ್ರ ಬರೆದಿದ್ದಾರೆ. ಬ್ಯಾಲೆಟ್ ಸೂಕ್ತ ಅನ್ನಿಸಿದೆ ಎಂದು ಆಯುಕ್ತರು ವಿವರಿಸಿದರು. ಐದು ಮಹಾನಗರ ಪಾಲಿಕೆಗಳ ವಾರ್ಡ್ವಾರು ಕರಡು ಮತದಾರರ ಪಟ್ಟಿಯಲ್ಲಿ ಒಟ್ಟು 88,91,411 ಮತದಾರರಿದ್ದಾರೆ ಎಂದು ವಿಶೇಷ ಆಯುಕ್ತ ಆರ್. ರಾಮಚಂದ್ರನ್ ತಿಳಿಸಿದರು. 2025ರ ಅಕ್ಟೋಬರ್ 1ರ ಆಧಾರದ ಮೇಲೆ ಬೆಂಗಳೂರು ಮಧ್ಯ, ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮದಾದ್ಯಂತ 369 ವಾರ್ಡ್‌ಗಳಿವೆ. 2026ರ ಜನವರಿ 20ರಿಂದ ಫೆಬ್ರವರಿ 3ರವರೆಗೆ ಪರಿಶೀಲನೆ ನಡೆಯಲಿದೆ. ಈ ಅವಧಿಯಲ್ಲಿ ಮತದಾರರ ಪಟ್ಟಿಯ ಕುರಿತು ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಜನರಿಗೆ ಅವಕಾಶ ನೀಡಲಾಗುವುದು. ಮತದಾರರ ಪಟ್ಟಿಯನ್ನು ಮಾರ್ಚ್ 16ರಂದು ಪ್ರಕಟಿಸಲಾಗುವುದು. ಒಟ್ಟು 369 ವಾರ್ಡ್‌ಗಳಲ್ಲಿ 8,044 ಮತಗಟ್ಟೆಗಳಿರುತ್ತವೆ ಎಂದು ಅವರು ಹೇಳಿದರು.

140 ಶಾಸಕರ ಬೆಂಬಲ: ಡಿಕೆಶಿ

ಸಾರ್ವಜನಿಕವಾಗಿ ಚರ್ಚೆ ಮಾಡುವ ಅಗತ್ಯವಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ಸಿಎಂ ಸಿದ್ದರಾಮಯ್ಯ ಸೇರಿದಂತೆ 140 ಶಾಸಕರು ನನ್ನ ಬೆಂಬಲಕ್ಕಿದ್ದಾರೆ. ನಾನು ಹಾಗೂ ಸಿಎಂ ಏನು ಮಾತನಾಡಿದ್ದೇವೆ ಎಂದು ನಿಮಗೆ ಗೊತ್ತಿದೆ? ಹೈಕಮಾಂಡ್ ಸಮ್ಮುಖದಲ್ಲಿ ಏನು ಮಾತನಾಡಿದ್ದೇವೆ. ಎಲ್ಲ ಕೂತು ಏನು ತೀರ್ಮಾನ ಮಾಡಿದ್ದೇವೆ ಎಂದು ನಮಗೆ ಗೊತ್ತಿದೆ ಎಂದು ತಿಳಿಸಿದರು.

ಭೇಟಿಗೆ ಪರಂ ನಿರಾಕರಣೆ

ರಾಮಚಂದ್ರ ರಾವ್ ಹೋಗುವ ಮುನ್ನವೇ ಪರಮೇಶ್ವರ್ ಅವರು ಭೇಟಿಗೆ ನಿರಾಕರಿಸಿದ್ದಾರೆ. ಸಿಬ್ಬಂದಿ ಮೂಲಕ ಭೇಟಿ ಆಗುವುದಿಲ್ಲ ಎಂದು ಪರಮೇಶ್ವರ್ ತಿಳಿಸಿದ್ದರು. ಹೀಗಾಗಿ 5 ನಿಮಿಷದಲ್ಲೇ ರಾಮಚಂದ್ರ ರಾವ್ ಪರಮೇಶ್ವರ್ ಕಚೇರಿಯಿಂದ ವಾಪಸ್ ಹೋದರು.

8 ವರ್ಷದ ಹಿಂದಿನ ವಿಡಿಯೋ

ನಾನು ಕೂಡ ಇಂದು ಆ ವಿಡಿಯೋವನ್ನು ನೋಡಿದ್ದೇನೆ. ಅದು ಸಂಪೂರ್ಣವಾಗಿ ಕೃತಕ ಬುದ್ಧಿಮತ್ತೆ (ಎಐ) ಬಳಸಿ ಸೃಷ್ಟಿಸಿದ ಅಥವಾ ಎಡಿಟ್ ಮಾಡಿದ ವಿಡಿಯೋ ಆಗಿದೆ. ನನ್ನ ವೃತ್ತಿಜೀವನಕ್ಕೆ ಕಪ್ಪುಚುಕ್ಕೆ ಹಚ್ಚಲು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಈ ರೀತಿಯ ಷಡ್ಯಂತ್ರ ರೂಪಿಸಿವೆ ಎಂದು ಸಮರ್ಥಿಸಿಕೊಂಡಿದ್ದಾರೆ. ರಾಮಚಂದ್ರ ರಾವ್ 4-5 ತಿಂಗಳಲ್ಲಿ ಪೊಲೀಸ್ ಇಲಾಖೆಯಿಂದ ನಿವೃತ್ತರಾಗಲಿದ್ದರು. ನಿವೃತ್ತರಾಗುವ ಸಮಯದಲ್ಲೇ ಅವರು ರಹಸ್ಯ ಕ್ಯಾಮೆರಾದ ಮುಂದೆ ಬೆತ್ತಲಾಗಿದ್ದಾರೆ. ರಾಮಚಂದ್ರರಾ ವ್ ಅವರ ರಾಸಲೀಲೆ ವಿಡಿಯೋ ಬಿಡುಗಡೆ ಆಗಿರುವ ಹಿನ್ನೆಲೆಯಲ್ಲಿ ಸರ್ಕಾರ ಯಾವ ರೀತಿಯ ಕ್ರಮವನ್ನು ಕೈಗೊಳ್ಳಲಿದೆ ಎಂಬ ಕುತೂಹಲ ಹೆಚ್ಚಾಗಿದೆ. ಈ ಹಿಂದೆ ಚಿನ್ನ ಕಳ್ಳ ಸಾಗಾಣಿಕೆಯ ಪ್ರಕರಣದಲ್ಲಿ ಪುತ್ರಿ ರನ್ಯ ರಾವ್‌ಗೆ ಶಿಷ್ಟಾಚಾರ ಉಲ್ಲಂಘಿಸಿ ವಿಮಾನ ನಿಲ್ದಾಣದಲ್ಲಿ ವಿಐಪಿ ಟ್ರೀಟ್‌ಮೆಂಟ್ ನೀಡಿದ ಆರೋಪದಲ್ಲಿ ಸುದ್ದಿಯಾಗಿದ್ದರು.

ವರದಿ ನೀಡಲು ಸಿಎಂ ಸೂಚನೆ

ರಾಮಚಂದ್ರರಾವ್ ಕರ್ತವ್ಯದಲ್ಲಿರುವಾಗ ತನ್ನ ಕಚೇರಿಯ ಒಳಗಡೆಯೇ ಮಹಿಳೆಯರ ಜೊತೆಗಿನ ರಾಸಲೀಲೆ ವಿಡಿಯೋ ವೈರಲ್ ಆದ ಬೆನ್ನಲ್ಲೇ ಪ್ರಾಥಮಿಕ ತನಿಖೆ ನಡೆಸಿ ವರದಿ ನೀಡುವಂತೆ ಗೃಹ ಇಲಾಖೆಗೆ ಸೂಚಿಸಿದ್ದಾರೆ. ರನ್ಯಾರಾವ್ ಚಿನ್ನ ಕಳ್ಳ ಸಾಗಾಣೆ ಪ್ರಕರಣದಲ್ಲೂ ರಾಮಚಂದ್ರರಾವ್ ಹೆಸರು ದೊಡ್ಡ ಮಟ್ಟದಲ್ಲಿ ಕೇಳಿ ಬಂದಿತ್ತು. ಆಗ ಸರ್ಕಾರಕ್ಕೆ ಮುಜುಗರ ಆಗಿತ್ತು.ಈಗ ರಾಸಲೀಲೆ ವಿಡಿಯೋ ವೈರಲ್ ಆಗುತ್ತಲೇ ಮತ್ತೆ ಸರ್ಕಾರಕ್ಕೆ ಮುಜುಗರವಾಗಿದೆ. ಈ ಹಿನ್ನಲೆಯಲ್ಲಿ ವರದಿ ನೀಡುವಂತೆ ಗೃಹ ಇಲಾಖೆಗೆ ಸಿಎಂ ಸೂಚನೆ ನೀಡಿದ್ದಾರೆ.

ಸಿದ್ದು ಬಜೆಟ್ ಮಂಡನೆ ಖಚಿತ

ಕೆಲಸವನ್ನು ಬಿಜೆಪಿಯವರು ಮಾಡುತ್ತಿದ್ದಾರೆ. ಅಧಿಕಾರಿಗಳು ತಿಮ್ಮಾಪುರ ಅವರ ಹೆಸರನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ತಿಮ್ಮಾಪುರ್ ಪರ ಬ್ಯಾಟಿಂಗ್ ಮಾಡಿದ್ದಾರೆ.

ಡಿಜಿಪಿ 'ರಾಮ'ಚಂದ್ರನ ರಾಸಲೀಲೆ

ಮಹಿಳೆಯನ್ನು ಅಪ್ಪಿಕೊಳ್ಳುವ ವಿಡಿಯೋ ಸಾರ್ವಜನಿಕ ವಲಯದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ರಾಜ್ಯದ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಉನ್ನತ ಅಧಿಕಾರಿ ಇಂತಹ ಕೃತ್ಯದಲ್ಲಿ ಭಾಗಿಯಾಗಿರುವುದು ಪೊಲೀಸ್ ಇಲಾಖೆಗೆ ತೀವ್ರ ಮುಜುಗರ ತಂದಿದೆ. ಈ ವರದಿಗಳು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದಂತೆ, ಪ್ರತಿಪಕ್ಷಗಳು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿವೆ. ಈ ಅಧಿಕಾರಿಯ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿವೆ.ಈ ಹಿಂದೆ ಗೋಲ್ಡ್ ಸ್ಮಗಲ್ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ನಟಿ ರನ್ಯಾರಾವ್ ತಂದೆ ಈ ಡಿಜಿಪಿ ರಾಮಚಂದ್ರರಾವ್. ರನ್ಯಾರಾವ್ ಪ್ರಕರಣಕ್ಕಿಂತ ಮೊದಲೇ ಈ ರಾಸಲೀಲೆ ನಡೆದಿದೆ ಎನ್ನಲಾಗಿದೆ.

ಆಯೋಗಕ್ಕೆ ವಿವೇಚನಾ ಅಧಿಕಾರ

ವಿವೇಚನೆಯನ್ನು ಹೊಂದಿದೆ ಎಂದು ಚುನಾವಣಾ ಆಯೋಗದ ಆಯುಕ್ತ ಸಂಗ್ರೇಶಿ ಹೇಳಿದರು.

ಶಾಲಾ ಬಸ್ ಡಿಕ್ಕಿ: ತಾಯಿ-ಮಗ ಸಾವು

ಬಸ್ ಚಾಲಕ ಸ್ಥಳದಿಂದ ಪರಾರಿ ಆಗಿದ್ದಾನೆ. ಚಾಲಕ ಸುನೀಲ್‌ಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ನನ್ನ ವಿರುದ್ಧ ದೊಡ್ಡ ಕುತಂತ್ರ: ಅಬಕಾರಿ ಸಚಿವ ತಿಮ್ಮಾಪುರ

ಕೇಳಿಲ್ಲ. ಕೇಳುವ ತಪ್ಪನ್ನ ಮಾಡಿಲ್ಲ. ನನ್ನ ತೇಜೋವಧೆ ಮಾಡುವ ಕೆಲಸ ನಡೆದಿದೆ. ಕಾನೂನು ಕ್ರಮಕೈಗೊಳ್ಳಲು ಅವಕಾಶ ಕೊಡಿ ಎಂದು ಸಿಎಂ ಅವರಿಗೆ ಕೇಳುತ್ತೇನೆ. ಈ ಪ್ರಕರಣದಲ್ಲಿ ನನ್ನದು ಯಾವುದೇ ರೀತಿಯ ತಪ್ಪಿಲ್ಲ ಎಂದು ತಿಳಿಸಿದರು.

ಜೆಡಿಎಸ್ ನಲ್ಲೇ ಇರುವೆ: ಜಿಟಿಡಿ

ಡೂವರೆ ವರ್ಷ ಇದೆ. ಆಗ ಆ ಕುರಿತು ಚರ್ಚೆ ಮಾಡೋಣ ಎಂದರು. ಪಕ್ಷದ ಕಾರ್ಯಕರ್ತರಿಗೆ ಯಾವುದೇ ಆತಂಕ ಬೇಡ. ಪಕ್ಷದಿಂದ ಒಂದು ಹೆಜ್ಜೆಯನ್ನೂ ಹೊರಗಿಡುವುದಿಲ್ಲ. ನನಗೆ ಕೆಲ ವಿಚಾರದಲ್ಲಿ ನೋವಾಗಿದೆ. ಅದು ಪಕ್ಷದ ನಾಯಕರಿಗೂ ಗೊತ್ತು. ನೋವಾಯಿತೆಂದು ಪಕ್ಷದಿಂದ ಹೊರ ಹೋಗಿಲ್ಲ. ಒಳ್ಳೆಯ ಸಮಯ ಬರುತ್ತದೆ, ಎಲ್ಲವೂ ಒಳ್ಳೆಯದಾಗುತ್ತದೆ ಎಂದು ಹೇಳಿದರು.

ಇಬ್ಬರ ಬಂಧನ

ಪತ್ತೆಯಾಗಿರುವ ಪಂಕಜ್ 27 ಪ್ರಕರಣ ಹಾಗೂ ರಿಷಿಕೇಶ್ ಅಲಿಯಾಸ್ ಚೋಟು 4 ಕೊಲೆ ಹಾಗೂ ದರೋಡೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಪ್ರಕರಣದಲ್ಲಿ ವಿವಿಧ ರಾಜ್ಯಗಳ ಆರೋಪಿಗಳಿರುವ ಸಾಧ್ಯತೆಯಿದೆ. ಆದರೆ ಸ್ಥಳೀಯರು ಯಾರೂ ಭಾಗಿಯಾಗಿಲ್ಲ ಎಂದು ಎಸ್‌ಪಿ ತಿಳಿಸಿದರು. ಇದು ವೃತ್ತಿಪರ ದರೋಡೆಕೋರರು ನಡೆಸಿದ ಕೃತ್ಯ. ಕರ್ನಾಟಕದಲ್ಲಿ ಮೊದಲ ಬಾರಿ ದರೋಡೆ ನಡೆಸಿದ್ದಾಗಿ ಮಾಹಿತಿ ಲಭ್ಯವಾಗಿದೆ. ಇದಕ್ಕಾಗಿ ಕೊಡಗು, ಹಾಸನ, ಮೈಸೂರು ಭಾಗಗಳಲ್ಲಿ ಹುಡುಕಾಟ ನಡೆಸಿದ್ದಾರೆ. ಕೊನೆಗೆ ಹುಣಸೂರಿನ ಬೈಪಾಸ್ ರಸ್ತೆಯಲ್ಲಿರುವ ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಚಿನ್ನಾಭರಣ ಮಳಿಗೆ ಗುರುತು ಮಾಡಿಕೊಂಡಿದ್ದಾರೆ ಎಂದರು. ಕೃತ್ಯಕ್ಕೆ ಮೊದಲು ಹುಣಸೂರು, ಪಿರಿಯಾಪಟ್ಟಣದ ಲಾಡ್ಜ್‌ಗಳಲ್ಲಿ ವಾಸ್ತವ್ಯ ಮಾಡಿದ್ದು, ಅಲ್ಲಿ ನಕಲಿ ಆಧಾರ್ ಕಾರ್ಡ್ ಹಾಗೂ ಇನ್ನಾರದ್ದೂ ಮೊಬೈಲ್ ಸಂಖ್ಯೆ ನಮೋದಿಸಿದ್ದಾರೆ. ಕೃತ್ಯ ನಡೆಸಿದ ಬಳಿಕ ಜೊತೆಗೆ ತೆರಳದೆ, ವಿವಿಧ ಕಡೆಗೆ ತೆರಳಿದ್ದಾರೆ. ಇದು ಆರಂಭಿಕ ಕೆಲಸವಾಗಿದ್ದು, ಈ ತಂಡವನ್ನು ಪತ್ತೆಹಚ್ಚಿದ ಬಳಿಕ ಯಾಕಾಗಿ ಹುಣಸೂರನ್ನು ಆಯ್ಕೆ ಮಾಡಿದರು, ಯೋಜನೆ ಹೇಗಿತ್ತು ಎಂಬುದು ತಿಳಿಯಲಿದೆ ಎಂದು ಹೇಳಿದರು.

ಪ್ರಸಾದ್ ಯೋಜನೆ ಕಾಮಗಾರಿ ಅಡ್ಡಿಗೆ ಯತ್ನ: ಪ್ರತಿಭಟನೆ

ಮೈಸೂರು: ಚಾಮುಂಡಿ ಬೆಟ್ಟದ ದೇವಾಲಯದ ಸಮೀಪದಲ್ಲಿ ಪ್ರಸಾದ್ ಯೋಜನೆ ಕಾಮಗಾರಿ ನಡೆಸುತ್ತಿರುವುದನ್ನು ಹಲವು ಸಂಘಟನೆಗಳು ವಿರೋಧಿಸ ಲಾರಂಭಿಸಿವೆ. ಈ ಹಿನ್ನೆಲೆಯಲ್ಲಿ ಸೋಮವಾರವೂ ಸಹ ಕಾಮಗಾರಿ ನಿಲ್ಲಿಸುವಂತೆ ಆಗ್ರಹಿಸಿದ ಹಿಂದೂಪರ ಸಂಘಟನೆ ಹಾಗೂ ಚಾಮುಂಡಿಬೆಟ್ಟದ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಚಾಮುಂಡಿಬೆಟ್ಟದ ದೇವಸ್ಥಾನದ ಪಕ್ಕದಲ್ಲಿ ಸೋಮವಾರ ಬೆಳಗ್ಗೆ ಕಾಮಗಾರಿ ಆರಂಭವಾಗುತ್ತಿದ್ದಂತೆ ಸ್ಥಳಕ್ಕೆ ಶ್ರೀರಂಗಪಟ್ಟಣ ಹನುಮ ಮಾಲದಾರಿಗಳ ಸಮಿತಿಯ ಪದಾಧಿಕಾರಿಗಳು ಸ್ಥಳಕ್ಕೆ ಧಾವಿಸಿ, ಕಾಮಗಾರಿಯನ್ನು ನಿಲ್ಲಿಸುವಂತೆ ಆಗ್ರಹಿಸಿದರು. ಈ ವೇಳೆ ಗ್ರಾಮಸ್ಥರು ಅವರೊಡನೆ ಸೇರಿಕೊಂಡು ಪ್ರತಿಭಟನೆ ಮಾಡಲು ಮುಂದಾದರು. ಈ ವೇಳೆ ಬಿಗಿ ಪೊಲೀಸ್ ಭದ್ರತೆಯಲ್ಲಿ ಕಾಮಗಾರಿ

ನಡೆಯುತ್ತಿದ್ದು, ಕಾಮಗಾರಿ ನಡೆಯುತ್ತಿರುವ ಸುತ್ತಲೂ ಬ್ಯಾರಿಗೇಡ್ ಅಳಡಿಸಿಲಾಗಿತ್ತು. ಈ ನಡುವೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ವಾಗ್ವಾದ ನಡೆದು, ನಂತರ ಚಾಮುಂಡಿ ಬೆಟ್ಟದ ಗ್ರಾಮ ಪಂಚಾಯಿತಿ ಕಚೇರಿ ಮುಂಭಾಗ ಕುಳಿತು ಜಿಲ್ಲಾಡಳಿತ ಮತ್ತು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿ ಸಿದರು. ಈ ವೇಳೆ ಶ್ರೀರಂಗಪಟ್ಟಣ ಹನುಮ ಮಾಲದಾರಿಗಳ ಸಮಿತಿಯ ವಿಭಾಗೀಯ ಸಂಚಾಲಕ ಲೋಹಿತ್ ಅರಸ್ ಮಾತನಾಡಿ, ದೇವಸ್ಥಾನದ 20 ಮೀಟರ್ ದೂರದಲ್ಲಿಯೇ ಭೂಮಿ ಅಗೆಯುತ್ತಿರುವು ದರಿಂದ ರಾಜಗೋಪುರಕ್ಕೆ ಹಾನಿಯಾಗುತ್ತದೆ. ಜನರ ವಿರೋಧದ ನಡುವೆಯೂ 200 ವರ್ಷ ಹಳೆಯ ಪುರಾತನ ಕಲ್ಲು, ಮಣ್ಣನ್ನು ತೆಗೆದಿದ್ದಾರೆ. ಇದ್ದರಿಂದ ರಾಜಗೋಪುರಗೆ ಹಾನಿಯಾಗುತ್ತದೆ ಎಂದು ಗ್ರಾಮಸ್ಥರು ಹೇಳಿದರೂ ಜಿಲ್ಲಾಡಳಿತ ಪ್ರಾಧಿಕಾರವನ್ನು ಕೇಳಿಸಿಕೊಳ್ಳುತ್ತಿಲ್ಲ ಎಂದರು. ಪ್ರಸಾದ್ ಯೋಜನೆಯಂತೆ ಕಾಮಗಾರಿ ನಡೆಯುತ್ತಿಲ್ಲ. ಪಾರಂಪರಿಕತೆಯನ್ನು ಉಳಿಸಿಕೊಂಡು ಕಾಮಗಾರಿ ಮಾಡುವಂತೆ ಯೋಜನೆಯಲ್ಲಿ ಈಗಾಗಲೇ ತಿಳಿಸಲಾಗಿದ್ದು, ಅದನ್ನು ಮರೆತು ಪಾರಂಪರಿಕತೆಗೆ ಧಕ್ಕೆಯಾಗುವಂತೆ ಕೆಲಸ ಮಾಡಲಾಗುತ್ತದೆ. ಕಾಮಗಾರಿ ಕೈಬಿಡುವರೆಗೂ ಹೋರಾಟ ಮುಂದುವರೆಯುತ್ತದೆ ಎಂದರು. ಪ್ರತಿಭಟನೆಯಲ್ಲಿ ಚಂದನ್, ಮನು, ರವಿ, ಶ್ರೀನಿವಾಸ್ ಇದ್ದರು.

ರಾಮನೂರಿನಲ್ಲಿ ರಾಮೋತ್ಸವ ಸಂಪನ್ನ

ವೈಭವನದ ಶ್ರೀನಿವಾಸ ಕಲ್ಯಾಣೋತ್ಸವ | ಮನರಂಜಿಸಿದ ಸಂಗೀತ ಸಂಜೆ | ಇಕ್ಬಾಲ್ ಕಲ್ಪನೆ ಸಾಕಾರ

ರಾಮನಗರ: ತ್ರೇತಾಯುಗದಲ್ಲಿ ಸೀತಾ, ಲಕ್ಷ್ಮಣ ಸಮೇತ ಶ್ರೀರಾಮನು ವನವಾಸದಲ್ಲಿದ್ದ ವೇಳೆ ರಾಮನಗರಕ್ಕೆ ವಾಸ್ತವ್ಯ ಇದ್ದರು ಎಂಬ ಸ್ಥಳೀಯ ಪುರಾಣ ತಿಳಿಸುತ್ತದೆ. ರಾಮನ ಪಾದಸ್ಪರ್ಶ ಮಾಡಿದ ರಾಮನೂರಿನಲ್ಲಿ ನಾಲ್ಕು ದಿನಗಳ ಕಾಲ ನಡೆದ ರಾಮೋತ್ಸವ ಸಮಾರಂಭಕ್ಕೆ ಶ್ರೀನಿವಾಸ ಕಲ್ಯಾಣ ಮತ್ತು ಕನ್ನಡ ಚಿತ್ರರಂಗದ ನಟ-ನಟಿಯರು ಭಾಗವಹಿಸಿದ್ದ ಸಂಗೀತ ಸಂಜೆಯ ಮೂಲಕ ತೆರೆಕಂಡಿತು.

ರಾಮನಗರದಲ್ಲಿ ಇದೇ ಮೊದಲ ಬಾರಿ ಅದ್ದೂರಿಯಾಗಿ ನಡೆದ ರಾಮೋತ್ಸವದಲ್ಲಿ ಗ್ರಾಮ ದೇವತೆಗಳ ಮೆರವಣಿಗೆ ಹಾಗೂ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದಂತಹ ಧಾರ್ಮಿಕ ಕಾರ್ಯಗಳು ಮಾತ್ರವಲ್ಲದೆ ಸಾಂಸ್ಕೃತಿಕ - ಕ್ರೀಡಾ ಚಟುವಟಿಕೆಗಳಿಗೂ ವೇದಿಕೆಯಾಯಿತು.

ಜನ ಮೆಚ್ಚಿದ ರಸಸಂಜೆ ಕಾರ್ಯಕ್ರಮ : ರಾಮೋತ್ಸವದ ಅಂಗವಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಕಿದ್ದ ಬೃಹತ್ ವೇದಿಕೆಯಲ್ಲಿ ನಡೆದ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಚಿತ್ರ ನಟರುಗಳಾದ ರಚಿತಾ ರಾಮ್, ದ್ರುವ ಸರ್ಜ, ರಾಗಿಣಿ ದ್ವಿವೇದಿ ಮುಂತಾದವರು ಭಾಗವಹಿಸಿದ್ದರು. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ನೇತೃತ್ವದಲ್ಲಿ ಸಂಗೀತ ಸಂಜೆ ನಡೆಯಿತು.

ಅಲ್ಪಸಂಖ್ಯಾತ ಮಹಿಳೆಯರಿಂದ ಮೆಹೆಂದಿ ರಂಗು

ರಾಮನೂರಿನಲ್ಲಿ ನಾಲ್ಕನೇ ದಿನವಾದ ಭಾನುವಾರ ರಾಮೋತ್ಸವದಲ್ಲಿ ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರು ಮೆಹೆಂದಿ (ಗೋರಂಟಿ) ಬಿಡಿಸುವ ಮೂಲಕ ರಂಗು ತುಂಬಿದರು. ರಾಮನಗರ ಟೌನಿನ ಟಿಪ್ಪುನಗರದ ಯೂನಿವರ್ಸಲ್ ಶಾಲೆ, ಮೆಹಬೂಬ್ ನಗರದ ಮರಿಯಂ ಶಾಲೆ, ಐಜೂರು ಸರ್ಕಾರಿ ಉರ್ದು ಶಾಲೆ ಹಾಗೂ ಮೆಹಬೂಬ್ ನಗರದ ರಾಯಲ್ ಇಂಗ್ಲೀಷ್ ಶಾಲೆಯಲ್ಲಿ ನಡೆದ ಮೆಹಂದಿ ಸ್ಪರ್ಧೆಯಲ್ಲಿ ಭಾಗಿಯಾದ ಅಲ್ಪಸಂಖ್ಯಾತ ಸಮುದಾಯದ ಸಹಸ್ರಾರು ಮಹಿಳೆಯರು ತಮ್ಮ ಕೈ ಮೇಲೆ ತಾವೇ ಮೆಹಂದಿ ಬಿಡಿಸಿ ಸಂಭ್ರಮಿಸಿದರು.

ಯಶಸ್ವಿಯಾದ ಮ್ಯಾರಥಾನ್ ರಾಮೋತ್ಸವ ಅಂಗವಾಗಿ ನಮ್ಮ ಓಟ ಆರೋಗ್ಯ ಮತ್ತು ಸ್ವಚ್ಛತೆಗಾಗಿ ಶೀರ್ಷಿಕೆ ಅಡಿಯಲ್ಲಿ ಹಮ್ಮಿಕೊಂಡಿದ್ದ ಮ್ಯಾರಥಾನ್ ನಲ್ಲಿ ಸುಮಾರು ಒಂದೂವರೆ ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ನಗರದ ಮಾರುತಿ ನಗರದ ಬಳಿಯಿಂದ ಆರಂಭಗೊಂಡ ಮ್ಯಾರಥಾನ್‌ಗೆ ಶಾಸಕ ಸಿ.ಪಿ.ಯೋಗೇಶ್ವರ್ ಚಾಲನೆ ಕೊಟ್ಟರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಚೇತನ್ ಕುಮಾರ್ , ಬಮೂಲ್ ನಿರ್ದೇಶಕ ಹರೀಶ್ , ಕೆಡಿಪಿ ಸದಸ್ಯೆ ಅನಿತಾ, ರೋಟರಿ ಅಧ್ಯಕ್ಷ ಪ್ರಕಾಶ್ , ಕಾರ್ಯದರ್ಶಿ ಪರಮೇಶ್ ಮತ್ತಿತರರು ಹಾಜರಿದ್ದರು.

ರಾಮೋತ್ಸವಕ್ಕೆ ಶಾಸಕ ಇಕ್ಬಾಲ್ ಹುಸೇನ್ ಸಂಕಲ್ಪಿಸಿದ್ದರು. ಡಿಕೆ ಸಹೋದರರ ಮಾರ್ಗದರ್ಶನದಲ್ಲಿ ಯಶಸ್ವಿಗೊಳಿಸಿ, ಜನಮನಣ್ಣಗೆ ಪಾತ್ರರಾದರು. ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಚೇತನ್ ಕುಮಾರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ. ರಾಜು ಮುಂತಾದವರು ರಾಮೋತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಸಂಪನ್ನಗೊಂಡ ಶ್ರೀನಿವಾಸ ಕಲ್ಯಾಣೋತ್ಸವ

ರಾಮೋತ್ಸವ ಪ್ರಯುಕ್ತ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಶನಿವಾರ ಶ್ರದ್ಧಾಭಕ್ತಿಯಿಂದ ಸಂಪನ್ನಗೊಂಡಿತು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ರಾಮೋತ್ಸವ ವೇದಿಕೆ ಪಕ್ಕದಲ್ಲಿಯೇ ತಿರುಪತಿ ದೇವಸ್ಥಾನದ ಮಾದರಿಯಲ್ಲಿಯೇ ನಿರ್ಮಾಣಗೊಂಡಿದ್ದ ಸುಂದರ ವೇದಿಕೆಯಲ್ಲಿ ಕಲ್ಯಾಣೋತ್ಸವ ಆಯೋಜನೆಯಾಗಿತ್ತು. ಶ್ರೀ ದೇವಿ, ಭೂದೇವಿ ಸಮೇತ ಶ್ರೀ ಶ್ರೀನಿವಾಸ ದೇವರ ಮೂರ್ತಿಗಳನ್ನು ತಿರುಮಲೆಯಿಂದ ತರಿಸಲಾಗಿತ್ತು. ಶ್ರೀನಿವಾಸ ಕಲ್ಯಾಣೋತ್ಸವ ತಿರುಪತಿ ಮಾದರಿಯಲ್ಲಿಯೇ ಭಕ್ತಿ, ಸಂಪ್ರದಾಯದಂತೆ ನೆರವೇರಿಸಿದರು.

ಲೋಕಕಲ್ಯಾಣಾರ್ಥಕ್ಕಾಗಿ ನಡೆದ ಕಲ್ಯಾಣೋತ್ಸವದ ಪೂಜಾ ಕಾರ್ಯಕ್ರಮದಲ್ಲಿ ಶಾಸಕ ಇಕ್ಬಾಲ್ ಹುಸೇನ್ , ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು, ಬಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವಿಜಯ್ ದೇವ್ ಹಾಗೂ ಕಾಂಗ್ರೆಸ್ ಮುಖಂಡ ನರಸಿಂಹಯ್ಯ ದಂಪತಿ ಪಾಲ್ಗೊಂಡು ವಿವಿಧ ಪೂಜಾ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಸಚಿವರ ನೇಮಕಕ್ಕೆ ಆಗ್ರಹ

ಮೈಸೂರು: ರಾಜ್ಯದಲ್ಲಿ 2 ವರ್ಷಗಳಿಂದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಸಚಿವರಿಲ್ಲದ ಕಾರಣ ಸಮುದಾಯಕ್ಕಾಗಿ ಯಾವುದೇ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ. ಹೀಗಾಗಿ ನಾಯಕ ಸಮುದಾಯದ ಶಾಸಕರೊಬ್ಬರಿಗೆ ಇದರ ಜವಾಬ್ದಾರಿ ಕೊಡಬೇಕು ಎಂದು ರಾಜ್ಯ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ಗೌರವ ಅಧ್ಯಕ್ಷ ದ್ಯಾವಪ್ಪ ನಾಯಕ ಆಗ್ರಹಿಸಿದರು.

ಈ ಖಾತೆ ಸಿಎಂ ಸಿದ್ದರಾಮಯ್ಯ ಅವರ ಬಳಿಯೇ ಇದೆ. ಅವರಿಗೆ ಒತ್ತಡ ಹೆಚ್ಚಾಗಿರುವುದರಿಂದಾಗಿ ಇದರತ್ತ ಗಮನ ಹರಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕೂಡಲೇ ಸಿಎಂ ಸಮುದಾಯದ ಒಬ್ಬರಿಗೆ ಇದರ ಹೊಣೆ ಹೊರಿಸಬೇಕೆಂದು ಸುದ್ದಿಗೋಷ್ಠಿಯಲ್ಲಿ ಕೋರಿದರು. ಸಚಿವರು 2 ವರ್ಷಗಳಿಂದ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಯಾವುದೇ ಸಾಲ ಸೌಲಭ್ಯ, ಸಹಾಯಧನದ ಸೌಲಭ್ಯಗಳು ಸಮುದಾಯದ ಜನತೆಗೆ ಸರಿಯಾದ ಸಮಯಕ್ಕೆ ತಲುಪುತ್ತಿಲ್ಲ. ಈ ಹಿಂದೆ ಸಮುದಾಯದ ಮೂವರು ಸಚಿವರ ಇದ್ದರು, ಈಗ ಕೇವಲ ಓರ್ವರು ಇದ್ದಾರೆ. ಇದು ಸಮುದಾಯಕ್ಕೆ ಆಗಿರುವ ರಾಜಕೀಯ ಅನ್ಯಾಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯಾಧ್ಯಕ್ಷ ಪ್ರಭಾಕರ್ ಹುಣಸೂರು, ರಾಜ್ಯಾಧ್ಯಕ್ಷ ಶ್ರೀಧರ್ ಚಾಮುಂಡಿ ಬೆಟ್ಟ, ರಾಜ್ಯ ಪ್ರಧಾನ ಕಾರ್ಯದರ್ಶಿ ಕೆರಹಳ್ಳಿ ಮಾದೇಶ್, ನಗರ ಅಧ್ಯಕ್ಷ ರಾಜು ಮಾರ್ಕೆಟ್, ರಾಜ್ಯ ಉಪಾಧ್ಯಕ್ಷ ಜಿ.ಡಿ.ಸ್ವಾಮಿ ಇದ್ದರು.

ಜಿಲ್ಲಾ ಮಡಿವಾಳ ಸಂಘಕ್ಕೆ ಅಧ್ಯಕ್ಷರ ನೇಮಕ

ಮೈಸೂರು: ಜಿಲ್ಲಾ ಮಡಿವಾಳ ಮಾಚಿದೇವರ ಸಂಘಕ್ಕೆ ಇದುವರೆಗೆ ಯಾವುದೇ ಸೇವೆ ಸಲ್ಲಿಸದ ಕಾರಣ ಜಿಲ್ಲಾ ಮಡಿವಾಳ ಮಾಚಿದೇವರ ಸಂಘ ಅಧ್ಯಕ್ಷ ರವಿನಂದನ್ ರನ್ನು ಸರ್ವಾನುಮತದಿಂದ ವಜಾಗೊಳಿಸಿ, ನೂತನ ಅಧ್ಯಕ್ಷರನ್ನಾಗಿ ಕೆ.ಆರ್.ನಗರ ತಾಲೂಕಿನ ಧರ್ಮರಾಜ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ನಂಜನಗೂಡು ತಾಲ್ಲೂಕು ಅಧ್ಯಕ್ಷ ಎಚ್.ಡಿ.ಪ್ರಸನ್ನಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ವ್ಯಾಪ್ತಿಯ ನಗರ ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಅಧ್ಯಕ್ಷರು, ಕಾರ್ಯದರ್ಶಿಗಳು ರಾಜ್ಯ ಸಂಘದ ಅಡಿಯಲ್ಲಿ ಸಮಾಜದ ಸಂಘಟನೆ ಮಾಡಲಾಗುತ್ತಿದೆ. ಈ ಹಿಂದೆ 2018-19 ರಲ್ಲಿ ರಾಜ್ಯ ಸಂಘದ ನೇತೃತ್ವದಲ್ಲಿ ರವಿನಂದನ್ ಅವರನ್ನು ಜಿಲ್ಲೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಆದರೆ ಅವರು ಅಂದಿನಿಂದ ಇಂದಿನವರೆಗೂ ಜಿಲ್ಲೆಯ ಮಡಿವಾಳ ಸಮಾಜಕ್ಕೆ ಸಾಮಾಜಿಕ ನ್ಯಾಯ ಕೊಡಿಸುವುದರಲ್ಲಿ ವಿಫಲರಾಗಿದ್ದು, ಜನಾಂಗದ ಸಂಘಟನೆ ಮಾಡುವಲ್ಲಿ ವಿಫಲರಾಗಿದ್ದಾರೆ. ರವಿನಂದನ್ ಸಮುದಾಯದ ಯಾವುದೇ ಸಭೆ ಸಮಾರಂಭಗಳನ್ನು ನಡೆಸದೇ ತಟಸ್ಥರಾಗಿರುವುದರಿಂದ ಹಾಗೂ ಅವರ ಅವಧಿಯು ಕೂಡ ಮುಗಿದಿರುವುದರಿಂದ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಅಧ್ಯಕ್ಷರು, ಕಾರ್ಯದರ್ಶಿಗಳು, ನಗರ ಘಟಕದ ಅಧ್ಯಕ್ಷರುಗಳು, ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಸಂಘದ ಎಲ್ಲಾ ಪದಾಧಿಕಾರಿಗಳು ಹಲವು ಬಾರಿ ಸಭೆ ಸೇರಿ ಚರ್ಚಿಸಿ ಅಂತಿಮವಾಗಿ ಕಳೆದ ಡಿ. 26 ರಂದು ನಂಜನಗೂಡು ಪಟ್ಟಣದಲ್ಲಿರುವ ಮಡಿವಾಳರ ಸಮುದಾಯದಲ್ಲಿ ಸಭೆ ಸೇರಿ, ಚರ್ಚಿಸಿ ರವಿನಂದನ್ ರವರನ್ನು ವಜಾಗೊಳಿಸಲಾಗಿದೆ ಎಂದು ವಿವರಣೆ ನೀಡಿದರು. ಜಿಲ್ಲೆಯಲ್ಲಿ ಸಮುದಾಯದ ಸಂಘಟನೆಗೋಸ್ಕರ ನೂತನ ಅಧ್ಯಕ್ಷರನ್ನಾಗಿ ಕೆ.ಆರ್. ನಗರ ತಾಲ್ಲೂಕಿನ ಧರ್ಮರಾಜ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು. ನೂತನ ಅಧ್ಯಕ್ಷ ಧರ್ಮರಾಜ್, ಇನ್ನಿತರ ಪದಾಧಿಕಾರಿಗಳಾದ ವರುಣಾ ಮಹದೇವು, ನಂಜುಂಡಯ್ಯ, ಜಯರಾಮ್, ಮಾಧುರಾಜ್, ಮಹದೇವಸ್ವಾಮಿ, ಕೆ. ಎಂ.ಬಸವರಾಜ್ ಮತ್ತಿತರರು ಇದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಕಿಡಿ

ಜನರ ಬದುಕುವ, ದುಡಿಯುವ ಹಕ್ಕು ಕಸಿದ ಕೇಂದ್ರ

ಮೈಸೂರು: ಮನರೇಗಾ ಕಾಯ್ದೆಯಲ್ಲಿದ್ದ ಮಹಾತ್ಮ ಗಾಂಧೀ ಜಿಯ ಹೆಸರನ್ನು ಕೇಂದ್ರ ಸರ್ಕಾರ ತೆಗೆದು ಹಾಕುವುದರ ಜತೆಗೆ ಜನರಿಂದ ದುಡಿಯುವ ಹಕ್ಕನ್ನು ಹಾಗೂ ಬದುಕುವ ಹಕ್ಕನ್ನು ತೆಗೆದುಹಾಕುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಸೋಮವಾರ ನಡೆದ ನರೇಗ ಬಚಾವ್ ಸಂಗ್ರಾಮ್- ಸಿದ್ಧತಾ ಸಭೆ ಯಲ್ಲಿ ಮಾತನಾಡಿದ ಅವರು, ಕೆಲಸ ಬೇಕು ಎನ್ನು ವವರಿಗೆ ಕೆಲಸ ಕೊಡಬೇಕು. ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ದುಡಿಯುವುದನ್ನು ಹಕ್ಕಾಗಿ ಕೊಟ್ಟಿದ್ದಾರೆ. ಆದರೆ ಇಂದು ಆ ದುಡಿಯುವ ಹಕ್ಕಿಗೆ ಹಾಗೂ ಬದುಕುವ ಹಕ್ಕಿಗೆ ಕೇಂದ್ರ ಸರ್ಕಾರ ಚ್ಯುತಿ ಬರುವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದರು. 2005ರಲ್ಲಿ ಯುಪಿಎ ಸರ್ಕಾರವಿದ್ದಾಗ ನರೇಗಾ ವನ್ನು ಮನ ಮೋಹನ್ ಸಿಂಗ್ ಅವರು ಗ್ರಾಮೀಣ ಜನರಿಗೆ ವಿಶೇಷವಾಗಿ ಎಸ್‌ಸಿ, ಎಸ್‌ಟಿ ಮಹಿಳೆಯರಿಗೆ, ಹಿಂದುಳಿದವರಿಗೆ,

ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಅಲ್ಪಸಂಖ್ಯಾತರಿಗೆ ಉದ್ಯೋಗದ ಖಾತ್ರಿ ಕೊಡುವುದಕ್ಕೆ ತಂದತಹ ಒಂದು ಕ್ರಾಂತಿಕಾರವಾದಂತಹ ಕಾಯ್ದೆ ಎಂದರು.

ಕೇಂದ್ರ ಸರ್ಕಾರ ಆ ಕಾಯ್ದೆಯನ್ನು ಸಂಪೂರ್ಣವಾಗಿ ವಜಾ ಮಾಡಿ ಅವರಿಗೆ ಬೇಕಾದ ರೀತಿಯಲ್ಲಿ ಕಾನೂನನ್ನು ಆತುರಾತುರವಾಗಿ ಜಾರಿಗೆ ತಂದಿದ್ದಾರೆ. ಮನರೇಗಾ ಕಾಯ್ದೆಯಿಂದ ದುಡಿದು ಬದುಕುತ್ತಿದ್ದಂತಹ ಎಸ್ಸ್‌ಸಿ, ಎಸ್‌ಟಿ, ಹಿಂದುಳಿದ ಜನರು, ಸಣ್ಣ ಹಾಗೂ ಅತಿ ಸಣ್ಣ ರೈತರು ಕಂಗಾಲಾಗಿದ್ದಾರೆ ಎಂದು ತಿಳಿಸಿದರು.

ಭಾರತದಲ್ಲಿ ಮನರೇಗಾದಿಂದ ಬದುಕುತ್ತಿದ್ದವರು 12 ಕೋಟಿ ಜನರಿದ್ದಾರೆ. ಇದರಲ್ಲಿ ಶೇ.53 ರಷ್ಟು ಮಹಿಳೆಯರಿದ್ದಾರೆ. ಶೇ.17 ರಷ್ಟು ಎಸ್‌ಸಿ ಸಮುದಾ ಯದವರಿದ್ದಾರೆ, ಶೇ.11ರಷ್ಟು ಮಂದಿ ಎಸ್‌ಟಿಗಳಿದ್ದಾರೆ. ಇವರಿಗೆ ಈಗ ಪೆಟ್ಟು ಬಿದ್ದಿದೆ. ರಾಜಕೀಯ ಅಧಿಕಾರ ಹಾಗೂ ಹಣಕಾಸಿನ ಅಧಿಕಾರವನ್ನು ನೇರವಾಗಿ ಪಂಚಾ ಯಿತಿಗಳಿಗೆ ಕೊಡಬೇಕೆಂದು ಹೇಳಿ ರಾಜೀವ್‌ಗಾಂಧಿ ಅವರು ಪಾರ್ಲಿಮೆಂಟ್‌ನಲ್ಲಿ ಸಂವಿಧಾನದ 73(ಪಂಚಾಯತ್ ರಾಜ್ ಕಾಯ್ದೆ) ಮತ್ತು 74 (ನಗರ ಸಭೆ, ಪುರಸಭೆಗಳ ಕಾಯ್ದೆ) ಅನ್ನು ದುರ್ಬಲ ಮಾಡುವ ಕೆಲಸ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಯೋಜನೆಗೆ ಕೇಂದ್ರ ಸರ್ಕಾರ ಶೇ.100 ಹಣ ಕೊಡುತ್ತಿತ್ತು. ಈಗ ಕೇಂದ್ರ ಸರ್ಕಾರ ಶೇ.60 ಹಣ ಕೊಟ್ಟರೆ ರಾಜ್ಯ ಸರ್ಕಾರ ಶೇ.40 ಹಣ ಭರಿಸಬೇಕಾಗಿದೆ. ಈ ರೀತಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಪಾಲುಗಳನ್ನು ಕೊಡಬೇಕೆಂ ದಾಗ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಜತೆಗೆ ಚರ್ಚಿಸಬೇಕು ಎಂದು ತಿಳಿಸಿದರು. ಶಾಸಕ ಡಿ.ರವಿಶಂಕರ್, ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್, ಮಾಜಿ ಶಾಸಕ ಎಂ. ಕೆ.ಸೋಮಶೇಖರ್, ಕಾಂಗ್ರೆಸ್ ವಕ್ತಾರ ಎಚ್.ಎ. ವೆಂಕಟೇಶ್, ಕಾಂಗ್ರೆಸ್ ಮುಖಂಡ ಜಿ.ಎನ್.ನಂಜುಂಡಸ್ವಾಮಿ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಮಂಚೇಗೌಡನ ಕೊಪ್ಪಲು ರವಿ, ಜಿಲ್ಲಾ ಮಾಧ್ಯಮ ವಕ್ತಾರ ಮಹೇಶ್, ಕಾಂಗ್ರೆಸ್ ಮುಖಂಡರಾದ ನಾಗೇಶ್, ಡೇರಿ ವೆಂಕಟೇಶ್, ಈಶ್ವರ ಚಕ್ಕಡಿ, ಮೋಹನ್ ಸೇರಿ ಇತರರು ಹಾಜರಿದ್ದರು.

ಸಂಚಾರ ನಿಯಮ ಪಾಲನೆ ಕಡ್ಡಾಯ

ಗುಂಡ್ಲುಪೇಟೆ: ಎಲ್ಲರೂ ರಸ್ತೆ ಸಂಚಾರ ನಿಯಮ ಪಾಲನೆ ಮಾಡುವುದು ಕಡ್ಡಾಯ. ವಾಹನ ಚಲಿಸುವಾಗ ಸವಾರರು ನಿಯಮಗಳ ಉಲ್ಲಂಘನೆ ಮಾಡದಂತೆ ಹಿರಿಯ ಸಿವಿಲ್ ನ್ಯಾಯಾಧೀಶರಾದ. ಬಸವರಾಜ್ ತಳವಾರ್ ಹೇಳಿದರು

ಪಟ್ಟಣದ ಕ್ರೈಸ್ಟ್ ಸಿಎಂಐ ಪಬ್ಲಿಕ್ ಶಾಲೆಯಲ್ಲಿ. ತಾಲ್ಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಗುಂಡ್ಲುಪೇಟೆ ಸಾರಿಗೆ ಇಲಾಖೆ, ಚಾಮರಾಜನಗರ ಜಿಲ್ಲಾ ಸಾರಿಗೆ ಇಲಾಖೆ, ಕ್ರೈಸ್ಟ್ ಸಿಎಂಐ ಪಬ್ಲಿಕ್ ಶಾಲೆ ಗುಂಡ್ಲುಪೇಟೆ ಇವರ ಸಂಯುಕ್ತಾಶ್ರಯದಲ್ಲಿ.ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚಾರಣೆ ಅಂಗವಾಗಿ ನಡೆದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು ವಾಹನ ಸವಾರರು ವಾಹನ ಚಾಲನೆ ಪರವಾನಗಿ ಪಡೆಯುವುದು ಕಡ್ಡಾಯ. ಬೈಕ್ ಚಲಾಯಿಸುವ ಪ್ರತಿಯೊಬ್ಬರು ಹೆಲ್ಮೆಟ್ ಧರಿಸುವುದು ಅಗತ್ಯ. ಸರ್ಕಾರದ ಕಾನೂನಿನ ಪ್ರಕಾರ ಹಿಂಬದಿ ಸವಾರರು ಹೆಲ್ಮೆಟ್ ಧರಿಸುವಂತೆ ಸಲಹೆ ನೀಡಿದರು.

ವಾಹನದಲ್ಲಿ ಸಂಚಾರ ಮಾಡುವ ಮುನ್ನ ಅಪಘಾತ ವಿಮೆ ಮಾಡಿಸಬೇಕು. ವಾಹನದ ಮಾಲೀಕರು ನಿಗದಿತ ಸಮಯದಲ್ಲಿ ವಿಮೆಯನ್ನು ನವೀಕರಣ ಮಾಡಿಸಬೇಕು ಎಂದು ಹೇಳಿದರು

ಈ ಕಾರ್ಯಕ್ರಮ ಅಪರ ಸಿವಿಲ್ ಮತ್ತು ಜೆ ಎಂ ಎಫ್. ಸಿ ನ್ಯಾಯಾಧೀಶರಾದ ಗಿರೀಶ್ ಆರ್ ಬಿ, ಎ ಎಸ್ ಐ ಮಹೇಶ್, ಪ್ರಾದೇಶಿಕ ಸಾರಿಗೆ ಅಧಿಕಾರಿ. ಗಾಯತ್ರಿ, ವಕೀಲರ ಸಂಘದ ಉಪಾಧ್ಯಕ್ಷ ಪುಟ್ಟಸ್ವಾಮಿ, ಕಾರ್ಯದರ್ಶಿ ಜವರಾಜುಸಿ ಎಂ ಐ ಶಾಲೆಯ ಪ್ರಾಂಶುಪಾಲ. ಫಾದರ್ ರಿಜೀಶ್ ಪುತಿಯಾಪರಂಬಿಲ್ ಸಿಎಂಐ ಮತ್ತು ಶಾಲೆಯ ಶಿಕ್ಷಕರಾದ ಶ್ರೀ ದೊಡ್ಡಪ್ಪಾಜಿ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಹಾಜರಿದ್ದರು.

ತ.ನಾಡು, ಕೇರಳ ಸರ್ಕಾರಗಳ ಕನ್ನಡ ವಿರೋಧ ನೀತಿಗೆ ಖಂಡನೆ

ಚಾಮರಾಜನಗರ: ತಮಿಳುನಾಡು ಮತ್ತು ಕೇರಳ ಸರ್ಕಾರಗಳು ಕನ್ನಡ ವಿರೋಧ ನೀತಿಯನ್ನು ಅನುಸರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆ ಹಾಗೂ ಕನ್ನಡಪರ ಸಂಘಟನೆಗಳ ವತಿಯಿಂದ ಭಾನುವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ತಮಿಳುನಾಡು ಹಾಗೂ ಕೇರಳ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಸೇನಾಪಡೆಯ ರಾಜ್ಯಾಧ್ಯಕ್ಷ ಚಾ.ರಂ. ಶ್ರೀನಿವಾಸ್ ಗೌಡ ಮಾತನಾಡಿ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಕನ್ನಡಿಗರಿಗೆ ರಕ್ಷಣೆ ಇಲ್ಲದಂತಾಗಿದೆ. ಈ ಎರಡು ರಾಜ್ಯ ಸರ್ಕಾರಗಳು ಕನ್ನಡ ವಿರೋಧಿ ಸರ್ಕಾರವಾಗಿದೆ. ತಮಿಳುನಾಡಿನ ಕೆಲ ಕಿಡಿಗೇಡಿಗಳು ಕನ್ನಡ ಬಾವುಟವನ್ನು ಹಾಕಿಕೊಂಡು ಸಂಚರಿಸುವ ವಾಹನಗಳನ್ನು ತಡೆದು ಕನ್ನಡದ ಬಾವುಟಗಳನ್ನು ಕಿತ್ತುಕೊಂಡು ಕನ್ನಡಿಗರ ಮೇಲೆ ನಿರಂತರ ಹಲ್ಲೆ ಮಾಡುತ್ತಿದ್ದಾರೆ ಇದು ಅತ್ಯಂತ ಖಂಡನೀಯ ಎಂದರು.

ಕೇರಳದ ಕಾಸರಗೂಡಿನಲ್ಲಿರುವ ಕನ್ನಡಿಗರ ಮೇಲೆ ಬಲವಂತವಾಗಿ ಮಲಯಾಳಂ ಭಾಷೆಯನ್ನು ಏರಲು ಮುಂದಾಗಿರುವುದು ಸರಿಯಾದ ಕ್ರಮವಲ್ಲ. ಕೇರಳ ಸರ್ಕಾರ ಕೂಡಲೇ ಈ ಕ್ರಮವನ್ನು ಕೈ ಬಿಡಬೇಕು. ತಮಿಳುನಾಡು ಮತ್ತು ಕೇರಳದಲ್ಲಿ ಕನ್ನಡಿಗರ ಮೇಲೆ ನಡೆಯುತ್ತಿರುವ ಹಲ್ಲೆ ಮತ್ತು ದಬ್ಬಾಳಿಕೆ ನಿಲ್ಲಬೇಕು. ಇಲ್ಲದಿದ್ದರೆ ಕರ್ನಾಟಕ ಪ್ರವೇಶ ಮಾಡುವ ಎರಡು ರಾಜ್ಯಗಳ ವಾಹನಗಳ ಸಂಚಾರ ತಡೆಯು ತ್ತೇವೆ. ಅಲ್ಲದೆ ಎರಡು ರಾಜ್ಯಗಳ ಗಡಿ ಬಂದ್ ಮಾಡಿ, ಕರ್ನಾಟಕ ಪ್ರವೇಶ ಮಾಡದಂತೆ ನಿರ್ಬಂಧ ವಿಧಿಸುತ್ತೇವೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕನ್ನಡಪರ ಸಂಘಟನೆ ಮುಖಂಡರಾದ ಶಾ.ಮುರಳಿ, ಪಣ್ಯದಹುಂಡಿ ರಾಜು, ರಾಚಪ್ಪ, ರಾ. ಜಗದೀಶ್, ಕೆಂಪರಾಜು, ರಾಜೇಂದ್ರ, ಜಗದೀಶ್, ಲೋಕೇಶ್, ಜಿ.ಮಹೇಶ್, ಸಿದ್ದರಾಜು, ಸುವರ್ಣ ಕರ್ನಾಟಕ ರಾಜ್ಯಾಧ್ಯಕ್ಷ ಸುರೇಶ್ ವಾಜಪೇಯಿ, ಶಿವಣ್ಣ ಹೊಸೂರು ಹಾಗೂ ಇತರರು ಉಪಸ್ಥಿತರಿದ್ದರು.

ಇಂದಿನಿಂದ ಸೇವ್ ಕಬಿನಿ ಹೋರಾಟ

ಮೈಸೂರು: ತೀವ್ರ ಚರ್ಚೆಗೆ ಗ್ರಾಸವಾಗಿರುವ ಎಚ್.ಡಿ.ಕೋಟೆಯಲ್ಲಿನ ಅಕ್ರಮ ರೆಸಾರ್ಟ್, ಅಕ್ರಮ ಸಫಾರಿ ವಿರುದ್ಧ ಜ.20ರಿಂದ ಎಚ್.ಡಿ.ಕೋಟೆ ತಾಲ್ಲೂಕು ಕಚೇರಿ ಮುಂಭಾಗ ಅನಿರ್ಧಿಷ್ಟಾವಧಿ ಮುಷ್ಕರಕ್ಕೆ ನಿರ್ಧರಿಸಿವೆ.

ರೈತ, ದಲಿತ, ಕನ್ನಡ ಹಾಗೂ ವಿಶೇಷಚೇತನರ ಪರ ಸಂಘಟನೆಗಳ ನೇತೃತ್ವದಲ್ಲಿ ಪರಿಸರ ಸಂರಕ್ಷಕರು ಸೇರಿ ತಾಲ್ಲೂಕು ಕಚೇರಿ ಮುಂಭಾಗ ಪ್ರತಿಭಟಿಸುವುದಾಗಿ ತಿಳಿಸಿದ್ದಾರೆ. ಕಬಿನಿ ಮತ್ತು ಸುತ್ತಮುತ್ತಲ ಅರಣ್ಯ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಾಣಗೊಂಡಿರುವ ಕಟ್ಟಡ, ರೆಸಾರ್ಟ್ ತಕ್ಷಣ ತೆರವುಗೊಳಿಸಬೇಕು. ಪರಿಸರ ಸಂವೇದಿ ವಲಯ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಅರಣ್ಯ ವನ್ಯಜೀವಿ ಮತ್ತು ಪರಿಸರ ಸಂರಕ್ಷಣೆಗೆ ಆಡಳಿತದಿಂದ ತಕ್ಷಣ ಹಾಗೂ ಪರಿಣಾಮಕಾರಿ ಕ್ರಮಕೈಗೊಳ್ಳಬೇಕೆಂಬ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ನಡೆಸಲು ಮುಂದಾಗಿದ್ದಾರೆ.

ಹೋರಾಟದ ನೇತೃತ್ವವಹಿಸಿರುವ ವಕೀಲ ರವಿ ಮಾತನಾಡಿ, ಕಬಿನಿ ಹಿನ್ನೀರು ಪ್ರದೇಶ ಹಾಗೂ ನಾಗರಹೊಳೆ, ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ಎಲಿಫೆಂಟ್ ಕಾರಿಡಾರ್, ಟೈಗರ್ ರಿಸರ್ವ್, ಅರಣ್ಯ ಬಫರ್ ಜೋನ್ ಹಾಗೂ ಪರಿಸರ ಅಕ್ರಮವಾಗಿ ನಿರ್ಮಾಣಗೊಂಡಿರುವ ರೆಸಾರ್ಟ್, ಹೋಟೆಲ್, ಬಾರ್ ಕ್ಲಬ್ ಮತ್ತು ಇತರೆ ವಾಣಿಜ್ಯ ಕಟ್ಟಡಗಳು ಅರಣ್ಯ, ವನ್ಯಜೀವಿಗಳಿಗೆ ಅಪಾಯವನ್ನುಂಟು ಮಾಡುತ್ತಿವೆ. ಈ ಬಗ್ಗೆ ದೂರು ನೀಡಿದರೂ ಯಾವುದೇ ಪರಿಣಾಮ ಕಾರಿ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದರು.

ಮಹಿಳಾ ಕಾಲೇಜಿನಲ್ಲೂ ಬಿಸಿಯೂಟಕ್ಕೆ ಚಾಲನೆ

ಮೈಸೂರು: ರಾಜ್ಯದಾದ್ಯಂತ ಶಾಲೆಗಳಲ್ಲಿ ಬಿಸಿಯೂಟ ಜಾರಿಗೊಳಿಸಿರುವ ಮಾದರಿಯಲ್ಲೇ ಮೈಸೂರಿನಲ್ಲಿ ಶಾಸಕ ಜಿ.ಟಿ.ದೇವೇಗೌಡ ತಮ್ಮ ಕ್ಷೇತ್ರದ ಮಹಿಳಾ ಕಾಲೇಜಿನಲ್ಲಿಯೂ ಬಿಸಿಯೂಟ ಯೋಜನೆಗೆ ಚಾಲನೆ ನೀಡುವ ಮೂಲಕ ಗಮನ ಸೆಳೆದಿದ್ದಾರೆ.

ಬಡ ವಿದ್ಯಾರ್ಥಿನಿಯರು ಮಧ್ಯಾಹ್ನದ ಹೊತ್ತು ಹಸಿವಿನಿಂದ ಇರಬಾರದೆಂದು ಶಾಸಕ ಜಿ.ಟಿ.ದೇವೇಗೌಡ ಹಾಗೂ ಆಪ್ತ ಸ್ನೇಹಿತರ ನೆರವಿನೊಂದಿಗೆ ಸೋಮವಾರದಿಂದ ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಧ್ಯಾಹ್ನದ ಬಿಸಿಯೂಟ ಆರಂಭಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ಈ ವೇಳೆ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಮಧ್ಯಾಹ್ನದ ಹೊತ್ತು ಊಟಕ್ಕಾಗಿ ದೂರಕ್ಕೆ ಹೋಗಬೇಕಾದ ವಿಚಾರವನ್ನು ವಿದ್ಯಾರ್ಥಿಗಳು ಹೇಳಿದ್ದರು. ಹೇಗಾದರೂ ಮಾಡಿ ಮಧ್ಯಾಹ್ನದ ಊಟ ವ್ಯವಸ್ಥೆ ಮಾಡಬೇಕೆಂದು ಅಕ್ಷಯ ಪಾತ್ರ ಫೌಂಡೇಶನ್ ನೆನಪಾಗಿ ಅವರೊಂದಿಗೆ ಮಾತನಾಡಿದಾಗ ಒಪ್ಪಿಕೊಂಡರು. ನಾನು ಸೇರಿ ನಮ್ಮ ಆತ್ಮೀಯ ಸ್ನೇಹಿತರು ಸೇರಿ ಮಕ್ಕಳಿಗೆ ಊಟ ಪೂರೈಕೆಗೆ ಆಗುವ ವೆಚ್ಚವನ್ನು ಭರಿಸುತ್ತೇವೆ. ಮುಂದಿನ ದಿನಗಳಲ್ಲಿ ನಿರಂತರವಾಗಿ ಊಟ ವಿತರಣೆಗೆ ಎಲ್ಲಾ ರೀತಿಯ

ವ್ಯವಸ್ಥೆ ಮಾಡಿದ್ದೇವೆ. ಈ ಹಿಂದೆ ವಿಜಯನಗರ ಕೃಷ್ಣದೇವರಾಯರ ಆಳ್ವಿಕೆಯ ಕಾಲದಲ್ಲಿ ಯಾವುದೇ ಕಾರ್ಯಕ್ರಮ ಆರಂಭವಾದರೂ ಅದು ಜಗತ್ತಿಗೆ ಮಾದರಿಯಾಗುತ್ತಿತ್ತು. ಇದೀಗ ಅದೇ ರೀತಿ ನಮ್ಮ ಮೈಸೂರಿನ ವಿಜಯನಗರದಲ್ಲಿ ಆರಂಭವಾಗಿರುವ ಈ ಕಾಲೇಜಿನ ಬಿಸಿಯೂಟ ಯೋಜನೆ ರಾಜ್ಯದಾದ್ಯಂತ ಪ್ರಾರಂಭವಾಗಲಿ ಎಂದರು.

ಇಸ್ಕಾನ್‌ನ ಅಕ್ಷಯಪಾತ್ರ ಫೌಂಡೇಶನ್‌ನ ಅಧ್ಯಕ್ಷ ಸ್ತೋಕ ಕೃಷ್ಣಸ್ವಾಮಿ, ನೆಮ್ಮದಿಯಿಂದ ಊಟ ಮಾಡುವ ಜತೆಗೆ, ಓದಿನ ಕಡೆಗೆ ಗಮನಹರಿಸಬೇಕು. ಶಾಸಕರು ಇಸ್ಕಾನ್ ದೇವಾಲಯಕ್ಕೆ ಅನೇಕ ವರ್ಷಗಳ ಕಾಲದಿಂದಲೂ ಬರುತ್ತಿದ್ದು, ಅವರೊಟ್ಟಿಗಿನ ಬಹಳ ಹಳೆಯದಾಗಿದೆ. ಜನರ ಹಿತ ಕಲ್ಯಾಣಕ್ಕಾಗಿ ಸದಾ ಯೋಚಿಸುವುದನ್ನು ಗಮನಿಸಿದ್ದೇವೆ. ಬಡಜನರಿಗಾಗಿ ಶ್ರಮಿಸುವ ರಾಜಕಾರಣಿಗಳಲ್ಲಿ ಶಾಸಕರು ಸಹ ಒಬ್ಬರು. ಕಾಲೇಜು ಮಕ್ಕಳಿಗೆ ಯಾವುದೇ ಯೋಜನೆ ಇಲ್ಲ. ಮೊದಲ ಬಾರಿಗೆ ಕಾಲೇಜು ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡಲು ಕಲ್ಪನೆ ಮಾಡಿದ್ದಾರೆ. ಅಕ್ಷಯ ಪಾತ್ರ ಫೌಂಡೇಶನ್ ಉಪಾಧ್ಯಕ್ಷ ಕೃಷ್ಣ ಕೇಶವದಾಸ್, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್, ಮುಡಾ ಮಾಜಿ ಅಧ್ಯಕ್ಷ ಎಚ್. ಎನ್.ವಿಜಯ್ ಕುಮಾರ್, ಮಹೇಶ್ ಶೆಣೈ, ಕಾಂತರಾಜು, ಶ್ರೀಕಾಂತ್, ವೀರೇಶ್, ಮಂಚೇಗೌಡ, ಮರಟಿಕ್ಯಾತನಹಳ್ಳಿ ವೆಂಕಟೇಶ್, ನಂಜುಂಡೇಗೌಡ, ನೇತ್ರಾ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಪ್ರೊ.ಡಿ.ಎಸ್.ಪ್ರತಿಮಾ, ಹೂಟಗಳ್ಳಿ ನಗರಸಭೆ ಆಯುಕ್ತ ಬಿ.ಎನ್.ಚಂದ್ರಶೇಖರ್, ಕಾಲೇಜು ಪ್ರಾಂಶುಪಾಲ ಡಾ.ಕೆ.ಸಿ.ಭದ್ರಗಿರಿಯಯ್ಯ, ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಎಸ್.ಆನಂದಕುಮಾರ್ ಮತ್ತಿತರರು ಹಾಜರಿದ್ದರು.

ಗುಲಾಮರ ಅಪ್ಪ ಫೇಕ್ ಐಡಿ ಸೃಷ್ಟಿಸಿರುವ ಕಿಡಿಗೇಡಿ ಬಂಧಿಸಿ

ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ ಆಗ್ರಹ

ಚಾಮರಾಜನಗರ, ಸಾಮಾಜಿಕ ಜಾಲತಾಣದಲ್ಲಿ ಗುಲಾಮರ ಅಪ್ಪ ಫೇಕ್ ಐಡಿ ಕ್ರಿಯೇಟ್ ಮಾಡಿ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್, ಬುದ್ದರ ಹಾಗೂ ಒಂದು ವರ್ಗದ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ಪೋಸ್ಟ್ ಮಾಡುತ್ತಿರುವ ಕಿಡಿಗೇಡಿಯನ್ನು ಒಂದು ವಾರದೊಳಗೆ ಬಂಧಿಸಿ ಕ್ರಮಕೈಗೊಳ್ಳದಿದ್ದರೆ ಹೋರಾಟ ಮಾಡುವುದಾಗಿ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ ಆಗ್ರಹಿಸಿದೆ. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾದ

ಅಧ್ಯಕ್ಷ ಉಮೇಶ್ ಕುದರ್ ಮಾತನಾಡಿ, ಗುಲಾಮರ ಅಪ್ಪ ಫೇಕ್ ಐಡಿ ಸೃಷ್ಟಿಸಿರುವ ಕಿಡಿಗೇಡಿಯನ್ನು ಬಂಧಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ , ಸಚಿವರುಗಳಿಗೆ ಮನವಿ ಸಲ್ಲಿಸಿ ಒಂದು ತಿಂಗಳು ಆಗಿದ್ದರು ಯಾವುದೇ ಪ್ರಯೋಜನ ವಾಗಿಲ್ಲ ಕೂಡಲೇ ಗುಲಾಮರ ಅಪ್ಪ ಫೇಕ್ ಐಡಿ ರದ್ದುಪಡಿಸಿ, ಫೇಕ್ ಐಡಿ ಸೃಷ್ಟಿಸಿರುವ ಕಿಡಿಗೇಡಿಯನ್ನು ಒಂದು ವಾರದೊಳಗೆ ಬಂಧಿಸಬೇಕು ಹಾಗೂ ಪೋಸ್ಟ್ ಶೇರು ಮಾಡುವವರ ವಿರುದ್ದವೂ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಡಾ. ಬಿ.ಆರ್.ಅಂಬೇಡ್ಕರ್ ಮಹಾಸಭಾದ ಕಾರ್ಯಾಧ್ಯಕ್ಷ ಸಿ. ಕೆ.ಮಂಜುನಾಥ್ ಮಾತನಾಡಿ ಸಾಮಾಜಿಕ ಜಾಲತಾಣದಲ್ಲಿ ಒಬ್ಬ ಕೋಮುವಾದಿ ಕಿಡಿಗೇಡಿ ಗುಲಾಮರ ಅಪ್ಪ ಎಂದು ಫೇಕ್ ಐಡಿ ಸೃಷ್ಟಿಸಿಕೊಂಡು ಅಂಬೇಡ್ಕರ್, ಬುದ್ದರ, ಒಂದು ವರ್ಗದ ವಿರುದ್ಧ ಅಳಹೇಳಕಾರಿಯಾಗಿ ಮಾತನಾಡುವುದನ್ನು ಆರಂಭಿಸಿದ್ದಾರೆ. ಭಾರತದ ಸಂವಿಧಾನವನ್ನು ಅಂಬೇಡ್ಕರ್ ಅವರು ಬರೆದಿಲ್ಲ ಎಂಬ ವಾದವನ್ನ ದೇಶದಲ್ಲಿ ಹೆಚ್ಚು ಪ್ರಚಲಿತ ಮಾಡುವುದು ಆ ಕಿಡಿಗೇಡಿಯ ಉದ್ದೇಶವಾಗಿದೆ. ಅಂಬೇಡ್ಕರ್ ಸಿದ್ದಾಂತಗಳನ್ನು ಈ ದೇಶದಲ್ಲಿ ಪ್ರಮುಖದಿಕ್ಕಿನತ್ತ ಕೊಂಡೊಯ್ಯುವ ಸುಸಂದರ್ಭದಲ್ಲಿ ಇದನ್ನು ಸಹಿಸಿಕೊಳ್ಳದ ಮನುವಾದಿಗಳು ಫೇಕ್ ಐಡಿ ಸೃಷ್ಟಿಸಿಕೊಂಡು ಮನುವಾದ ಅಂಬೇಡ್ಕರ್ ವಾದದ ಮೇಲೆ ಬಲ ಪ್ರಯೋಗ ಮಾಡುವ ಕೆಲಸ ಮಾಡುತ್ತಿದ್ದಾರೆ. ಜಿಲ್ಲಾಡಳಿತ ಇತ್ತ ಕಡೆ ಗಮನಹರಿಸಿ ಕಿಡಿಗೇಡಿಯನ್ನು ಪತ್ತೆ ಹಚ್ಚಿ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಗಣೇಶ ಪ್ರಸಾದ್,ಉಪಾಧ್ಯಕ್ಷರಾದ ಶಿವಸ್ವಾಮಿ, ರಾಜ್ ಕುಮಾರ್, ಎಸ್ ಪಿ.ಮಹೇಶ್, ವಾಸು ಹೊಂಡರಬಾಳು ಹಾಜರಿದ್ದರು.

ಗಂಡು ಹುಲಿ ಮರಿ ಸೆರೆ

ಚಾಮರಾಜನಗರ:ತಾಲ್ಲೂಕಿನ ನಂಜದೇವನಪುರ ಸಮೀಪದಲ್ಲಿ ಶನಿವಾರ ರಾತ್ರಿ ಗಂಡು ಹುಲಿ ಮರಿಯನ್ನು ಅರಣ್ಯ ಇಲಾಖೆಯು ಸೆರೆ ಹಿಡಿದಿದೆ.

ತಾಲ್ಲೂಕಿನ ನಂಜದೇವನಪುರ ಸಮೀಪ 10 ತಿಂಗಳ ಒಂದು ಗಂಡು ಹುಲಿ ಮರಿಯನ್ನು ಸೆರೆಹಿಡಿಯಲಾಗಿದೆ. ಹುಲಿಯನ್ನು ಸುರಕ್ಷಿತವಾಗಿ ಇರಿಸಿ ಅದರ ಆರೋಗ್ಯ ಸ್ಥಿತಿ ಬಗ್ಗೆ, ಅರಣ್ಯ ಇಲಾಖೆಯ ಅಧಿಕಾರಿಗಳು ನಿಗಾವಹಿಸಿದ್ದಾರೆ.

ಜ. 9 ರಂದು ಒಂದು ತಾಯಿ ಹುಲಿಯನ್ನು ಕಾರ್ಯಾಚರಣೆ ಮೂಲಕ ಸೆರೆಹಿಡಿಯಲಾಗಿತ್ತು, 04 ಹುಲಿ ಮರಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯು ಮುಂದುವರೆಸಲಾಗಿತ್ತು. ಇತ್ತೀಚಿಗೆ 4 ಹುಲಿ ಮರಿಗಳ ಪೈಕಿ 10 ತಿಂಗಳ ಒಂದು ಹೆಣ್ಣು ಹುಲಿ ಮರಿಯನ್ನು ಅರಣ್ಯ ಇಲಾಖೆ ಸೆರೆಯಿಡಿದಿದೆ. ಇನ್ನು ಉಳಿದ 3 ಹುಲಿ ಮರಿಗಳ ಸೆರೆ ಕಾರ್ಯಾಚರಣೆ ಮುಂದುವರಿಸಲಾಗಿದೆ. ಕಾರ್ಯಾಚರಣೆಯಲ್ಲಿ ಇಬ್ಬರು ಪಶು ವೈದ್ಯಾಧಿಕಾರಿ, ದುಬಾರೆ ಕ್ಯಾಂಪಿನ 4 ಸಾಕಾನೆ, ಇಲಾಖೆಯ ಡ್ರೋನ್ ತಂಡಗಳು ಮತ್ತು ಅಧಿಕಾರಿ ಸಿಬ್ಬಂದಿಗಳು ಇದ್ದರು.



25ಕ್ಕೆ ವಿದ್ಯಾರ್ಥಿಗಳ ಸಮ್ಮಿಲನ

ಮೈಸೂರು: ಮಹಾಜನ ವಿದ್ಯಾಸಂಸ್ಥೆ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನವನ್ನು ಮಹಾ ಅನುಬಂಧ ಹೆಸರಿನಲ್ಲಿ ಜ. 25 ಎಂದು ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರುಳೀಧರ್ ತಿಳಿಸಿದರು.

ಅಂದು ಸಂಜೆ 5ಕ್ಕೆ ಜಯಲಕ್ಷ್ಮೀಪುರಂ ಮಹಾಜನ ಪಿಯು ಕಾಲೇಜಿನ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.ಹಿರಿಯ ವಿದ್ಯಾರ್ಥಿ ಹಾಗೂ ತಿರುಪತಿಯ ಐಐಎಸ್ ಇಆರ್ ಸಂಸ್ಥೆ ನಿಕಟಪೂರ್ವ ನಿರ್ದೇಶಕರಾದ ಡಾ.ಟಿ.ಎನ್. ಗಣೇಶ್ ಉದ್ಘಾಟಿಸಲಿದ್ದಾರೆ. ಶಾಸಕರಾದ ಕೆ. ಹರೀಶ್‌ಗೌಡ, ಜಿ.ಡಿ. ಹರೀಶ್‌ಗೌಡ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಎಚ್‌ಎಂಟಿ ಕಂಪನಿಯ ನಿವೃತ್ತ ನಿರ್ದೇಶಕ ಎನ್. ರಾಮಾನುಜ ಅತಿಥಿಗಳಾಗಿರುವರು.

ವಿಶೇಷ ಆಹ್ವಾನಿತರಾಗಿ ಹಿರಿಯ ವಿದ್ಯಾರ್ಥಿಗಳಾದ ಪತ್ರಿಕೋದ್ಯಮಿ ರವಿಕೋಟಿ, ಹಿನ್ನಲೆ ಗಾಯಕಿ ಅನನ್ಯ ಭಟ್, ರಿಲೆಂಟ್ ಕ್ರಿಯೇಷನ್ ಸೆಲೆಬ್ರಿಟಿ ಮ್ಯಾನೇಜ್‌ಮೆಂಟ್ ಕಂಪನಿ ಮಾಲಿಕರಾದ ಶ್ರೇಯಾಬಾಬು,

ಬಿಗ್ ಬಾಸ್ ವಿಜೇತರಾದ ಕಾರ್ತಿಕ್ ಮಹೇಶ್, ಹಾಸ್ಯ ಕಲಾವಿದ ಮನೋಹರ್‌ಗೌಡ ಹಾಗೂ ಮಹಾಜನ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿ ದೇಶ-ವಿದೇಶಗಳಲ್ಲಿರುವ ವಿಮಲಯ ಮೂರು ಸಾವಿರ ವಿದ್ಯಾರ್ಥಿಗಳು ಈ ಸಮಾವೇಶದಲ್ಲಿ ಭಾಗವಹಿಸುತ್ತಿದ್ದಾರೆಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಸಂಜೆ 4.30 ಗಂಟೆಗೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಲಘು ಉಪಹಾರದ ವ್ಯವಸ್ಥೆ ಇರುತ್ತದೆ. ಶಿಕ್ಷಣ ಸಂಸ್ಥೆಗೆ ಸಾರ್ಥಕ ಸೇವೆ ಸಲ್ಲಿಸಿದ ಆಧ್ಯಾಪಕರನ್ನು ಮತ್ತು ಸಾಧಕರನ್ನು ಗೌರವಿಸಲಾಗುವುದು ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಎಚ್.ಆರ್. ತಿಮ್ಮೇಗೌಡ, ಡಾ.ಎಚ್. ಶ್ರೀಧರ್, ಡಾ.ಬಿ.ಆರ್. ಜಯಕುಮಾರಿ ಮತ್ತಿತರರು ಇದ್ದರು.

ನಗರದಲ್ಲಿ ಲಾಂಗು, ಮಚ್ಚು: ಆರು ಮಂದಿ ಬಂಧನ

ಮೈಸೂರು: ಠಾಣೆ ಮೇಲೆ ಕಲ್ಲೆಸೆದು ರಾಜ್ಯದಾದ್ಯಂತ ಸದ್ದು ಮಾಡಿದ್ದ ಉದಯಗಿರಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸಣ್ಣ ಕ್ರಿಕೆಟ್ ಆಡುವ ವಿಚಾರವಾಗಿ ಉಂಟಾದ ಜಗಳ ಕೊನೆಗೆ ಸಾರ್ವಜನಿಕ ಸ್ಥಳದಲ್ಲೇ ಲಾಂಗು, ಮಚ್ಚು ಹಿಡಿದು ಹಲ್ಲೆ ನಡೆಸುವ ಹಂತ ತಲುಪಿರುವುದು ಬೆಳಕಿಗೆ ಬಂದಿದೆ.

ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ರಾಜೀವ್ ನಗರ 2ನೇ ಹಂತದಲ್ಲಿ ಜ.18ರಂದು ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಮಕ್ಕಳು ಮನೆ ಮುಂದೆ ಕ್ರಿಕೆಟ್ ಆಡುವ ಕ್ಷುಲ್ಲಕ ವಿಚಾರದಲ್ಲಿ ಒಂದೇ ಸಮುದಾಯದ ಎರಡು ಕುಟುಂಬಗಳ ನಡುವೆ ಗಲಾಟೆ ಆಗಿರುತ್ತದೆ. ಈ ಸಂಬಂಧ ವಿಡಿಯೋ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತ ಪೊಲೀಸರು ಈ ಬಗ್ಗೆ 2 ಪ್ರಕರಣ ದಾಖಲಿಸಿಕೊಂಡು ಒಟ್ಟು 6 ಆರೋಪಿಗಳನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸಿದ್ದಾರೆ.

ಜೆಡಿಎಸ್ ಮುಖಂಡರ ಸಭೆ, ಅಭಿನಂದನಾ ಕಾರ್ಯಕ್ರಮ

ಚಾಟಿ ಬೀಸುವ ನಾಯಕರ ಆಯ್ಕೆ ಮಾಡದಿರಿ: ಡಾ.ಸಾರಾ ಧನುಷ್

ಕೆ.ಆರ್.ನಗರ.:- ಪ್ರಜೆಗಳೇ ಪ್ರಭುಗಳು ನಿಮ್ಮನ್ನಾಳುವ ನಾಯಕನನ್ನು ಆಯ್ಕೆ ಮಾಡುವ ವೇಳೆ ಜನಸೇವಕನನ್ನು ಆಯ್ಕೆ ಮಾಡಬೇಕೆ ವಿನಃ ಚಾಟಿ ಬೀಸುವ ನಾಯಕನನ್ನು ಆಯ್ಕೆ ಮಾಡಬಾರದು ಎಂದು ಮಾಜಿ ಸಚಿವ ಸಾರಾ ಮಹೇಶ್ ಪುತ್ರ ಮೂಳೆ ತಜ್ಞ ಡಾ. ಸಾರಾ ಧನುಷ್ ಸಾರ್ವಜನಿಕರಿಗೆ ಕಿವಿಮಾತು ಹೇಳಿದರು.

ಅವರು ಸಾಲಿಗ್ರಾಮ ತಾಲೋಕಿನ ಕರ್ಪೂರಹಳ್ಳಿ ಗ್ರಾಮದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮ ಮತ್ತು ಜೆಡಿಎಸ್ ಮುಖಂಡರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಇಂದು ಕೆ ಆರ್ ನಗರ ವಿಧಾನಸಭಾ ಕ್ಷೇತ್ರದಲ್ಲಿ ಜನಸಾಮಾನ್ಯರ ಪರವಾಗಿ ಕೆಲಸ ಮಾಡುತ್ತಿಲ್ಲ ಪ್ರತಿಷ್ಠಿತ ಆಸ್ಪತ್ರೆ ಸೇರಿದಂತೆ ಸರ್ಕಾರಿ ಕಚೇರಿಗಳಲ್ಲಿ ಹಣ ನೀಡಿದರೆ ಕೆಲಸ ಇಲ್ಲದಿದ್ದರೆ ಇಲ್ಲ ಎಂಬಂತಾಗಿದ್ದು ಜನರ ಸಮಸ್ಯೆಯನ್ನು ಕೇಳುವಂತ ನಾಯಕನಿಲ್ಲದಿರುವುದು ಇಂಥ ಆಡಳಿತಕ್ಕೆ ಸಾಕ್ಷಿಯಾಗಿದೆ ಎಂದು ನುಡಿದರು. ಅಧಿಕಾರ ನಡೆಸುವವರನ್ನು ಆಯ್ಕೆ ಮಾಡುವಾಗ ಪ್ರಾಮಾಣಿಕ ಮತ್ತು ದಕ್ಷ ವ್ಯಕ್ತಿಯನ್ನು ಆಯ್ಕೆ ಮಾಡಿದಾಗ ಅಧಿಕಾರಿಗಳು ಪ್ರಾಮಾಣಿಕ ಮತ್ತು ದಕ್ಷತೆಯಿಂದ ಕರ್ತವ್ಯ ನಿರ್ವಹಿಸುತ್ತಾರೆ ಆದ್ದರಿಂದ ನೀವುಗಳು ಆಡಳಿತ ನಡೆಸುವ ವ್ಯಕ್ತಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಎಚ್ಚರಿಕೆಯಿಂದ ಆಯ್ಕೆ ಮಾಡುವಂತೆ ತಿಳಿಸಿದ ವೈದ್ಯರು ನಾನು ಈ ಗ್ರಾಮದ ಮೊಮ್ಮಗ ನನ್ನ ಬಾಲ್ಯ ಜೀವನವನ್ನು ಸಾಲಿಗ್ರಾಮ ರಾಂಪುರ ಕರ್ಪೂರಹಳ್ಳಿ ಸೇರಿದಂತೆ ಈ ಭಾಗದಲ್ಲೆಲ್ಲಾ ಬಂಡಿ ಓಡಿಸುವ ಮೂಲಕ ಚಿರಪರಿಚಿತನಾಗಿದ್ದು ನಿಮ್ಮ ಸೇವೆಯನ್ನು ಮಾಡಲು ಸದಾ ಸಿದ್ದನಿದ್ದೇನೆ ಎಂದು ತಿಳಿಸಿದರು.

ನಮ್ಮ ತಂದೆಯನ್ನು ಮೂರು ಬಾರಿ ಆಯ್ಕೆ ಮಾಡಿದ ನೀವು ನಮ್ಮ ಕುಟುಂಬದಲ್ಲಿಮೇಲೆ ಇಟ್ಟಿರುವ ಪ್ರೀತಿ ಮತ್ತು ವಿಶ್ವಾಸವನ್ನು ತೀರಿಸಲು ಸಾಧ್ಯವಿಲ್ಲ ನಾವಿರುವ ತನಕ ನಿಮಗೆ ಚಿರಋಣಿಯಾಗಿದ್ದು ಮುಂದೆಯೂ ಸಹ ನಿಮ್ಮ ಆಶೀರ್ವಾದ ನಮ್ಮ ಕುಟುಂಬದ ಮೇಲಿರಲಿ ವಿದ್ಯೆಯೆಂಬುದು ಯಾರಪ್ಪನ ಸ್ವತ್ತಲ್ಲ ಕಲಿತ ವಿದ್ಯೆಯನ್ನು ಸದ್ಬಳಕೆ ಮಾಡಿಕೊಂಡು ನಾಲ್ಕಾರ್ ಜನಕ್ಕೆ ಸಹಾಯ ಮಾಡಿದಾಗ ಆ ವಿದ್ಯೆ ಮತ್ತು ವಿದ್ಯೆಯನ್ನು ಕಲಿಸಿಕೊಟ್ಟ ಗುರುವಿಗೂ ಸಹ

ಒಳ್ಳೆಯ ಹೆಸರು ಬರುತ್ತದೆ ಎಂದು ತಿಳಿಸಿದರು.

ನಮ್ಮ ತಂದೆ ತಾಯಿ ಮತ್ತು ಗುರು ಕಲಿಸಿಕೊಟ್ಟ ಹಾದಿಯಲ್ಲಿ ನಾನು ನಡೆಯುತ್ತಿದ್ದು ನನಗೆ ಅಧಿಕಾರ ಮತ್ತು ಹಣ ಸಂಪಾದನೆ ಮಾಡುವ ಯಾವುದೇ ಉದ್ದೇಶವಿಲ್ಲ ಈ ಕ್ಷೇತ್ರದ ಜನತೆಯ ಸೇವೆ ಮಾಡಬೇಕೆಂಬ ಉದ್ದೇಶದಿಂದ ಪ್ರತಿ ವಾರದ ಎರಡು ದಿನ ಕೆ ಆರ್ ನಗರ ಮತ್ತು ಸಾಲಿಗ್ರಾಮ ತಾಲೂಕಿನಲ್ಲಿ ಉಚಿತ ವೈದ್ಯ ಸೇವೆ ಮಾಡುತ್ತಿದ್ದು ಇದರ ಉಪಯೋಗವನ್ನು ಪಡೆದುಕೊಳ್ಳುವಂತೆ ತಿಳಿಸಿದ್ದಲ್ಲದೆ ಇದರಲ್ಲಿ ಯಾವುದೇ ರೀತಿಯ ಉದ್ದೇಶವಿಲ್ಲ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದಂತ ಊರಿನ ಹಿರಿಯ ಮುಖಂಡ ಶ್ರೀನಿವಾಸ್ ಶೆಟ್ಟರು ಮಾತನಾಡಿ ಇಂದು ವೈದ್ಯಕೀಯ ಕ್ಷೇತ್ರ ವ್ಯಾಪಾರ ಕ್ಷೇತ್ರವಾಗಿದ್ದರು ಅದರಲ್ಲಿಯೂ ರಾಜ್ಯದಲ್ಲಿ ಮೂರನೇ ರ್ಯಾಂಕ್ ಪಡೆದಿರುವ ತಜ್ಞವೈದ್ಯ ಡಾ. ಸಾರಾ ಧನುಶ್ ರವರನ್ನು ದೂರವಾಣಿ ಕರೆ ಮಾಡಿದ ತಕ್ಷಣ ಅಪಘಾತದಿಂದ ಮನೆಯಲ್ಲಿ ಸಾವು ಬದುಕಿನ ಮಧ್ಯೆ ಹೋರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಯಾವ ಜಾತಿ ಯಾವ ಪಕ್ಷ ಎಂಬುದನ್ನು ಕೇಳದೆ ತಮ್ಮ ಸ್ವಂತ ಆಂಬುಲೆನ್ಸ್ ಕಳುಹಿಸಿ ಕರೆಸಿಕೊಂಡು ಸಂಪೂರ್ಣ ಚಿಕಿತ್ಸೆಯನ್ನು ಸ್ವಂತ ಹಣದಿಂದಲೇ ಖರ್ಚು ಮಾಡಿ ಆ ವ್ಯಕ್ತಿ ಮತ್ತು ಕುಟುಂಬಕ್ಕೆ ಸಹಾಯ ಮಾಡಿದಂತ ವ್ಯಕ್ತಿ ಸಾರಾ ಮಹೇಶ್ ಅಣ್ಣನವರ ಪುತ್ರ ಸಾರಾ ಧನುಷ್ ಎಂದು ಗುಣಗಾನ ಮಾಡಿದರು.

ಕಾರ್ಯಕ್ರಮದಲ್ಲಿ ಕರ್ಪೂರಹಳ್ಳಿ ಮಠದ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರೆ ನಿವೃತ್ತ ಪೀಡಿಒ ಮಂಜುನಾಥ್ ತಾಲ್ಲೂಕ್ ಜೆಡಿಎಸ್ ಅಧ್ಯಕ್ಷ ಮೆಡಿಕಲ್ ರಾಜಣ್ಣ ಕರ್ಪೂರಹಳ್ಳಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಪ್ರಸನ್ನ ತಾಲೂಕ್ ಯುವ ಜೆಡಿಎಸ್ ಅಧ್ಯಕ್ಷ ಕರ್ತಳು ಮಧು ಜೆಡಿಎಸ್ ವಕ್ತಾರ ಕೆಎಲ್ ರಮೇಶ್ ಮಾತನಾಡಿದರು ವೇದಿಕೆಯಲ್ಲಿ ನಿವೃತ್ತ ಶಿಕ್ಷಕ ರಘು ಮುಖಂಡರುಗಳಾದ ಅಶೋಕ ಪಾಪಣ್ಣ ಪುರುಷೋತ್ತಮ ಕೃಷ್ಣ ಶೆಟ್ರು ಲಾಲುಸಾಬ್ ಪ್ರಬಣ್ಣ ಪ್ರಕಾಶ್ ಕುಚಲ ಸುನಿಲ್ ಸಾಗರ್ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಸಾಕು ನಾಯಿ ಹೊತ್ತೊಯ್ದ ಚಿರತೆ

ಚಾಮರಾಜನಗರ, ಜಿಲ್ಲೆಯಲ್ಲಿ ಚಿರತೆ ಉಪಟಳ ದಿನೇ ದಿನೇ ಹೆಚ್ಚುತ್ತಿದೆ. ಸ್ಥಳೀಯರು ಆತಂಕದ ಲ್ಲಿದ್ದು, ಜಮೀನಿಗೆ ತೆರಳಲು ರೈತರು ಹಿಂದೇಟು ಹಾಕುತ್ತಿದ್ದಾರೆ. ಇದೀಗ ಸಾಕು ನಾಯಿಯನ್ನು ಚಿರತೆ ಹೊತ್ತೊಯ್ದ ಘಟನೆ ಗುಂಡ್ಲುಪೇಟೆ ತಾಲೂಕಿನ ಚೆನ್ನಮಲ್ಲಿಪುರದಲ್ಲಿ ನಡೆದಿದೆ.

ಚೆನ್ನಮಲ್ಲಿಪುರ ಗ್ರಾಮದ ಸುಬ್ಬಪ್ಪ ಎಂಬುವರ ಜಮೀನಿನಲ್ಲಿ ಸಾಕುನಾಯಿಯನ್ನು ಚಿರತೆ ಗುರುವಾರ ತಡರಾತ್ರಿ ಬೇಟೆಯಾಡಿದ್ದು, ವಿಡಿಯೋ ದಲ್ಲಿ ಸೆರೆಯಾಗಿದೆ.

ಹಸುವಿನ ಮೇಲೆ ದಾಳಿ ಮಾಡಲು ಚಿರತೆ ಬಂದಿತ್ತು. ಆದರೆ ಕೂಡಲೇ ಎಚ್ಚೆತ್ತ ಹಸು ಪ್ರತಿ ರೋಧ ತೋರಿಸಿದೆ. ಅಲ್ಲೇ ಇದ್ದ ಸಾಕು ನಾಯಿ ಕೂಡ ಪ್ರತಿರೋಧ ತೋರಿಸಿದೆ. ಆದರೆ ಚಿರತೆ ಅಟ್ಟಾಡಿಸಿ ನಾಯಿಯನ್ನು ಹೊತ್ತೊಯ್ದಿರುವುದು ವಿಡಿಯೋದಲ್ಲಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ಅರಣ್ಯ ವಲಯದಲ್ಲಿ ಈ ಘಟನೆ ನಡೆದಿದೆ.

ಈ ಕುರಿತು ರೈತ ಸುಬ್ಬಪ್ಪ ಅವರ ಮಗ ಬಸವರಾಜು ಪ್ರತಿಕ್ರಿಯಿಸಿ, ಚಿರತೆ ದೃಶ್ಯ ಸಿಸಿಟಿವಿ ಯಲ್ಲಿ ಸೆರೆಯಾಗಿದೆ. ನಾಯಿ ಚೀರಾಟದಿಂದ ಎಚ್ಚೆತ್ತು ನೋಡುವಷ್ಟರಲ್ಲಿ ಚಿರತೆ ಹೊತ್ತೊಯ್ದಿತ್ತು. ಅರಣ್ಯಾಧಿಕಾರಿಗಳು ಬಂದು ಪರಿಶೀಲನೆ ನಡೆಸಿದ್ದಾರೆ. ಆದರೆ, ಚಿರತೆ ಸೆರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ, ಜಮೀನಿನಲ್ಲಿರಲು ಆತಂಕದ ಸ್ಥಿತಿ ಇದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಗ್ರಾಮ ಪಂಚಾಯಿತಿ ಆಡಳಿತ ಅವಧಿ ವಿಸ್ತರಣೆಗೆ ಗುರುಪ್ರಸಾದ್ ಆಗ್ರಹ

ಚಾಮರಾಜನಗರ, ಗ್ರಾಮ ಪಂಚಾಯಿತಿಯ ಆಡಳಿತ ಅವಧಿಯನ್ನು ಕನಿಷ್ಠ ಆರು ತಿಂಗಳ ಕಾಲ ಮುಂದುವರಿಸುವಂತೆ ಸಾಗಡೆ ಗ್ರಾಮ ಪಂಚಾಯಿತಿ ಸದಸ್ಯ ಎಸ್.ಆರ್. ಗುರುಪ್ರಸಾದ್ ಆಗ್ರಹಿಸಿದರು.

ಈ ಕುರಿತು ಪತ್ರಿಕಾ ಹೇಳಿಕೆ ಮೂಲಕ ಮಾತನಾಡಿದ ಅವರು, ಪ್ರಸ್ತುತ ಗ್ರಾಮ ಪಂಚಾಯಿತಿಯಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದು, ಅವುಗಳನ್ನು ಪೂರ್ಣಗೊಳಿಸಲು ಹೆಚ್ಚಿನ ಸಮಯ ಅಗತ್ಯವಿದೆ. ಅಲ್ಲದೆ, ಪಂಚಾಯಿತಿಯ ಆಡಳಿತ ಅವಧಿ ಅಂತ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಹೊಸ ಚುನಾವಣೆ ಪ್ರಕ್ರಿಯೆ ಆರಂಭವಾದರೆ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆ ಉಂಟಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ಚರಂಡಿ ವ್ಯವಸ್ಥೆ, ಸ್ವಚ್ಛತೆ ಹಾಗೂ ಸಾರ್ವಜನಿಕ ಆರೋಗ್ಯ ಸಂಬಂಧಿತ ಕೆಲಸಗಳು ಇನ್ನೂ ಪೂರ್ಣಗೊಳ್ಳಬೇಕಿರುವುದರಿಂದ, ಇವುಗಳಿಗೆ ನಿರಂತರ ಆಡಳಿತ ಅಗತ್ಯವಿದೆ. ಆಡಳಿತಾವಧಿಯನ್ನು ಆರು ತಿಂಗಳು ವಿಸ್ತರಿಸಿದಲ್ಲಿ ಜನಸಾಮಾನ್ಯರಿಗೆ ಆಗುತ್ತಿರುವ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಸಿಗಲಿದೆ ಎಂದು ಹೇಳಿದರು.

ಸರ್ಕಾರವು ಜಾರಿಗೆ ತಂದಿರುವ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರಸ್ತುತ ಆಡಳಿತ ಮುಂದುವರಿಯುವುದು ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಗ್ರಾಮ ಪಂಚಾಯಿತಿಯ ಆಡಳಿತ ಅವಧಿ ವಿಸ್ತರಣೆ ಕುರಿತು ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಜಿಲ್ಲಾಧಿಕಾರಿ ಶ್ರೀರೂಪಗೆ ಅಭಿನಂದನೆ

ಚಾಮರಾಜನಗರ: ಚಾಮರಾಜನಗರ ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರನ್ನು ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿಯ ಸದಸ್ಯರು ಭೇಟಿ ಮಾಡಿ ಅಭಿನಂದಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಗೆ ಸಮಿತಿಯ ಸದಸ್ಯರು ತೆರಳಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಶಾಲು ಹೊದಿಸಿ, ಹಾರ ಹಾಕಿ, ಪೇಟಾ ತೊಡಿಸಿ, ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಾತನಾಡಿ ಗ್ಯಾರಂಟಿ ಸಮಿತಿಯ ಸದಸ್ಯ ಮಲ್ಲಯ್ಯನಪುರ ಚಿನ್ನಸ್ವಾಮಿ, ಜಿಲ್ಲಾಧಿಕಾರಿಗಳಾಗಿ ನಮ್ಮ ಜಿಲ್ಲೆಗೆ ಆಗಮಿಸಿರುವುದು ಸಂತಸವಾಗಿದೆ. ಹಿಂದುಳಿದ ಗಡಿ ಜಿಲ್ಲೆಯ ಅಭಿವೃದ್ಧಿ ಹಾಗೂ ಹೊಸ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಚಾಮರಾಜನಗರ ಜಿಲ್ಲೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಮುಂದಾಗಬೇಕು ಎಂದು ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು.

ಸನ್ಮಾನ ಸ್ವೀಕರಿಸಿದ ಜಿಲ್ಲಾಧಿಕಾರಿ ಶ್ರೀರೂಪ ಮಾತನಾಡಿ, ಜಿಲ್ಲೆಯ ಅಭಿವೃದ್ಧಿ ಹಾಗೂ ಶೈಕ್ಷಣ ಕ ಪ್ರಗತಿಗೆ ಉದ್ಯೋಗ ಸೃಷ್ಟಿ,ಸೇರಿದಂತೆ ಅನೇಕ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಬದ್ದವಾಗಿದ್ದು ಅಭಿವೃದ್ಧಿ ಹೊಂದಿದ ಜಿಲ್ಲೆಯ ಜೊತೆಗೆ ಕೊಂಡೊಯ್ಯುವುದು ನಮ್ಮೆಲ್ಲರ ಗುರಿಯಾಗಬೇಕು ಎಂದರು. ಈ ಸಂದರ್ಭದಲ್ಲಿ ತಾಲೂಕು ಗ್ಯಾರಂಟಿ ಸಮಿತಿಯ ಸದಸ್ಯರಾದ ಕುಮಾರ್ ಮರಿಯಾಲ ಹುಂಡಿ ರಮೇಶ್ ಹೆಗ್ಗೋಠಾರ, ರಾಜೇಶ್, ಕುಮಾರ್ ಮಾದಾಪುರ, ,ಶಿವಕುಮಾರ್, ಮಂಜುಳಾ ಚಾ.ನಗರ, ಅರಕಲವಾಡಿ ಮಲ್ಲಿಕಾರ್ಜುನ್ ಮೊದಲಾದವರು ಇದ್ದರು.

ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ

ಚಾಮರಾಜನಗರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ಜ.21 ಮತ್ತು 22 ರಂದು ನಗರದಲ್ಲಿ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ. ಸಿ. ಎನ್ .ರೇಣಕಾದೇವಿ ತಿಳಿಸಿದರು.

ಜ.21 ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಕ್ರೀಡಾಕೂಟವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂ ಕಟೇಶ್ ಉದ್ಘಾಟಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ಸಂಸದ ಸುನೀಲ್‌ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ವಿವೇಕಾನಂದ, ಡಾ.ತಿಮ್ಮಯ್ಯ, ಜಿಲ್ಲಾಧಿಕಾರಿ ಶ್ರೀರೂಪಾ, ಜಿಪಂ ಸಿಇಒ ಮೋನಾರೋತ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದರು.

ಪುರುಷರ ವಿಭಾಗದಲ್ಲಿ 40 ವರ್ಷ ಒಳಪಟ್ಟವರಿಗೆ, 40 ರಿಂದ 50 ಹಾಗೂ 50 ರಿಂದ 60 ವರ್ಷದವರು ಎಂದು ಮೂರು ವಿಭಾಗದಲ್ಲಿ, ಮಹಿಳೆಯರ ವಿಭಾಗದಲ್ಲಿ 35 ವರ್ಷ ಒಳಪಟ್ಟವರು ಹಾಗೂ 35 ವರ್ಷ ಮೇಲ್ಪಟ್ಟವರಿಗೆ ಕ್ರೀಡಾಕೂಟ ಆಯೋಜನೆ ಮಾಡಲಾಗಿದ್ದು, ಇದರ ಜತೆಗೆ ಸಾಂಸ್ಕೃತಿಕ ಕಾರ್ಯ ಕ್ರಮಗಳನ್ನು ಸಹ ಆಯೋಜನೆ ಮಾಡಲಾಗಿದೆ ಎಂದು ತಿಳಿಸಿದರು. ಈ ಬಾರಿ ಅಗ್ನಿಶಾಮಕ ಹಾಗೂ ದೈಹಿಕ ಶಿಕ್ಷಕರಿಗೂ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದೆ. ಕ್ರೀಡಾಕೂಟದಲ್ಲಿ ಭಾಗವಹಿಸುವ ನೌಕರರಿಗೆ ಎರಡು ದಿನಗಳ ಓಓಡಿ ಪ್ರಮಾಣಪತ್ರ ನೀಡಲಾಗುವುದು. ಕ್ರೀಡಾಂಗಣದಲ್ಲಿ ಲಭ್ಯವಿರುವ ಕ್ರೀಡೆಯನ್ನು ಮಾತ್ರ ನಡೆಸಲಾಗುವುದು. ಉಳಿದಂತೆ ಕ್ರೀಡಾ ಸೌಲಭ್ಯಗಳಿಲ್ಲದ ಕ್ರೀಡೆಗಳನ್ನು ಮೈಸೂರಿನಲ್ಲಿ ನಡೆಸಲಾಗುವುದು ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಭರತ್ ಭೂಷಣ್, ಕಾರ್ಯಾಧ್ಯಕ್ಷ ಮಹದೇವಸ್ವಾಮಿ, ಖಜಾಂಚಿ ಶಿವಕುಮಾರಯ್ಯ, ರಾಜ್ಯ ಪರಿಷತ್ ಸದಸ್ಯ ನಟರಾಜು, ಗೌರವ ಅಧ್ಯಕ್ಷ ಎಸ್.ಮಹದೇವಯ್ಯ ಹಾಜರಿದ್ದರು.

ಸ್ವಚ್ಛ ರಾಮನಗರಕ್ಕೆ ಮೊದಲ ಹೆಜ್ಜೆ

ತ್ಯಾಜ್ಯ ತುಂಬಿ ಅಸಹ್ಯಸುತ್ತಿದ್ದ ಸ್ಥಳಗಳನ್ನು ಸುಂದರಗೊಳಿಸುತ್ತಿರುವ ನಗರಸಭೆ | ವೇಸ್ಟ್ ಟು ವಂಡರ್, ವೇಸ್ಟ್ ಟು ಆರ್ಟ್ ಪರಿಕಲ್ಪನೆ | ತ್ಯಾಜ್ಯ ಸಂಗ್ರಹಣಾ ವಾಹನಗಳಿಗೆ ಕಸ ಕೊಡಲು ನಾಗರೀಕರಲ್ಲಿ ಅರಿವು

ರಾಮನಗರ: ನಾಗರೀಕರು ತಾವೇ ಬೀದಿ ಬದಿಯಲ್ಲಿ ಕಸ ಸುರಿದು ತದನಂತರ ತಾವೇ ಅಸಹ್ಯಿಸುತ್ತಿದ್ದ ಸ್ಥಳಗಳನ್ನು ಸುಂದರಗೊಳಿಸುವ ಕಾಯಕಕ್ಕೆ ಸ್ಥಳೀಯ ನಗರಸಭೆ ಮುಂದಾಗಿದೆ. ನಿಯುಪಯುಕ್ತ ವಸ್ತುಗಳನ್ನು ಬಳಸಿ ಅವುಗಳಿಗೆ ಕಲಾತ್ಮಕ ರೂಪ ಕೊಟ್ಟು, ಕಸ ಸಂಗ್ರಹಣೆಯಾಗುತ್ತಿದ್ದ ಸ್ಥಳಗಳನ್ನು ಸುಂದರಗೊಳಿಸಿ, ನಾಗರೀಕರ ಗಮನ ಸೆಳೆಯುವಂತೆ ಮಾಡುವುದು, ಹಾಗೂ ತ್ಯಾಜ್ಯವನ್ನು ನಗರ ಸಭೆಯ ವಾಹನಗಳಿಗೆ ಕೊಡಬೇಕು ಎಂಬ ಅರಿವು ಮೂಡಿಸುವ ಉದ್ದೇಶದಲ್ಲಿ ವೇಸ್ಟ್ ಟು ಆರ್ಟ್, ವೇಸ್ಟ್ ಟು ವಂಡರ್ ಪರಿಕಲ್ಪನೆಗೆ ಮುಂದಾಗಿದೆ.

ನಗರಸಭೆಯ ಈ ನೂತನ ಪರಿಕಲ್ಪನೆಯ ಬಗ್ಗೆ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮಾತನಾಡಿದರು, ನಗರದಾದ್ಯಂತ ಬೀದಿ ಬದಿಯಲ್ಲಿ ಹೆಚ್ಚು ಕಸ ಸಂಗ್ರಹಣೆಯಾಗುತ್ತಿದ್ದ ಸ್ಥಳಗಳನ್ನು ಬ್ಲಾಕ್ ಸ್ಪಾಟ್‌ಗಳೆಂದು ಗುರುತಿಸಿದ್ದೇವೆ. ಇಲ್ಲಿ ಈಗ ಶೇ 90ರಷ್ಟು ಕಸ ಸುರಿಯುವುದು ಕಡಿಮೆಯಾಗಿದೆ. ಆದರೂ ಕೆಲವೆಡೆ ಇನ್ನು ನಿಯಂತ್ರಣಕ್ಕೆ ಬಂದಿಲ್ಲ. ಇಂತಹ ಸ್ಥಳಗಳನ್ನು ಸುಂದರಗೊಳಿಸಿ, ನಾಗರೀಕರ ಗಮನ ಸೆಳೆಯಲು ಹೊಸ ಪ್ರಯತ್ನ ಮಾಡಿದ್ದೇವೆ. ವೇಸ್ಟ್ ಟು ಆರ್ಟ್, ವೇಸ್ ಟು ವಂಡರ್ ಪರಿಕಲ್ಪನೆಗೆ ಮುಂದಾಗಿದ್ದೇವೆ ಎಂದರು.

ಸ್ವಚ್ಛ ರಾಮನಗರಕ್ಕೆ ಮೊದಲ ಆದ್ಯತೆ

ಸ್ವಚ್ಛ ರಾಮನಗರಕ್ಕೆ ಸಂಕಲ್ಪಿಸಿದ್ದೇವೆ. ಹಲವಾರು ಕ್ರಮಗಳನ್ನು ಕೈಗೊಂಡಿದ್ದೇವೆ. ಬೀದಿ ಬದಿ ಹೆಚ್ಚು ಕಸ ಸಂಗ್ರಹಣಯಾಗುತ್ತಿದ್ದ 52 ಸ್ಥಳಗಳನ್ನು ಗುರುತಿಸಿದ್ದೇವೆ. ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಕಸ ಎಸೆಯುವವರನ್ನು ಪತ್ತೆ ಹಚ್ಚಿ, ದಂಡ ವಿಧಿಸುವುದಾಗಿಯೂ ಎಚ್ಚರಿಸಿದ್ದೇವೆ. ಆದರೂ ಕೆಲವು ಸ್ಥಳಗಳಲ್ಲಿ ನಿಯಂತ್ರಣಕ್ಕೆ ಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ತಾವು ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡು ಒಂದು ವರ್ಷವಾಗಿದೆ. ಸ್ವಚ್ಛ ರಾಮನಗರಕ್ಕೆ ಅಂದೇ ಸಂಕಲ್ಪಿಸಲಾಗಿತ್ತು. ಸ್ವಚ್ಚತೆಯ ಬಗ್ಗೆ, ತ್ಯಾಜ್ಯ ವಿಲೇವಾರಿ ಬಗ್ಗೆ ನಾಗರೀಕರಲ್ಲಿ ಅರಿವು ಮೂಡಿಸಲಾಗಿತ್ತು. ಬೀದಿ ಬದಿಯಲ್ಲಿ ಕಸ ಎಸೆಯದಂತೆ, ನಗರಸಭೆಯ ಕಸ ಸಂಗ್ರಹಣೆಯ ವಾಹನಗಳಿಗೆ ಕಸ ನೀಡುವಂತೆ ನಾಗರೀಕರಲ್ಲಿ ಮನವಿ ಮಾಡಲಾಗಿತ್ತು. ತದ ನಂತರ ಎಚ್ಚರಿಸಲಾಗಿತ್ತು ಎಂದರು.

ಇದೀಗ ಸ್ವಚ್ಛ ರಾಮನಗರ ಸಾಕಾರಗೊಳಿಸುವ ನಿಟ್ಟಿನಲ್ಲಿ ಇದೀಗ ಮೊದಲ ಹೆಜ್ಜೆ ಇಡುತ್ತಿದ್ದೇವೆ. ಮೊದಲ ಆದ್ಯತೆಯಾಗಿ ಪರಿಗಣಿಸಿದ್ದೇವೆ. ಬೀದಿ ಬದಿಯಲ್ಲಿ ಕಸ ಎಸೆಯುವುದು ನಿಯಂತ್ರಣ ಬಾರದ 15 ಸ್ಥಳಗಳನ್ನು ಗುರುತಿಸಲಾಗಿದೆ. ಈ ಸ್ಥಳಗಳನ್ನು ನಿರುಪಯುಕ್ತ ವಸ್ತುಗಳನ್ನು ಬಳಸಿ ಸುಂದರಗೊಳಿಸುವ ಪರಿಕಲ್ಪನೆಗೆ ಮುಂದಾಗಿದ್ದೇವೆ ಎಂದರು.

ವೇಸ್ಟ್ ಟು ವಂಡರ್

ಹಳೆ ಟೈರುಗಳು, ಹಳೇ ಟೈಲ್ಸ್, ಇಟ್ಟಿಗೆ, ಹಾಲೋ ಬ್ಲಾಕ್ಸ್, ಹೀಗೆ ಉಪಯೋಗಕ್ಕೆ ಬಾರದ ವಸ್ತುಗಳನ್ನು ಬಳಸಿಕೊಂಡು, ಬ್ಲಾಕ್ಸ್ ಸ್ಪಾಟ್‌ಗಳನ್ನು ಕಲಾತ್ಮಕ ರೂಪ ಕೊಟ್ಟು ಸುಂದರಗೊಳಿಸುತ್ತೇವೆ. ಮೂಗು ಮರಿದು ಓಡಾಡಬೇಕಾದ ಸ್ಥಳಗಳನ್ನು ಸುಂದರಗೊಳಿಸಿ ನಾಗರೀಕರ ಗಮನ ಸೆಳೆಯಲು ಪ್ರಯತ್ನಿಸುತ್ತೇವೆ. ನಮ್ಮ ಪ್ರಯತ್ನಗಳು ನಾಗರೀಕರು ಮನೆ, ಅಂಗಡಿ ತ್ಯಾಜ್ಯವನ್ನು ಕಸ ಸಂಗ್ರಹಣಾ ವಾಹನಗಳಿಗೆ ಕೊಡಬೇಕು ಅನ್ನು ಮನಸ್ಥಿತಿಗೆ ತರಬೇಕು ಎನ್ನುವುದು ನಮ್ಮ ಉದ್ದೇಶ ಎಂದರು.

ಬ್ಲಾಕ್ ಸ್ಪಾಟ್‌ಗಳನ್ನು ಸುಂದರಗೊಳಿಸುವ ಕೆಲಸಕ್ಕೆ ನಗರಸಭೆ ನೇಮಿಸಿರುವ ಸ್ವಚ್ಚತೆಯ ರಾಯಬಾರಿ ಚಿತ್ರಾರಾವ್ ಅವರ ತಂಡ, ಎನ್.ಎಸ್.ಎಸ್ ವಿದ್ಯಾರ್ಥಿಗಳ ತಂಡ, ನಗರಸಭೆಯ ಕಮ್ಯುನಿಟಿ ಮೊಬಿಲೈಸರ್‌ಗಳು ತೊಡಗಿಸಿಕೊಂಡಿದ್ದಾರೆ ಎಂದು ವಿವರಿಸಿದರು. ಈ ವೇಳೆ ನಗರಸಭಾ ಆಯುಕ್ತ ಡಾ.ಜಯಣ್ಣ ಮಾತನಾಡಿ, ಬ್ಲಾಕ್ ಸ್ಪಾಟ್‌ಗಳನ್ನು ಸುಂದರಗೊಳಿಸುವುದು ಮಾತ್ರವಲ್ಲದೆ, ಇಂತಹ ಸ್ಥಳಗಳಲ್ಲಿ ನಿರಂತರವಾಗಿ ನಿಗಾ ವಹಿಸಲಾಗುವುದು ಎಂದರು. ಎಇಇ ಸುಬ್ರಮಣಿ ಮಾತನಾಡಿ ಈ ಕುರಿತು ಇನ್ನಷ್ಟು ಮಾಹಿತಿ ಕೊಟ್ಟರು.

ಸಚಿವರ ಎದುರೇ ವೈದ್ಯರು, ಸಿಬ್ಬಂದಿ ಸಮಸ್ಯೆಗಳ ಅನಾವರಣ

ಮೈಸೂರು: ಅಗ್ನಿ ಶಾಮಕದಳದಿಂದ ಅನುಮತಿ ದೊರೆಯುತ್ತಿಲ್ಲ, ವೈದ್ಯರ ಮೇಲಿನ ಹಲ್ಲೆ ಪ್ರಕರಣ ಕಡಿಮೆ ಆಗಿಲ್ಲ ಎಂಬುದು ಸೇರಿ ಅನೇಕ ಸಮಸ್ಯೆಗಳು ಆರೋಗ್ಯ ಸಚಿವ ದಿನೇಶ್ ಗಂಡೂರಾವ್ ಬಳಿ ಅನಾವರಣಗೊಂಡವು.

ಮೈಸೂರು ಅಸೋಷಿಯೇಷನ್ ಹಾಸ್ಪಿಟಲ್ ಆ?ಯಂಡ್ ನರ್ಸಿಂಗ್ ಹೋಮ್ (ಮಹಾನ್)ಸದಸ್ಯರೊಂದಿಗೆ ನಡೆದ ಸಂವಾದದಲ್ಲಿ ಖಾಸಗಿ ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿಗಳೊಟ್ಟಿಗಿನ ಸಂವಾದದಲ್ಲಿ ಅನೇಕ ಸಮಸ್ಯೆಗಳು ಕೇಳಿ ಬಂದವು. ಎಲ್ಲವನ್ನೂ ಆಲಿಸಿದ ಸಚಿವರ ಸಮಸ್ಯೆಗಳ ಬಗೆಹರಿಸುವ ಭರವಸೆ ನೀಡಿದರು. ಕೆಲ ಆಸ್ಪತ್ರೆಗೆ ಅಗ್ನಿಶಾಮಕ ದಳದಿಂದ ಅಗ್ನಿ ಸುರಕ್ಷತೆಯ ಪ್ರಮಾಣ ಪತ್ರ ಸಿಗದೇ ಇರುವುದರಿಂದ ಕೋಟ್ಯಂತರ ರೂ. ಸಾಲಮಾಡಿ ಆಸ್ಪತ್ರೆ ಕಟ್ಟಿದವರು ಆಸ್ಪತ್ರೆ ನಡೆಸಲಾಗದೇ ಕಷ್ಟ ಪಡುತ್ತಿದ್ದಾರೆ. ಇದರ ಬಗ್ಗೆ ಅಗ್ನಿಶಾಮಕ ದಳದ ಇಲಾಖೆಯೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸಿಕೊಡಿ ಎಂದು ಕೆಲ ವೈದ್ಯರು ಕೇಳಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಸಚಿವ ದಿನೇಶ್ ಗುಂಡೂರಾವ್, ಅಗ್ನಿಶಾಮಕ ದಳ ಇಲಾಖೆಯ ಮುಖ್ಯಸ್ಥರಿಂದ ಮಾಹಿತಿ ಪಡೆದು ,ಮುಂದಿನ ಕ್ರಮ ಕೈಗೊಳ್ಳುತ್ತೇನೆ. ಅಲ್ಲದೇ, ವೈದ್ಯರು ಹಾಗೂ ಸಿಬ್ಬಂದಿಗಳ ಹಲ್ಲೆ ಮಾಡುವುದು, ಹಲ್ಲೆ ಮಾಡಿದ ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದು ಕೂಡ ಅಪರಾಧವಾಗಿದೆ ಎಂದರು.

ಸರಕಾರ ಯೋಜನೆಗಳ ಮೂಲಕ ರೋಗಿಗಳನ್ನ ಗುಣಪಡಿಸಲಾಗುತ್ತಿದೆ. ಆದರೆ, ಸರಕಾರದಿಂದ ಆ ಯೋಜನೆಗಳ ಹಣವನ್ನು ಖಾಸಗಿ ಆಸ್ಪತ್ರೆಗೆ ತಡವಾಗಿ ಬಿಲ್‌ಗಳು ಅಗುತ್ತಿವೆ ಎಂದು ಕೆಲ ವೈದ್ಯರು ಹೇಳಿದರು.ಇದಕ್ಕೆ ಉತ್ತರಿಸಿ ಸಚಿವರು, ತಿಂಗಳೊಳಗೆ ಯೋಜನೆಯ ಹಣ ನೀಡುವಂತೆ ಸೂಚಿಸುತ್ತೇವೆ ಎಂದರು.

ಇದೇ ವೇಳೆಯಲ್ಲಿ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್, ತಮ್ಮ ಸಮಸ್ಯೆಗಳ ಮನವಿ ಪತ್ರವನ್ನು ಸಚಿವರಿಗೆ ನೀಡಿದರು. ಸಂವಾದದಲ್ಲಿ ಡಿಎಚ್‌ಒ ಡಾ.ಕುಮಾರಸ್ವಾಮಿ, ಮಹಾನ್ ನಿಕಟಪೂರ್ವ ಅಧ್ಯಕ್ಷ ಡಾ.ಜಾವೀದ್ ನಯೀಮ್, ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್, ಉಪಾಧ್ಯಕ್ಷ ಡಾ.ಬಿ.ಎನ್.ರಾಜೀವ್ ಮತ್ತಿತರರು ಇದ್ದರು.

ಚಂದ್ರಶೆಟ್ಟಿ ಮಡಿವಾಳ ಶೆಟ್ಟರ ತಾಲೂಕು ಅಧ್ಯಕ್ಷ

ಎಚ್.ಡಿ.ಕೋಟೆ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ವೀರ ಮಡಿವಾಳ ಸಂಘದ ಸಭೆಯಲ್ಲಿ ಮುಂದಿನ ಅವಧಿಗೆ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

2026ನೇ ಸಾಲಿಗೆ ಎಚ್.ಡಿ.ಕೋಟೆ ತಾಲೂಕು ನೂತನ ಅಧ್ಯಕ್ಷರಾಗಿ ಎಲೆಹುಂಡಿ ಚಂದ್ರಶೆಟ್ಟಿ, ಗೌರವಾಧ್ಯಕ್ಷರಾಗಿ ಬಟ್ಟೆ ಮಹದೇವಶೆಟ್ಟಿ, ತಾಲೂಕು ಉಪಾಧ್ಯಕ್ಷರಾಗಿ ರಮೇಶ್, ಪ್ರಧಾನ ಕಾರ್ಯದರ್ಶಿಯಾಗಿ ಹೇಮಂತ್.ಎನ್.ಸಹಕಾರ್ಯದರ್ಶಿ ವಿಜಯ್ ಕುಮಾರ್, ಗ್ರಾಮಾಂತರ ಉಪಾಧ್ಯಕ್ಷರಾಗಿ ಮಹದೇವ ಶೆಟ್ಟಿ, ವೆಂಕಟರಾಜು, ಖಜಾಂಚಿ ನಟರಾಜು ಹಾಗೂ ಹಲವು ನಿರ್ದೇಶಕರನ್ನು ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷ ಎಲೆಹುಂಡಿ ಚಂದ್ರು ಶೆಟ್ಟಿ ಮಾತನಾಡಿ, ನಮ್ಮ ಸಮಾಜದ ಮುಖಂಡರು ಈ ದಿನ ನನಗೆ ದೊಡ್ಡ ಜವಾಬ್ದಾರಿಯನ್ನು ನೀಡಿದ್ದಾರೆ. ತಾಲೂಕಿನಲ್ಲಿ ನಮ್ಮ ಸಮುದಾಯ ಬಹಳ ಹಿಂದುಳಿದಿದ್ದು, ಸರ್ಕಾರದಿಂದ ಬರುವ ಸವಲತ್ತುಗಳನ್ನು ತಲುಪಿಸಲು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಹಾಗೂ ಸಮುದಾಯದ ಮುಖಂಡರ ವಿಶ್ವಾಸ ಪಡೆದು ಸಮುದಾಯ ಭವನ ನಿರ್ಮಾಣಕ್ಕೆ ಶ್ರಮವಹಿಸಲಾಗುವುದು. ಈಗಾಗಲೇ ತಾಲೂಕಿನ ಶಾಸಕ ಅನಿಲ್ ಚಿಕ್ಕಮಾದು ಅವರು ಪಟ್ಟಣ ವ್ಯಾಪ್ತಿಯಲ್ಲಿ ಎಂಟು ಗುಂಟೆ ಜಾಗವನ್ನು ಸಮುದಾಯ ಭವನ ನಿರ್ಮಾಣಕ್ಕೆ ಕಳೆದ ವರ್ಷ ನೀಡಿದ್ದಾರೆ. 25 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ. ಮುಂದಿನ ದಿನದಲ್ಲಿ ಸಮುದಾಯದ ಮುಖಂಡರ ಜೊತೆ ಶಾಸಕರ ಹಾಗೂ ಸಂಸದರನ್ನು ಭೇಟಿಯಾಗಿ ಮತ್ತಷ್ಟು ಹೆಚ್ಚು ಅನುದಾನ ತಂದು ಸಮುದಾಯ ಭವನದ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದರು. ಮಾಜಿ ಅಧ್ಯಕ್ಷ ಕೆ. ನಾಗಶೆಟ್ಟಿ ಮಹೇಶ್ವರ್, ಕೆಂಪಶೆಟ್ಟಿ, ಜಯರಾಮ್ ಶೆಟ್ಟಿ, ತಿಮ್ಮ ಶೆಟ್ಟಿ, ಯಜಮಾನರಾದ ಬಸವರಾಜು ಶೆಟ್ಟಿ, ಸ್ವಾಮಿ ಶೆಟ್ಟಿ, ಬಸವರಾಜ ಕೋಟೆ, ರೇವಣ್ಣ, ನಾಗೇಂದ್ರ, ಜಕ್ಕಹಳ್ಳಿ ಮಾಳ ಬಸವರಾಜ, ಚಿಕ್ಕಹೊನ್ನ ಶೆಟ್ಟಿ, ಕೊತ್ತೆಗಾಲ ಶಿವಣ್ಣಶೆಟ್ಟಿ, ಬಾಚೇಗೌಡನಹಳ್ಳಿ ಚಾಮ್ ಶೆಟ್ಟಿ, ಸಿದ್ಧಶೆಟ್ಟಿ, ಜಿಯಾರ ವೆಂಕಟೇಶ್, ಮರಿಶೆಟ್ಟಿ, ವಸಂತಕುಮಾರ್,ಸಾಗರ್ ಮಧು ಕುಮಾರ್, ಸಂತೋಷ್ ಕುಮಾರ್, ಮಣಿ, ಶಿವಕುಮಾರ್, ನಂದಕುಮಾರ್, ನಟರಾಜ್ ಹಾಗೂ ಸಮಾಜದ ಹಿರಿಯರು ಯುವಕರು ಇದ್ದರು.



ಗೂಡ್ಸ್ ವಾಹನ ಮತ್ತು ಬೈಕ್ ನಡುವೆ ರಸ್ತೆ ಅಪಘಾತ: ಬೈಕ್ ಸವಾರ ಸಾವು

ಕೆ ಆರ್ ಪೇಟೆ ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಸೋಮವಾರ ಮುಂಜಾನೆ ಬೈಕ್ ಮತ್ತು ಗೂಡ್ಸ್ ವಾಹನದ ನಡುವೆ ಭೀಕರ ರಸ್ತೆ ಅಪಘಾತ ಸಂಭವಿಸಿ ಬೈಕ್ ಸವಾರಿಗೆ ತಲೆಯ ಭಾಗಕ್ಕೆ ತೀವ್ರ ಪೆಟ್ಟು ಬಿದ್ದ ಹಿನ್ನೆಲೆಯಲ್ಲಿ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ನಡೆದಿದೆ.



ತಾಲ್ಲೂಕಿನ ಕಾಪನಹಳ್ಳಿ ಗ್ರಾಮದ ಯೋಗೇಶ್ ಅವರ ಮಗ ವೈ.ನಂದನ್ (19) ಮೃತ ಯುವಕ.

ಘಟನೆ ವಿವರ: ಮೃತ ವೈ.ನಂದನ್ ಸೋಮವಾರ ಮುಂಜಾನೆ 5.15ಗಂಟೆ ಸಮಯದಲ್ಲಿ ಮೈಸೂರಿಗೆ ಕಾಲೇಜಿಗೆ ಹೋಗುತ್ತಿದ್ದ ತನ್ನ ಸಹೋದರಿ ವೈ.ಅನು ಅವರನ್ನು ಕೆ.ಆರ್. ಪೇಟೆಯ ಬಸ್ ಸ್ಟಾಂಡಿಗೆ ಡ್ರಾಪ್ ಮಾಡಿ ವಾಪಸ್ ಊರಿಗೆ ಹೋಗುತ್ತಿದ್ದ ವೇಳೆ ಪ್ರವಾಸಿ ಮಂದಿರ ವೃತ್ತದಲ್ಲಿ ಚನ್ನರಾಯಪಟ್ಟಣ ಕಡೆಯಿಂದ ವೇಗವಾಗಿ ಬರುತ್ತಿದ್ದ ಗೂಡ್ಸ್ ವಾಹನವು ನಂದನ್ ಹೋಗುತ್ತಿದ್ದ ಬೈಕಿಗೆ ಭೀಕರವಾಗಿ ಡಿಕ್ಕಿ ಹೊಡೆದಿದೆ. ಪರಿಣಾಮ ನಂದನ್ ಡಾಂಬರು ರಸ್ತೆಗೆ ಬಿದ್ದ ಪರಿಣಾಮ ತಲೆಗೆ ಗಂಭೀರಗಳಾಗಿ ಅಪಾರ ರಕ್ತಸ್ರಾವ ಉಂಟಾದ ಕಾರಣ ನಂದನ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗೂಡ್ಸ್ ವಾಹನದ ಚಾಲಕ ಅಪಘಾತ ನಡೆದ ಬಳಿಕ ಅನತಿ ದೂರದಲ್ಲಿ ನಿಲ್ಲಿಸಿ ಸ್ಥಳದಿಂದ ಪರಾರಿಯಾಗಿದ್ದಾನೆ. ಘಟನಾ ಸ್ಥಳಕ್ಕೆ ಸರ್ಕಲ್ ಇನ್ಸ್ ಪೆಕ್ಟರ್ ಸುಮಾರಾಣಿ ಬೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತ ವೈ.ನಂದನ್ ತಂದೆ ಯೋಗೇಶ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಶಿಕ್ಷಕರಿಗೆ ಗುರುವಂದನೆ

ಶಿಕ್ಷಣ ಕಲಿಸಿದ ಶಿಕ್ಷಕರನ್ನು ಸ್ಮರಿಸಿದ ವಿದ್ಯಾರ್ಥಿಗಳು

ಎಚ್.ಡಿ.ಕೋಟೆ: ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಲು ಶ್ರಮಿಸಿರುವ ಶಿಕ್ಷಕರ ಕೊಡುಗೆಯನ್ನು ಗುರುತಿಸಿ ಮಾದಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ 2010-11ನೆ ಸಾಲಿನ ಎಸ್.ಎಸ್. ಎಲ್.ಸಿ ವಿದ್ಯಾರ್ಥಿಗಳು ಶಿಕ್ಷಕರಿಗೆ ಗುರುವಂದನೆ ಸಲ್ಲಿಸಿದರು.

ಶಾಲೆ ಆವರಣವನ್ನು ಹಸಿರು ತೋರಣಗಳಿಂದ ಸಿಂಗರಿಸಿದ್ದ ಹಿರಿಯ ವಿದ್ಯಾರ್ಥಿಗಳು ಗುರುಗಳು ಬರುತ್ತಿದ್ದಂತೆ ಹೂಗುಚ್ಛ ನೀಡಿ ಸ್ವಾಗತಿಸಿ ವೇದಿಕೆಗೆ ಬರಮಾಡಿಕೊಂಡರು. ದಿ.ಮುಖ್ಯಶಿಕ್ಷಕ ಮರಿಚೌಡಯ್ಯ, ಶಿಕ್ಷಕ ಪರಮೇಶ್ ಅವರಿಗೆ ಭಾವಪೂರ್ಣ ನಮನ ಸಲ್ಲಿಸಲಾಯಿತು.

ಮುಖ್ಯ ಶಿಕ್ಷಕ ನಿಂಗರಾಜು ಮಾತನಾಡಿ, ಉತ್ತಮ ಸಮಾಜ ನಿರ್ಮಾಣ ಮಾಡುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿ ರುತ್ತದೆ. ಶಿಕ್ಷಕರೂ ಸಹ ನಿರಂತರವಾಗಿ ಕಲಿಯುವ ವಿದ್ಯಾರ್ಥಿಯೇ, ಕರ್ತವ್ಯದ ವೇಳೆಯಲ್ಲಿ ವಿದ್ಯಾರ್ಥಿಗಳು, ಪೋಷಕರ ಜೊತೆ ಕೆಲವು ಸಂಘರ್ಷಗಳೂ ಕೂಡ ನಡೆದಿರುತ್ತವೆ. ಆ ಘಟನೆಗಳು ಕ್ಷಣಿಕವಷ್ಟೇ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಗಳಿಸಿರುವುದಷ್ಟೇ ಶಾಶ್ವತವಾಗಿ ಉಳಿದಿದೆ. ಕೇವಲ ಅಕ್ಷರ ಕಲಿಸುವುದಷ್ಟೇ ನಮ್ಮ ಜವಾಬ್ದಾರಿಯಾಗಿರಲಿಲ್ಲ. ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡುವುದೇ ನಮ್ಮ ಉದ್ದೇಶವಾಗಿತ್ತು. ನಮ್ಮ ವಿದ್ಯಾರ್ಥಿಗಳು ಇಂದು ನಮಗಿಂತಲೂ ಉನ್ನತ ಅಧಿಕಾರಿಗಳಾಗಿದ್ದಾರೆ, ಉದ್ಯಮಿಗಳಾಗಿದ್ದಾರೆ, ಕೃಷಿ ವಲಯದಲ್ಲಿದ್ದಾರೆ, ವಿವಿಧ ಕ್ಷೇತ್ರದಲ್ಲಿ ತೊಡಗಿಸಿ ಕೊಂಡಿರುವುದು ನಮಗೆ ಹೆಮ್ಮೆ ತಂದಿದೆ ಎಂದು ತಿಳಿಸಿದರು. ಜೀವನ ನಶ್ವರ ಪ್ರತಿಯೊಬ್ಬರೂ ಗೌರವದಿಂದ ಕೆಲಸ ಮಾಡಬೇಕು. ಸಮಾಜದಲ್ಲಿ ಉತ್ತಮವಾಗಿ ಬೆಳೆಯಬೇಕು ಈ ಶಾಲೆಯಲ್ಲಿ ಸೇವೆ ಸಲ್ಲಿಸಿದ ನಂತರ, ಕೆಲ ಸಹದ್ಯೋಗಿಗಳು ವರ್ಗಾವಣೆಗೊಂಡಿದ್ದಾರೆ. ನಿವೃತ್ತಿ ಹೊಂದಿದ್ದಾರೆ ಇವುರಗಳ ಸಂಪರ್ಕವೇ ಇರಲಿಲ್ಲ. ಇದೀಗ, ಸಹಪಾಠಿಗಳು ಹಾಗೂ ವಿದ್ಯಾರ್ಥಿಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಸಂತಸ, ಸ್ಮರಣೀಯ ಕ್ಷಣಗಳನ್ನು ಸೃಷ್ಟಿ ಮಾಡಿದ್ದೀರಿ ಎಂದು ಸಮಾಜ ವಿಜ್ಞಾನ ಶಿಕ್ಷಕ ಸಿದ್ದನಾಯಕ ಹೇಳಿದರು. ಎಲ್ಲ ಶಿಕ್ಷಕರು ಮಾತನಾಡಿದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ಡಿ.ಮಂಚಯ್ಯ, ಮಂಜು ಸೇರಿದಂತೆ ಹಿರಿಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಇದ್ದರು.

ಶಿಕ್ಷಕರಿಗೆ ಸನ್ಮಾನ

ಶಿಕ್ಷಕರಾದ ಸಿದ್ದನಾಯಕ, ಕಾಂತನಾಯಕ, ನವೀನ್, ಸುಜಾತ, ವೇದಾವತಿ, ಶೋಭಾ, ಸವಿತಾ, ಶಾಂತಮ್ಮ, ಭಾರತೀ, ರತ್ನಯ್ಯ, ಜಯಾ, ಮೇರಿ ಜಸಿಂತಾ, ನಿಂಗರಾಜು, ಪೂರ್ಣಿಮಾ, ಸುದರ್ಶನ್ ಅವರನ್ನು ವಿದ್ಯಾರ್ಥಿಗಳು ಸನ್ಮಾನಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ ಕಾಯ್ದೆಯ ಕುರಿತು ಅರಿವು ಮೂಡಿಸಬೇಕು

ಅಸ್ಪೃಶ್ಯತೆ ಆಚರಣೆ ಸಾಮಾಜಿಕ ಪಿಡುಗು: ಡಿಸಿ

ಮಂಡ್ಯ : ಜಿಲ್ಲೆಯ ವರ್ಷಕ್ಕೆ ಸರಾಸರಿ 65–70 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ ಕಾಯ್ದೆಯಡಿ ಪ್ರಕರಣಗಳು ದಾಖಲಾಗುತ್ತಿವೆ, ಆಧುನಿಕ ಸಮಾಜದಲ್ಲೂ ಅಸ್ಪೃಶ್ಯತೆ ಆಚರಣೆ ನಡೆಯುತ್ತಿರುವುದು ಒಂದು ಸಾಮಾಜಿಕ ಪಿಡುಗು ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ 1989 (ತಿದ್ದುಪಡಿ) ಅಧಿನಿಯಮ 2015 ಮತ್ತು ನಿಯಮಗಳ 1995 (ತಿದ್ದುಪಡಿ) ನಿಯಮಗಳು 2016 ಮತ್ತು ನಾಗರೀಕ ಹಕ್ಕು ರಕ್ಷಣಾ ಕಾಯ್ದೆ 1955 ರಂತೆ ಸರ್ಕಾರೇತರ ಸಂಘ/ಸಂಸ್ಥೆಗಳ ಸಮನ್ವಯದೊಂದಿಗೆ ಜಾಗೃತಿ/ಅರಿವು ಮೂಡಿಸಲು ವಿಚಾರಗೋಷ್ಠಿ/ಕಾರ್ಯಗಾರ ಮತ್ತು ಇತರೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ ಕಾಯ್ದೆಯ ತೀವ್ರತೆ ತಿಳಿಯದೆ ಅರಿವಿನ ಕೊರತೆಯಿಂದ ಪರಿಶಿಷ್ಟರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದೆ. ಜಿಲ್ಲೆಯ ಎಲ್ಲಾ ನೊಂದಾಯಿತ ಪ್ರಗತಿಪರ ಸಂಘ ಸಂಸ್ಥೆಗಳನ್ನು ಒಳಗೊಂಡಂತೆ ಪರಿಶಿಷ್ಟ ಜಾತಿ

ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ ಪ್ರತಿಬಂಧ) ಕಾಯ್ದೆಯ ಕುರಿತಾಗಿ ಅರಿವಿನ ಕಾರ್ಯಾಗಾರವನ್ನು ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ದೌರ್ಜನ್ಯ ಪ್ರಕರಣಗಳನ್ನು ಕೇವಲ ಕಾನೂನಿನಿಂದ ಮಾತ್ರ ತಡೆಯಲು ಸಾಧ್ಯವಿಲ್ಲ ಎಲ್ಲರಲ್ಲೂ ಸಮಾನತೆ ಮನೋಭಾವನೆ ಮತ್ತು ಮನುಷ್ಯತ್ವ ಇದ್ದಾಗ ಮಾತ್ರ ಇಂತಹ ಅನಿಷ್ಠ ಪದ್ಧತಿಗಳನ್ನು ಸಮಾಜದಿಂದ ಸಂಪೂರ್ಣವಾಗಿ ತೆಗೆದು ಹಾಕಲು ಸಾಧ್ಯ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಅರಿವು ಮೂಡಿಸುವ ಕಾರ್ಯಗಾರ ಮತ್ತು ವಿಚಾರಗೋಷ್ಠಿಯನ್ನು ಜಿಲ್ಲೆಯ ಎಲ್ಲಾ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಉಪಸ್ಥಿತಿಯಲ್ಲಿ ಫೆಬ್ರವರಿ ಅಂತ್ಯ ಅಥವಾ ಮಾರ್ಚ್ ಆರಂಭದಲ್ಲಿ ನಡೆಸೋಣ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳನ್ನು ಕಾರ್ಯಕ್ರಮಕ್ಕೆ ಕರೆದು ಜಿಲ್ಲೆಯ ಎಲ್ಲಾ ಸಂಘ ಸಂಸ್ಥೆಗಳ ಮುಖಂಡರಿಗೂ ಇದರ ಕುರಿತಾಗಿ ಅರಿವು ಮೂಡಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರಕರಣಗಳಲ್ಲಿ ಸಾಕ್ಷಿ ಹೇಳುವ ಸಾಕ್ಷಿದಾರರಿಗೆ ಧೈರ್ಯ ತುಂಬುವ ಕೆಲಸವಾಗಬೇಕು. ಸಾಕ್ಷಿದಾರಿಗೆ ಸದರಿ ದಿನದ ಕೂಲಿ ಮೊತ್ತವನ್ನು ಟಿ.ಎ ಡಿ.ಎ ರೂಪದಲ್ಲಿ ನೀಡಲಾಗುತ್ತದೆ ಆದರ ಕುರಿತಾಗಿಯೂ ಅರಿವು ಮೂಡಿಸಬೇಕು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕಿ ಶೋಭಾರಾಣಿ ವಿ ಜೆ ಅವರು ಮಾತನಾಡಿ ಶಿಕ್ಷಣದಿಂದ ಮಾತ್ರ ಸಮಾಜದ ಎಲ್ಲಾ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಲು ಸಾಧ್ಯ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದೌರ್ಜನ್ಯ ತಡೆ ಕಾಯ್ದೆಯ ಕುರಿತಾಗಿ ಮೊದಲು ವಿದ್ಯಾರ್ಥಿಗಳಿಗೆ ಕಾನೂನಿನ ಅರಿವು ಮೂಡಿಸಬೇಕು. ಪೊಲೀಸ್ ಠಾಣೆಗಳಲ್ಲಿ ಹೇಗೆ ದೌರ್ಜನ್ಯ ಪ್ರಕರಣಗಳನ್ನು ದಾಖಲಿಸುವುದು ಎಂಬುದರ ಕುರಿತಾಗಿ ಒಂದು ವಿಶೇಷ ಕಾರ್ಯಾಗಾರವನ್ನು ಆಯೋಜಿಸಬೇಕು ಎಂದು ಹೇಳಿದರು.

ಪರಿಶಿಷ್ಟರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುವ ಸೌಲಭ್ಯಗಳ ಕುರಿತು ಅರಿವು ಕಾರ್ಯಕ್ರಮ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯ ಅಂಶಗಳ ಫಲಕವನ್ನು ಗ್ರಾಮ ಪಂಚಾಯಿತಿಗಳಲ್ಲಿ ಅಳವಡಿಸಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದೌರ್ಜನ್ಯ ಪ್ರಕರಣಗಳನ್ನು ಡಿ.ವೈ. ಎಸ್ಪಿ ಹಂತದಲ್ಲಿ ತನಿಖೆ ನಡೆಸಬೇಕು. ನಮ್ಮ ಜಿಲ್ಲೆಯಲ್ಲಿ ನಡೆಸಲಾಗುವ ಸದರಿ ಕಾರ್ಯಕ್ರಮವನ್ನು ಇತರ ಜಿಲ್ಲೆಗೆ ಮಾದರಿಯಾಗುವಂತೆ ನಡೆಸೋಣ ಎಂದು ಹೇಳಿದರು.

ಸಭೆಯಲ್ಲಿ ರಾಜ್ಯ ಸಣ್ಣ ಕೈಗಾರಿಕೆಗಳ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ್ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರುಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸುವ ಕುರಿತು ನಡೆದ ನಾನು ಮತ್ತು ಪರೀಕ್ಷೆ ಕಾರ್ಯಗಾರ

ಮಡಿಕೇರಿ : ಆತ್ಮಸ್ಥೈರ್ಯ ಇದ್ದರೆ ಮಾತ್ರ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಹೈಕೋರ್ಟಿನ ಹಿರಿಯ ವಕೀಲ ಎಚ್.ಎಸ್. ಚಂದ್ರಮೌಳಿ ಅವರು ಹೇಳಿದರು. ಶನಿವಾರಸಂತೆ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಅಂಕನಹಳ್ಳಿ ತಪೋವನ ಕ್ಷೇತ್ರ ಮನೆಹಳ್ಳಿ ಮಠದ ಅನಘ ಫೌಂಡೇಶನ್ ಮತ್ತು ಕೊಡಗು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಸಹಭಾಗಿತ್ವದಲ್ಲಿ ಸಿದ್ಧಗಂಗಾ ಶ್ರೀಗಳಾದ ಶಿವಕುಮಾರ ಸ್ವಾಮೀಜಿಯವರ ಸಂಸ್ಮರಣೆ ದಾಸೋಹ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಶನಿವಾರಸಂತೆ ಮತ್ತು ಕೊಡ್ಲಿಪೇಟೆ ಹೋಬಳಿಯ ಶಾಲೆಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸುವ ಕುರಿತು ನಾನು ಮತ್ತು ಪರೀಕ್ಷೆ ಎಂಬ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಶಿಕ್ಷಣ ಕಲಿಕೆಯ ಜೊತೆಯಲ್ಲಿ ಕಷ್ಟ ನೋವಿನ ಅರಿವು ಇರಬೇಕು ಕೀಳರಿಮೆಯನ್ನು ಬಿಟ್ಟು ಆತ್ಮ ವಿಶ್ವಾಸದ ಮತ್ತು ಆತ್ಮಸ್ಥೈರ್ಯದ ಮನೋಭಾವನೆಯನ್ನು ಬೆಳೆಸಿಕೊಂಡರೆ ಸಾಧನೆ ಮಾಡಲು ಸಹಕಾರಿಯಾಗುತ್ತದೆ ಎಂದರು.

ಇಂದಿನ ವಿದ್ಯಾರ್ಥಿಗಳಿಗೆ ಕಲಿಕೆಗೆ ಪೂರಕವಾದ ಎಲ್ಲಾ ರೀತಿಯ ಅನುಕೂಲಗಳಿವೆ ಎಐ ಯಂತಹ ಆಧುನಿಕ ತಂತ್ರಜ್ಞಾನ ವ್ಯವಸ್ಥೆಗಳಿವೆ ಆದರೆ ಇವುಗಳನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ಮುಂದೆ ಸಮಾಜದಲ್ಲಿ ಜನರು ತಮ್ಮನ್ನು ಗುರುತಿಸುವಷ್ಟು ಮಟ್ಟಿಗೆ ಬೆಳೆಯಬೇಕು ಎಂದು ಕಿವಿಮಾತು ಹೇಳಿದರು.

ಮನೆಹಳ್ಳಿ ಮಠದ ಮಠಾದೀಶ ಮತ್ತು ಅನಘ ಪೌಂಡೇಶನ್ ಅಧ್ಯಕ್ಷ ಶ್ರೀ ಮಹಾಂತ ಶಿವಲಿಂಗ ಸ್ವಾಮೀಜಿ ಕಾರ್ಯಗಾರದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ–ಶಿಕ್ಷಣದಿಂದ ರಾಷ್ಟ್ರ ಅಭಿವೃದ್ಧಿ ಹೊಂದುತ್ತದೆ. ಈ ದಿಸೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಪರಿಪೂರ್ಣರಾದ ವಿದ್ಯಾವಂತರಾಗಬೇಕು ಮತ್ತು ವಿದ್ಯಾರ್ಥಿಗಳಿಗೆ ಹತ್ತನೆ ತರಗತಿ ಪರೀಕ್ಷೆ ಶಿಕ್ಷಣ ಪ್ರಥಮ ಮೆಟ್ಟಿಲು ಆಗಿರುತ್ತದೆ ಯಾವುದೆ ಹಿಂಜರಿಕೆ ಇಲ್ಲದೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯಬೇಕು ಎಂಬ ಉದ್ದೇಶದಿಂದ ಮಠದ ಮೂಲ ಗುರುಗಳ ಹೆಸರಿನಲ್ಲಿ ನಮ್ಮ ಭಾಗದ ಹತ್ತನೆ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸುವ ಬಗ್ಗೆ ನಮ್ಮ ಮಠದ ವತಿಯಿಂದ ನಾನು ಮತ್ತು ಪರೀಕ್ಷೆ ಎಂಬ ಕಾರ್ಯಗಾರ ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು.

2025-26 ನಲ್ಲಿ ಜಿಲ್ಲೆಯಲ್ಲಿ 17.58 ಟನ್ ಮೀನು ಉತ್ಪಾದನೆ

ಮಂಡ್ಯದಲ್ಲಿ ಮೀನುಗಾರಿಕೆಗೆ ಉತ್ತೇಜನ ಅಗತ್ಯ : ಜಿಲ್ಲಾಧಿಕಾರಿ



ಮಂಡ್ಯ: ರೈತರ ಆದಾಯ ಹೆಚ್ಚಿಸುವಲ್ಲಿ ಕೃಷಿಯಷ್ಟೆ ಮಹತ್ವದ ಪಾತ್ರವನ್ನು ಮೀನುಗಾರಿಕೆಯು ವಹಿಸುತ್ತದೆ. ಮೀನು ಸಾಕಾಣಿಕೆ ಕುರಿತು ರೈತರಿಗೆ ತರಬೇತಿ ನೀಡಿ ಜಿಲ್ಲೆಯಲ್ಲಿ ಮೀನುಗಾರಿಕೆಯನ್ನು ಉತ್ತೇಜಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಲಾಗಿದ್ದ 2025–26ನೇ ಸಾಲಿನ ಕೇಂದ್ರ ಪುರಸ್ಕೃತ ?ಪ್ರಧಾನಮಂತ್ರಿ ಮತ್ಸಸಂಪದ ಯೋಜನೆ" ಯನ್ನು ಅನುಷ್ಠಾನ ಮತ್ತು ಮೇಲುಸ್ತುವಾರಿ ನಡೆಸಲು ಸಂಬಂಧ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ 177 ಕೆರೆಗಳು ಇದೆ ಎಂದು ಹೇಳಿದರು. ಈಗಾಗಲೇ ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯ ಹಲವು ಕೆರೆಗಳಿಗೆ ಟೆಂಡರ್ ಕರೆಯಲಾಗಿದೆ. ಜಿಲ್ಲೆಯಲ್ಲಿ 2021 ನೇ ಸಾಲಿನಿಂದ 25 ನೇ ಸಾಲಿನ ವರೆಗೂ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ 742 ಫಲಾನುಭವಿಗಳಿದ್ದಾರೆ. ಇಲ್ಲಿಯವರೆಗೂ 124 ಫಲಾನುಭವಿಗಳಿಗೆ 513.38 ಲಕ್ಷ ಸಹಾಯಧನ ನೀಡಲಾಗಿದೆ ಎಂದರು.

ಮೀನುಗಾರಿಕೆ ಇಲಾಖೆಯಿಂದ 1 ಹೆಕ್ಟೇರ್ ಪ್ರದೇಶದಲ್ಲಿ ಮೀನು ಸಾಕಾಣಿಕೆಗೆ ಮಾಡಲು 7 ಲಕ್ಷ ಸಹಾಯಧನವನ್ನು ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಫಲಾನುಭವಿಗಳಿಗೆ ಶೇ 60 ರಷ್ಟು ಸಬ್ಸಿಡಿ ಹಾಗೂ ಸಾಮಾನ್ಯ ವರ್ಗಗಳಿಗೆ ಶೇ 40 ರಷ್ಟು ಸಬ್ಸಿಡಿ ನೀಡಲಾಗುತ್ತದೆ ಎಂದು ತಿಳಿಸಿದರು.

ಮೀನುಗಾರಿಕೆ ಇಲಾಖೆಯಿಂದ ಸೌಲಭ್ಯ ಪಡೆದು ಮೀನುಗಾರಿಕೆಯಲ್ಲಿ ಯಶಸ್ಸು ಗಳಿಸಿದವರ ಯಶೋಗಾಥೆಯನ್ನು ಸಿದ್ಧಪಡಿಸಿ. ಹಿಂದೆ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಸೌಲಭ್ಯ ಪಡೆದ ಅರ್ಹ ಫಲಾನುಭವಿಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರ ಎಂಬುದನ್ನು ಪರಿಶೀಲಿಸಿ ಎಂದು ಹೇಳಿದರು.

ಮೀನುಗಾರಿಕೆ ಮಾಡಲು ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ ಮೀನುಗಾರಿಕೆ ಕುರಿತು ಸೂಕ್ತ ತರಬೇತಿ ನೀಡಿ. ಮೀನುಗಾರರು ಹಾಗೂ ರೈತರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಬದುಕಬೇಕು. ಜಿಲ್ಲೆಯಲ್ಲಿ ಪ್ರತಿ ವರ್ಷ ಸರಾಸರಿ 30 ಸಾವಿರಕ್ಕೂ ಹೆಚ್ಚು ಟನ್ ಮೀನು ಉತ್ಪಾದನೆ ಆಗುತ್ತಿದೆ. ಕರಾವಳಿ ಹೊರತುಪಡಿಸಿ ಮೀನುಗಾರಿಕೆಯಲ್ಲಿ ರಾಜ್ಯದಲ್ಲಿ ಜಿಲ್ಲೆ ಹತ್ತನೆ ಸ್ಥಾನದೊಳಗಿದೆ ಎಂದು ಹೇಳಿದರು.

ಮೀನುಗಾರಿಕೆ ಮಾಡಲು ವರ್ಷ ಪೂರ್ತಿ ನೀರು ಅಗತ್ಯ ಹಾಗಾಗಿ ಜಿಲ್ಲೆಯ ವರ್ಷ ಪೂರ್ತಿ ನೀರಿನ ಲಭ್ಯತೆ ಇರುವ ಪ್ರದೇಶಗಳಿಗೆ ಆದ್ಯತೆ ಮೇರೆಗೆ ಮೀನುಗಾರಿಕೆ ಪ್ರೋತ್ಸಾಹ ನೀಡಿ. ಜಿಲ್ಲೆಯಲ್ಲಿ ಬೇಡಿಕೆ ಇರುವ ಮೀನಿನ ತಳಿಯನ್ನು ಅಭಿವೃದ್ಧಿಪಡಿಸಿ, ಸದರಿ ವರ್ಷ ಅರ್ಹ ಮೀನುಗಾರರಿಗೆ ಉತ್ತೇಜನ ನೀಡಲು ನೀಡಿದ ಮತ್ಸ್ಯ ವಾಹನಗಳು ಉತ್ತಮ ಲಾಭ ಗಳಿಸುತ್ತಿದೆ ಎಂದು ಹೇಳಿದರು.

ಸಭೆಯಲ್ಲಿ ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕ ಬಾಬಾ ಸಾಬ್, ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರಗಳಾದ ಲೋಕೇಶ್, ಪೂಜಾಶ್ರೀ, ಪುಷ್ಪಲತಾ, ಜಗದೀಶ್ ಟಿ.ಡಿ, ಮಹದೇವಸ್ವಾಮಿ ಇನ್ನಿತರರಿದ್ದರು.

ಪ್ರಾರ್ಥನಾ ಇಂಟರ್ ನ್ಯಾಷನಲ್ ಸ್ಕೂಲ್ ನಲ್ಲಿ 'ಪ್ರಾರ್ಥನಾ ಸುಗ್ಗಿ ಸಂಭ್ರಮ'

ಕೆ.ಎಂ.ದೊಡ್ಡಿ: ಇಲ್ಲಿನ ಪ್ರಾರ್ಥನಾ ಇಂಟರ್ ನ್ಯಾಷನಲ್ ಸ್ಕೂಲ್ ನಲ್ಲಿ 'ಪ್ರಾರ್ಥನಾ ಸುಗ್ಗಿ ಹಬ್ಬ' ಕಾರ್ಯಕ್ರಮ ಜರುಗಿತು.

ಮದ್ದೂರಿನ ಸರಕಾರಿ ಮಹಿಳಾ ಕಾಲೇಜಿನ ಉಪನ್ಯಾಸಕಿ ಸಿ.ಸುಮಿತ್ರಾ ಸುಂದ್ರೇಶ್ ಅವರು ರಾಶಿ ಪೂಜೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸುವ ಅವಶ್ಯಕತೆ ಇದೆ ಈ ಹಿನ್ನಲೆಯಲ್ಲಿ ನಮ್ಮ ಹಬ್ಬ, ಸಂಸ್ಕೃತಿಳನ್ನು ಪರಿಚಯಿಸಲು ಶಾಲೆಯಲ್ಲಿ ಸುಗ್ಗಿ ಕಾರ್ಯಕ್ರಮ ಆಯೋಜನೆ ಮಾಡಿರುವುದು ಉತ್ತಮ ಬೆಳವಣಿಗೆ ಎಂದರು.

ಜನಪದ ಶೈಲಿಯ ಹಬ್ಬಗಳು ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತಾವೆ. ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿ ನಮ್ಮ ಸಂಸ್ಕೃತಿ ಮರೆಯಾಗುತ್ತಿರುವ ಹಿನ್ನಲೆಯಲ್ಲಿ ಹಿಂದಿನ ಹಬ್ಬಗಳ ಶೈಲಿಯನ್ನು ಮತ್ತೆ ಅನಾವರಣ ಮಾಡುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ರೈತರಿಗೆ ಸಂಕ್ರಾಂತಿ ಸುಗ್ಗಿ ಹಬ್ಬವಾಗಿದ್ದು ತಾವು ಬೆಳೆದ ಬೆಳೆಯನ್ನು ಪೂಜೆ ಮಾಡುವ ಮೂಲಕ ಭೂತಾಯಿಗೆ ನಮ್ಮ ಸಲ್ಲಿಸುವುದು ಹೆಣ್ಣು ಮಕ್ಕಳು ಎಳ್ಳು ಬೀರಿ ಒಳ್ಳೆ ಮಾತನಾಡಿ ಎಂಬ ಸಂದೇಶ ಸಾರುವ ಹಬ್ಬವಾಗಿದೆ ವರ್ಷದ ಮೊದಲ ಹಬ್ಬವಾಗಿದ್ದು ರೈತರು ಸೇರಿದಂತೆ ಜನತೆ ಸಂಭ್ರಮದಿಂದ ಆಚರಿಸುತ್ತಾರೆ ಎಂದು ತಿಳಿಸಿದರು.

ಹಳ್ಳಿ ಶೈಲಿಯಲ್ಲೇ ಗುಡಿಸಲು ನಿರ್ಮಿಸಿ ಭತ್ತ, ರಾಗಿ ರಾಶಿ ಹಾಕಿ ಸೇರು, ಮೊರ, ಇಬ್ಬಳಿಗೆ, ಕೂಡುಗೋಲು ಸೇರಿದಂತೆ ರೈತರು ಬಳಸುವ ಸಾಮಾಗ್ರಿಗಳನ್ನು ಪೂಜಿಸಲಾಯಿತು. ವಿದ್ಯಾರ್ಥಿಗಳು ಸಂಪ್ರದಾಯಕ ಉಡುಗೆ ತೊಟ್ಟು ಗಮನ ಸೆಳೆದರು.

ಸಂಸ್ಥೆಯ ಅಧ್ಯಕ್ಷ ರವಿಸಾವಂದಿಪುರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಸಂಸ್ಥೆಯ ಕಾರ್ಯದರ್ಶಿ ಪಿ.ಸೌಮ್ಯ ಕೃಷ್ಣ, ಶಿಕ್ಷಕರಾದ ಎಸ್.ಬಿ. ಅಶ್ವಿನಿ, ಪಿ. ಸವಿತಾ, ಸುಕಾವ್ಯ, ವೈ.ಬಿ.ಕೃತಿಕಾ, ಎಚ್.ಸಿ. ಅರ್ಪಿತಾ, ದಿವ್ಯ, ಬಿ.ಜೆ. ಸೋನಿಕಾ, ಕೆ.ಎನ್.ಪ್ರಿಯಾಂಕ, ಕೆ.ಎನ್. ಅನುಪಮ, ಶ್ವೇತಾ, ಆಶಾ ಸೇರಿದಂತೆ ಹಲವರಿದ್ದರು.

ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್–ಧನ್ ಯೋಜನೆ ವಿಶೇಷ ನೋಂದಣಿ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಸಂಯುಕ್ತಾಶ್ರಯದಲ್ಲಿ ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್–ಧನ್ ಯೋಜನೆಯ ವಿಶೇಷ ನೋಂದಣಿ ಅಭಿಯಾನವನ್ನು ಏರ್ಪಡಿಸುವ ಕುರಿತು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆಯು ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರು ಅಸಂಘಟಿತ ವಲಯದ ಕಾರ್ಮಿಕರಿಗೆ ಅವರ ವಯೋವೃದ್ಧ ವೇಳೆಯಲ್ಲಿ ಸಾಮಾಜಿಕ ಭದ್ರತೆ ಕಲ್ಪಿಸಲು ಭಾರತ ಸರ್ಕಾರವು ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್–ಧನ್ ಎಂಬ ಮಹತ್ವಾಕಾಂಕ್ಷಿ ವಂತಿಗೆ ಆಧಾರಿತ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದ್ದು, ಎಲ್ಲಾ ಅಸಂಘಟಿತ ವರ್ಗದ ಕಾರ್ಮಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕಾರ್ಮಿಕ ಅಧಿಕಾರಿ ಟಿ.ಕಾವೇರಿ ಅವರು 18 ರಿಂದ 40 ವರ್ಷದೊಳಗಿನ ಅಸಂಘಟಿತ ಕಾರ್ಮಿಕರು ತಮ್ಮ ಆಧಾರ್ ಕಾರ್ಡ್, ಆಧಾರ್ ಲಿಂಕ್ ಆಗಿರುವ ಮೊಬೈಲ್, ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಆರಂಭಿಕ ವಂತಿಕೆ ಮೊತ್ತಗಳೊಂದಿಗೆ ಹತ್ತಿರದ ಸಾಮಾನ್ಯ ಸೇವಾ ಕೇಂದ್ರಗಳಿಗೆ ಭೇಟಿ ಕೊಟ್ಟು ನೋಂದಾಯಿಸಿಕೊಳ್ಳಲು ಅವಕಾಶವಿರುತ್ತದೆ. ಹೆಚ್ಚು ಅಸಂಘಟಿತ ಕಾರ್ಮಿಕರು ವಾಸಿಸುವಂತಹ ಸ್ಥಳಗಳು, ಕಾರ್ಮಿಕರು ಸೇರುವಂತಹ ವಿವಿಧ ಇಲಾಖೆಗಳ ಸಭೆಗಳಲ್ಲಿ ಈ ಯೋಜನೆಯ ಬಗ್ಗೆ ಹೆಚ್ಚಿನ ಅರಿವು ಮೂಡಿಸಿ ನೋಂದಣಿ ಅಭಿಯಾನ ಯಶಸ್ವಿಗೊಳಿಸಬೇಕೆಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ತರಬೇತಿ ಕಾರ್ಯಕ್ರಮ

ಮಂಡ್ಯ: ಜನವರಿ 22ರಂದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ BDSP BDSP (businees development service providers) ವಿಷಯ ಕುರಿತು ತರಬೇತಿ ಕಾರ್ಯಕ್ರಮವನ್ನು ಬೆಳಿಗ್ಗೆ 10.30 ಗಂಟೆಗೆ ಪಿ. ಇ. ಎಸ್ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸದರಿ ಸಣ್ಣ, ಅತಿಸಣ್ಣ ಹಾಗೂ ಮಾಧ್ಯಮ ವರ್ಗದ (ಎಂ. ಎಸ್. ಎಂ. ಇ) ಕೈಗಾರಿಕಾ ಘಟಕಗಳಿಗೆ ಬಹಳ ಉಪಯುಕ್ತವಾಗಿದ್ದು ಕೈಗಾರಿಕಾ ಘಟಕಗಳ ಉದ್ದಿಮೆದಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದುಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.80232200964/221358 ಅನ್ನು ಸಂಪರ್ಕಿಸಿ ಎಂದು ಮಂಡ್ಯ ಜಿಲ್ಲಾ ಕೈಗಾರಿಕಾ ಕೇಂದ್ರ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾಯೋಗಿ ವೇಮನ ಜಯಂತಿ



ಮಡಿಕೇರಿ: ವಿಶ್ವಕವಿ ಜನಸಾಮಾನ್ಯರ ಕವಿ, ಪರಮ ಯೋಗಿ, ಪುಣ್ಯ ಪುರುಷ, ಅವತಾರ ಪುರುಷ, ಸಮಾಜ ಸುಧಾರಕ, ತತ್ವಜ್ಞಾನಿ, ಮಹಾಯೋಗಿ ವೇಮನ ಅವರ ಸಂದೇಶಗಳನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡುವಂತಾಗಬೇಕು ಎಂದು ಕುಶಾಲನಗರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿಂದಿ ಭಾಷಾ ಶಿಕ್ಷಕಿ ಎಂ.ಪಿ.ರಶ್ಮಿ ಅವರು ವರ್ಣಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಗಾಂಧಿ ಭವನದಲ್ಲಿ ಸೋಮವಾರ ನಡೆದ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಆಂಧ್ರದ ತೆಲುಗು ಸಾಹಿತ್ಯ ಲೋಕದಲ್ಲಿ ಧ್ರುವತಾರೆಯಂತೆ ಮೆರೆದವರು ಮಹಾಯೋಗಿ ವೇಮನ ಎಂದು ತಿಳಿಸಿದರು. ಆತ್ಮ ಶುದ್ದಿ ಇರದ ಆಚಾರವೇತಕೆ, ಮಡಕೆ ಶುದ್ದಿ ಇರದ ಅಡುಗೆ ಯಾತಕೆ, ಚಿತ್ತ ಶುದ್ದಿ ಇರದ ಪೂಜೆ ಯಾತಕೆ ಎಂದು ವೇಮನ ಅವರು ವರ್ಣಿಸಿದ್ದಾರೆ ಎಂದು ತಿಳಿಸಿದರು.'

ಧ್ವಜವೆತ್ತಿ ಸಾರು ದೇವನೊಬ್ಬನೆಂದು, ನಿಜವಿಹುದು ಒಳಗೆ ನಿಂತಿರುವನು ಚೊಕ್ಕ ಎಂದು ನೂರಾರು ವಚನಗಳನ್ನು ಬರೆದಿದ್ದಾರೆ ಎಂದು ರಶ್ಮಿ ಅವರು ವಿವರಿಸಿದರು.

ದೇವರು ಒಬ್ಬನೇ, ನಿನ್ನೊಳಗೆ ದೇವನಿದ್ದಾನೆ. ಆತ್ಮಶುದ್ದಿ ಮಾಡಿಕೊಂಡು ನೋಡಿದಾಗ ನಿನ್ನೊಳಗಿರುವ ದೇವ ಕಾಣಿಸುತ್ತಾನೆ ಎಂದು ವಿವರಿಸಿದರು.

ರಾಷ್ಟ್ರದ ಇತಿಹಾಸದಲ್ಲಿ ಸಂತರು, ದಾಸ ಶ್ರೇಷ್ಠರು, ಯೋಗಿಗಳು, ಮಹಾಪುರುಷರು, ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ. ಅವರೆಲ್ಲರ ಸತ್ವ ಸಿದ್ಧಾಂತಗಳು ಒಂದೇ ಆಗಿದೆ ಎಂದು ನುಡಿದರು.

ಮನುಜ ಕುಲದ ಉದ್ಧಾರ, ಜಾತಿ, ಮತ, ಪಂಥ, ಜನಾಂಗ ಪ್ರದೇಶ, ವ್ಯಕ್ತಿ ಪ್ರಚಾರದ ಹಂಗನ್ನು ತೊರೆದು ಮನುಜ ಕುಲದ ಉದ್ಧಾರಕ್ಕಾಗಿ ವೇಮನ ಅವರು ಜೀವನ ಸವೆಸಿದ್ದಾರೆ ಎಂದು ನುಡಿದರು.

ಭಾರತೀಯ ದಾರ್ಶನಿಕ ಕವಿಗಳಲ್ಲಿ ಕನ್ನಡದಲ್ಲಿ ಸರ್ವಜ್ಞ, ತಮಿಳುನಲ್ಲಿ ತಿರುವಳ್ಳುವರ್, ಅಂತೆಯೇ ತೆಲುಗಿನಲ್ಲಿ ವಚನಕಾರರಾಗಿದ್ದಾರೆ. ವೇಮನ ಕೃತಿಗಳು ಇತಿಹಾಸದಲ್ಲಿ ದಾಖಲಾಗಿದ್ದು, ಸುಮಾರು 5 ಸಾವಿರಕ್ಕೂ ಹೆಚ್ಚು ವಚನಗಳನ್ನು ಬರೆದಿದ್ದಾರೆ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕುಮಾರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲ್ಲೂಕು ಅಧಿಕಾರಿ ಮೋಹನ್ ಕುಮಾರ್, ಬ್ಲಾಸಂ ಶಾಲೆಯ ಶಿಕ್ಷಕಿ ಪ್ರಿಯಾಂಕ, ಮಣಜೂರು ಮಂಜುನಾಥ್ ಇತರರು ಇದ್ದರು.

ಅರ್ಜಿ ಆಹ್ವಾನ

ಮಡಿಕೇರಿ: 2025–26ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆ ಅಡಿಯಲ್ಲಿ 2024ನೇ ಕ್ಯಾಲೆಂಡರ್ ವರ್ಷದಲ್ಲಿ (01–01–2024 ರಿಂದ 31–12–2024) ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅದರಂತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಕ್ರೀಡಾಪಟುಗಳು ಅರ್ಜಿಯನ್ನು ಅಧಿಕೃತ ಜಾಲತಾಣ: https://sevasindhu.karnataka.gov.in ಮೂಲಕ ನಿಗದಿತ ದಿನಾಂಕದೊಳಗೆ ಸಲ್ಲಿಸಲು ಸೂಚಿಸಿದೆ. ಅರ್ಜಿ ಸಲ್ಲಿಸಲು ಜನವರಿ, 31 ಕಡೆಯ ದಿನವಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಕಟಣೆ ತಿಳಿಸಿದೆ.

ಚಾಲಕರು ವಾಹನ ಚಾಲನೆ ವೇಳೆ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಬೇಕು

ಕೆ.ಆರ್.ಪೇಟೆ: ಚಾಲಕರು ತಮ್ಮ ಕರ್ತವ್ಯ ಪಾಲನೆಗೆ ನೀಡುವಷ್ಟೇ ಆದ್ಯತೆಯನ್ನು ಸುರಕ್ಷಿತವಾಗಿ ಮನೆಗೆ ಹಿಂತಿರುಗಲು ನೀಡಬೇಕು. ವಾಹನ ಚಾಲನೆಯ ವೇಳೆ ತಮ್ಮ ಜೀವದ ಜೊತೆಗೆ ರಸ್ತೆಯಲ್ಲಿ ಸಂಚರಿಸುತ್ತಿರುವ ಇತರರ ಜೀವಗಳ ಸುರಕ್ಷತೆಯ ಬಗ್ಗೆಯೂ ಎಚ್ಚರ ವಹಿಸಬೇಕೆಂದು ನಾಗಮಂಗಲ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ಹಿರಿಯ ಮೋಟಾರು ವಾಹನಗಳ ನಿರೀಕ್ಷಕ ಸಿ.ಎಸ್.ಸತೀಶ್ ಮನವಿ ಮಾಡಿದರು.

ಅವರು ಪಟ್ಟಣದ ರಾಜ್ಯ ರಸ್ತೆ ಸಾರಿಗೆ ನಿಗಮದ ಡಿಪೊ? ಆವರಣದಲ್ಲಿ ಆರ್.ಟಿ.ಓ ಇಲಾಖೆ ಮತ್ತು ಸಾರಿಗೆ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ 37 ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕರ್ತವ್ಯದ ವೇಳೆ ವಾಹನ ಚಾಲಕರು ಅನುಸರಿಸಬೇಕಾದ ಸಾರಿಗೆ ನಿಯಮಗಳನ್ನು ವಿವರಿಸಿದ ಅವರು ಬಹುತೇಕ ಚಾಲಕರಿಗೆ ನಿಯಮಗಳ ಅರಿವಿದ್ದರೂ ಅದರ ಪಾಲನೆಯಲ್ಲಿ ತೋರಿಸುವ ನಿರ್ಲಕ್ಷ್ಯವೇ ಅಪಘಾತಗಳಿಗೆ ಕಾರಣವಾಗುತ್ತಿದೆ. ದೇಶದಲ್ಲಿ ಪ್ರತಿನಿತ್ಯ 1.70 ಲಕ್ಷ ಜನ ಅಪಘಾತಗಳಿಗೆ ಬಲಿಯಾಗುತ್ತಿದ್ದಾರೆ. ಅಪಘಾತಗಳಿಂದ ವ್ಯಕ್ತಿಗತ ಹಾನಿ ಮಾತ್ರವಲ್ಲ, ಬದಲಾಗಿ ಅವರನ್ನು ಆಧರಿಸಿರುವ ಕುಟುಂಬಗಳೂ ಬೀದಿ ಪಾಲಾಗುತ್ತವೆ. ಅಪಘಾತ ರಹಿತ ಚಾಲನೆ ಪ್ರತಿಯೊಬ್ಬ ಚಾಲಕನ ಗುರಿಯಾಗಿರಬೇಕೆಂದು ಕಿವಿಮಾತು ಹೇಳಿದರು.

ವಾಹನಗಳಿರುವುದು ನಮ್ಮನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ತಲುಪಿಸಲು ಮಾತ್ರ. ವಾಹನ ಚಾಲನೆ ಮೋಜು ಹಾಗೂ ಮನರಂಜನೆಯಲ್ಲ. ಅತಿಯಾದ ವೇಗವೇ ಅಪಘಾತಗಳಿಗೆ ಕಾರಣ ಎನ್ನುವ ಅರಿವಿದ್ದರೂ ಬಹುತೇಕ ಚಾಲಕರು ವೇಗದ ಚಾಲನೆಗೆ ಮುಂದಾಗುತ್ತಾರೆ.

ರಸ್ತೆಗಳ ಸೂಚನಾ ಫಲಕಗಳಲ್ಲಿ ಅಳವಡಿಸಿರುವ ವೇಗಮಿತಿ ನೀತಿಯನ್ನು ಪಾಲಿಸಿ. 100 ರಲ್ಲಿ ಹೋಗ್ಬೇಡಿ, 108 ರಲ್ಲಿ ಬರಬೇಡಿ. ವಾಹನ ಚಾಲನೆಯ ವೇಳೆ ನಿಗದಿತ ಗಮ್ಯ ಸ್ಥಾನವನ್ನು ತಲುಪಲು ಅವಸರ ಬೇಡ. ವಾಹನ ಚಾಲನೆಯ ವೇಳೆ ಯಾವುದೇ ಕಾರಣಕ್ಕೂ ಮೊಬೈಲ್ ಬಳಕೆ ಬೇಡ. ನಿಮ್ಮೊಂದಿಗೆ ನಿಮ್ಮನ್ನು ಅಶ್ರಯಿಸಿರುವ ಕುಟುಂಬವಿರುತ್ತದೆ ಎನ್ನುವ ಪ್ರಜ್ಞೆ ಪ್ರತಿಯೊಬ್ಬರಲ್ಲಿಯೂ ಜಾಗ್ರತವಾಗಿರಬೇಕೆಂದ ಸತೀಶ್ ಅದೃಷ್ಟ ಒಮ್ಮೆ ಮಾತ್ರ ನಮ್ಮನ್ನು ಉಳಿಸುತ್ತದೆ. ಆದರೆ ಸುರಕ್ಷತೆಯ ಚಾಲನೆ ಎಲ್ಲಾ ಸಮಯದಲ್ಲಿಯೂ ನಮ್ಮನ್ನು ಕಾಯುತ್ತದೆ. ಚಾಲನಾ ಪರವಾನಿಗೆಯಿಲ್ಲದೆ ನಿಮ್ಮ ಮಕ್ಕಳಿಗೆ ದ್ವಿಚಕ್ರ ವಾಹನ ಸೇರಿದಂತೆ ಯಾವುದೇ ವಾಹನಗಳನ್ನು ಚಲಾಯಿಸಲು ನೀಡಬೇಡಿ.

ಬೈಕ್ ಚಾಲನೆಯ ವೇಳೆ ಹೆಲ್ಮೆಟ್ ಧರಿಸಿ. ಕಾರು ಚಾಲನೆಯ ವೇಳೆ ಸೀಟ್ ಬೆಲ್ಟ್ ಹಾಕಿ. ವಾಹನ ಚಲಾಯಿಸುವ ಮುನ್ನ ವಾಹನಗಳು ಸುಸ್ಥಿತಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಿ. ಸಂಚಾರ ನಿಯಮ ಪಾಲನೆಯಿಂದ ಅಪಘಾತ ರಹಿತ ಸಮಾಜವನ್ನು ನಾವು ಕಾಣಬಹುದೆಂದರು.

ತಾಯಿಮಗು ಆಸ್ಪತ್ರೆಗೆ ಹೆಚ್.ಟಿ.ಮಂಜು ಭೇಟಿ ಪರಿಶೀಲನೆ

ಕೆ.ಆರ್.ಪೇಟೆ: ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ದುಂಡಶೆಟ್ಟಿ ಲಕ್ಷ್ಮಮ್ಮ ಸ್ಮಾರಕ ತಾಯಿ ಮಗು ಆಸ್ಪತ್ರೆಗೆ ಅಗತ್ಯವಿರುವ ಮೂಲ ಸೌಕರ್ಯ ಒದಗಿಸಿ ಆದಷ್ಟು ಶೀಘ್ರವಾಗಿ ಸಾರ್ವಜನಿಕ ಸೇವೆಗೆ ಸಮರ್ಪಣೆ ಮಾಡಲು ಸರ್ಕಾರ ಮುಂದಾಗಬೇಕು ಎಂದು ಶಾಸಕ ಹೆಚ್.ಟಿ.ಮಂಜು ಆಗ್ರಹಿಸಿದರು.

ಪಟ್ಟಣದ ಜಯನಗರ ಬಡಾವಣೆಯಲ್ಲಿ ನಿರ್ಮಿಸಿರುವ ತಾಯಿಮಗು ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿ, ಸರ್ಕಾರ ಸುಮಾರು 27 ಕೋಟಿಗೂ ಅಧಿಕ ವೆಚ್ಚದಲ್ಲಿ ಪಟ್ಟಣದಲ್ಲಿ ಸುಸಜ್ಜಿತ ತಾಯಿಮಗು ಆಸ್ಪತ್ರೆ ಕಟ್ಟಡ ನಿರ್ಮಿಸಿದೆ. ಕಟ್ಟಡ ನಿರ್ಮಾಣಗೊಂಡಿದ್ದರೂ ವೈದ್ಯಕೀಯ ಸಿಬ್ಬಂದಿ ನೇಮಕ ಸೇರಿದಂತೆ ಒಂದಷ್ಟು ಮೂಲ ಸೌಲಭ್ಯಗಳ ಕೊರತೆಯಿಂದ ಆಸ್ಪತ್ರೆ ಮಾತ್ರ ಇದುವರೆಗೂ ಲೋಕಾರ್ಪಣೆಗೊಂಡಿಲ್ಲ ಎಂದರು.

ದಿನದ 24 ಗಂಟೆಗಳ ಕಾಲ ತಾಯಿಮಗು ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆ ಲಭ್ಯವಾಗಬೇಕಾದರೆ ರಾಜ್ಯ ಸರ್ಕಾರ ಅಗತ್ಯ ಶ್ರೂಷಕರು ಮತ್ತು ಡಿ.ಗ್ರೂಪ್ ಸಿಬ್ಬಂದಿ ನೇಮಕ ಮಾಡಬೇಕು. ತಾಯಿ ಮಗು ಆಸ್ಪತೆಗೆ ಮೂವರು ಅನಸ್ತೇಶಿಯಾ ವೈದ್ಯರು, ಮೂವರು ಗೈನಿಕಾಜಿಲಿಸ್ಟ್ ವೈದ್ಯರು ಮತ್ತು ಮೂವರು ಮಕ್ಕಳ ವೈದ್ಯರ ಅಗತ್ಯವಿದೆ ಎಂದು ಹೇಳಿದರು.

ಸರ್ಕಾರ ಅರೆಬರೆ ಯಂತ್ರೋಪಕರಣಗಳು ಮತ್ತು ಪೀಠೋಪಕರಣ ಒದಗಿಸಿದ್ದು, ಇವು ದೂಳು ಹಿಡಿಯುತ್ತಿವೆ. ಪೂರ್ಣ ಪ್ರಮಾಣದ ಅಗತ್ಯ ಯಂತ್ರೋಪಕರಣ ಮತ್ತು ಪೀಠೋಪಕರಣಗಳ ಅಗತ್ಯವಿದೆ. ಸುಸಜ್ಜಿತ ಕಟ್ಟಡ ನಿರ್ಮಿಸಿದ ಅಗತ್ಯ ವೈದ್ಯಕೀಯ ಸಿಬ್ಬಂದಿ, ಸೌಕರ್ಯ ನೀಡಬೇಕಿದೆ ಎಂದರು.

ಈ ಬಗ್ಗೆ ಈಗಾಗಲೇ ಸಾರ್ವಜನಿಕ ಟೀಕೆಗಳು ವ್ಯಕ್ತವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಶಾಸಕ ಹೆಚ್.ಟಿ.ಮಂಜು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಆಸ್ಪತ್ರೆಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಿ ಆದಷ್ಟು ಶೀಘ್ರವಾಗಿ ಸಾರ್ವಜನಿಕ ಸೇವೆಗೆ ಸಮರ್ಪಣೆ ಮಾಡಲು ಮುಂದಾಗುವಂತೆ ಆಗ್ರಹಿಸಿದರು.

ಈ ವೇಳೆ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಮಂಜುಳ, ತಾಲೂಕು ಆರೋಗ್ಯಾಧಿಕಾರಿ ಡಾ.ಅಜಿತ್, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಧರ್ಮೇಂದ್ರ, ಹಿರಿಯ ಆರೋಗ್ಯ ನಿರೀಕ್ಷಕ ಸತೀಶ್, ವಿನಯ್ ಸೇರಿದಂತೆ ಹಲವರಿದ್ದರು.

ಕಾಯಕವೇ ಪ್ರಾಣವಾದ ಮೇದಾರ ಕೇತಯ್ಯ

। ವೀಣಾ ಹೇಮಂತ್‌ಗೌಡ ಪಾಟೀಲ್

ಮೇದಾರ ಕೇತಯ್ಯನವರು ಬಸವಣ್ಣನವರ ಸಮಕಾಲೀನರಾಗಿದ್ದು ಅವರಿಗೆ ಪರಮ ಆಪ್ತರಾಗಿದ್ದರು. ಕಾಯಕ ಮತ್ತು ದಾಸೋಹಗಳಲ್ಲಿ ಅಪಾರ ನಿಷ್ಠೆಯನ್ನು ಇರಿಸಿದ ಮೇಲೆ ಕೇತಯ್ಯನವರು ಕಾಯಕಕ್ಕೆ ನೀಡಿದ ಮಹತ್ವದಿಂದಾಗಿಯೇ ಶರಣ ಚರಿತ್ರದಲ್ಲಿ ದಾಖಲಾದವರು. ಕೇತ, ಕೇತಿದೇವ, ಕೇತಯ್ಯ, ಕೇತ ತಂದೆ, ಕೇತದೇವಯ್ಯ ಎಂಬ ಆದಾಬಾರು ಹೆಸರುಗಳಿಂದ ಕರೆಯಲ್ಪಟ್ಟ ಕೇತಯ್ಯನವರು ಶುದ್ಧ ಕಾಯಕ ಜೀವಿ ಜಂಗಮ ದಾಸೋಹಿ, ಅನುಭಾವಿ ಶರಣ, ಸದ್ಭಕ್ತ ನಿಷ್ಠೆಯಿಂದ ಕೂಡಿದ ಲಿಂಗವಂತ.

ಅನುಭವ ಮಂಟಪದಲ್ಲಿ ಬೆಳೆದ ಮಹಾ ಶರಣನಾದ ಈತ ವೀರಶೈವ ತತ್ವ ಸಿದ್ಧಾಂತವನ್ನು ತನ್ನ ವಚನಗಳ ಮೂಲಕ ಹೇಳಿದ್ದು ಸಮಾನತೆಯ ಸಮಾಜ. ರಚನೆಯ ಕನಸನ್ನು ಕಂಡಾತ.

ಕೇತಯ್ಯನವರು ಮಲೆನಾಡ ಸೆರಗಿನ ಬೇಲೂರು ಗ್ರಾಮದವರಾಗಿದ್ದು ಬಿದಿರಿನ ಪುಟ್ಟಿ ಮೊರ ಚಾಪೆಗಳನ್ನು ತಯಾರಿಸುವ ಕಾಯಕವನ್ನು ಮಾಡುತ್ತಿದ್ದರು. ತಾವು ತಯಾರಿಸುವ ಬಿದಿರಿನ ವಸ್ತುಗಳಿಗೆ ಬೇಕಾಗುವ ಮೂಲ ಆಕರವಾದ ಬಿದಿರನ್ನು ಕಾಡಿನ ಒಳಭಾಗದಲ್ಲಿರುವ ಬಿದಿರನ್ನು ಕಡಿದು ತಂದು ಸರಿಯಾದ ಆಕಾರಕ್ಕೆ ಕತ್ತರಿಸಿ ಬಿದಿರಿನ ಬುಟ್ಟಿ ಚಾಪೆ ಮತ್ತಿತರ ಅನುಕೂಲಕರ ವಸ್ತುಗಳನ್ನು ತಯಾರಿಸಿ ಅವುಗಳನ್ನು ಸಂತೆಯಲ್ಲಿ ಮಾರಿ ತಂದ ಹಣದಿಂದ ದವಸ ಧಾನ್ಯಗಳನ್ನು ಕೊಂಡು ತಂದು ಅಡುಗೆ ಮಾಡಿ ಶಿವಶರಣರಿಗೆ ದಾಸೋಹ ಮಾಡುವ ಮೂಲಕ ಪರಮ ತೃಪ್ತಿಯನ್ನು ಕಂಡುಕೊಂಡವರು.

ಕಾಯಕದಿಂದ ಬಂದಲ್ಲದ ಬೇರೆ ಯಾವುದನ್ನು ಸ್ವೀಕರಿಸಬಾರದು ಎಂಬ ಅಚಲ ನಿಷ್ಠೆಯನ್ನು ಹೊಂದಿದ್ದ ಅವರು ಅದೊಂದು ದಿನ ದಾಸೋಹದ ನಂತರ ಜಂಗಮರೊಬ್ಬರು ಬಿಟ್ಟು ಹೋದ ಹೊನ್ನನ್ನು ತಿಪ್ಪೆಗೆ ಬಿಸಾಡಿದರಲ್ಲದೆ ಆ ಸ್ಥಳವನ್ನು ಗೋಮಯದಿಂದ ಸಾರಿಸಿದರು.

ಕೇತಯ್ಯನವರ ಕಾಯಕ ನಿಷ್ಠೆಯನ್ನು ಪರೀಕ್ಷಿಸಲೆಂದು ಅದೊಂದು ದಿನ ಸಾಕ್ಷಾತ್ ಪರಶಿವನು ಅವರು ಕಾಡಿನ ಒಳಭಾಗದಲ್ಲಿ ಕಟ್ಟಿಗೆಯನ್ನು ಬಿದಿರನ್ನು ಕಡಿಯಲು ಹೋದಾಗ ಅವರು ಕಡಿದ ಎಲ್ಲಾ ಬಿದಿರುಗಳಲ್ಲಿ ಮುತ್ತು ರತ್ನಗಳು ಉದುರಿದವು. ಕಣ್ಣ ಮುಂದೆ ಸುರಿದ ಅಪಾರ ಧನ ರಾಶಿಯನ್ನು ಕಂಡು ಕೊಂಚವೂ ವಿಚಲಿತರಾಗದ ಕೇತಯ್ಯನವರು ಅಯ್ಯೋ ಬಿದಿರಿಗೆ ಹುಳು ಹತ್ತಿದೆ ಎಂದು ಹೇಳಿ ಮುಂದೆ ಸಾಗಿದರು.

ಅವರು ಕಡಿಯಲು ಪ್ರಯತ್ನಿಸಿದ ಬಹುತೇಕ ಗಿಡಗಳಲ್ಲಿ ಮುತ್ತು ರತ್ನ ಚಿನ್ನದ ಸುರಿಮಳೆಯಾದಾಗ ನಿರಾಶರಾದ ಕೇತಯ್ಯನವರು ಕಾಡಿನ ತೀರ ಒಳಭಾಗಕ್ಕೆ ಹೊರಟು ಹೋದರು.

ಅಲ್ಲಿ ಸಾಕಷ್ಟು ಹುಡುಕಿದ ಮೇಲೆ ದೊರೆತ ಬಿದಿರ ಗಿಡವೊಂದನ್ನು ಕಡಿಯಲು ಪಕ್ಕದ ಮರವೊಂದನ್ನು ಹತ್ತಿ ಉದ್ಯುಕ್ತರಾದ ಅವರಿಗೆ ಜೇನು ಹುಳು ಒಂದು ಕಚ್ಚಿದ ಪರಿಣಾಮವಾಗಿ ನೆಲಕ್ಕೆ ಬಿದ್ದರು. ಆ ಅವಘಡದಲ್ಲಿ ಅವರು ಕಡಿದ ಬಿದಿರಿನ ಮೆಳೆಯೊಂದು ಅವರ ಎದೆಯ ಭಾಗವನ್ನು ಹೊಕ್ಕಿತು. ತೀವ್ರವಾದ ರಕ್ತಸ್ರಾವ ಹಾಗೂ ನೋವಿನಿಂದ ಬಳಲುತ್ತಿದ್ದರೂ ತಮ್ಮ ಪ್ರತಿದಿನದ ದಾಸೋಹಕ್ಕೆ ತಡವಾಗುತ್ತದೆ ಎಂಬ ಕಾರಣಕ್ಕಾಗಿ ಕೇತಯ್ಯನವರು ನನ್ನ ಇಂದಿನ ಕಾಯಕ ಮತ್ತು ದಾಸೋಹಗಳು ಮುಗಿಯುವವರೆಗೆ ಸೂರ್ಯ ಮುಳುಗಬಾರದು... ಇದು ತಮ್ಮ ಸತ್ಯ ಶುದ್ಧ ಕಾಯಕದ ಮೇಲೆ ಆಣೆ ಎಂದು ಎಂದು ಸೂರ್ಯನ ಮೇಲೆ ಆಣೆ ಇಟ್ಟು ನನ್ನ ಕಾಯಕ ಮತ್ತು ದಾಸೋಹದ ಸೇವೆ ತೀರುವವರೆಗೂ ನನ್ನ ಪ್ರಾಣ ಹೋಗಬಾರದು ಎಂದು ಲಿಂಗದ ಮೇಲೆ ಆಣೆ ಇಟ್ಟು ಅಂದಿನ ದಾಸೋಹಕ್ಕೆ ಸಾಧ್ಯವಾಗುವಷ್ಟು ಬಿದಿರನ್ನು ಕಡಿದು ಮನೆಗೆ ತಂದರು.

ಉಪೇಕ್ಷಿತ ವಚನಕಾರರು

ಪತಿಯ ದೇಹದಿಂದ ಒಸರುತ್ತಿದ್ದ ರಕ್ತವನ್ನು ಕಂಡು ಅದಕ್ಕೆ ಕಾರಣವಾದ ಬಿದಿರನ್ನು ಕಿತ್ತಲು ಹೋದ ಅವರ ಪತ್ನಿ ಸಾತವ್ವೆಗೆ ಬೇಡ ಎಂದು ಹೇಳಿದ ಕೇತಯ್ಯನವರು ಮೊದಲು ಬಿದಿರುಗಳನ್ನು ಸೀಳಿ ಮರ ಮತ್ತು ಬುಟ್ಟಿಯನ್ನು ಮಾಡಿ ಸಂತೆಯಲ್ಲಿ ಮಾರಿ ತಂದ ಹಣದಿಂದ ದವಸ ಧಾನ್ಯವನ್ನು ಖರೀದಿಸಿ ಆರೋಗಣೆಗೆ ಸಿದ್ದಮಾಡಿ ದಾಸೋಹ ಸೇವೆಯನ್ನು ಸಂಪನ್ನಗೊಳಿಸಲು ಹೇಳಿದರು.

ಪತಿಯ ಕಾಯಕ ನಿಷ್ಠೆ ಮತ್ತು ದಾಸೋಹದಲ್ಲಿರುವ ಶ್ರದ್ಧೆಯನ್ನು ಅರಿತಿದ್ದ ಅವರ ಪತ್ನಿ ಸಾತವ್ವೆ ಮರುಮಾತಿಲ್ಲದೆ ಬಿದಿರನ್ನು ಚಿಕ್ಕದಾಗಿ ಸೀಳಿ ಅದರಿಂದ ಪುಟ್ಟಿ ಮತ್ತು ಮೊರಗಳನ್ನು ಮಾಡಿ ಮಾರಿ ತಂದ ದವಸ ಧಾನ್ಯಗಳಿಂದ ಅಡುಗೆಯನ್ನು ಸಿದ್ಧಪಡಿಸಿ ದಾಸೋಹಕ್ಕೆ ವ್ಯವಸ್ಥೆ ಮಾಡಿ ಉಣಬಡಿಸಿದಳು. ಇದೆಲ್ಲವೂ ಮುಗಿಯುವ ಹೊತ್ತಿಗೆ ಕತ್ತಲಾಗುವ ವೇಳೆಯಾಗಿದ್ದರೂ ಕೂಡ ಕೇತಯ್ಯನವರ ಆಣೆಯಂತೆ ಸೂರ್ಯ ಮುಳುಗದೆ ನಿಶ್ಚಲವಾಗಿ ಪಶ್ಚಿಮ ದಿಕ್ಕಿನಲ್ಲಿ ನಿಂತಿದ್ದ.

ಪತಿಯ ಇಚ್ಛೆಯಂತೆ ಎಲ್ಲವನ್ನು ಸಾಂಗವಾಗಿ ನೆರವೇರಿಸಿದ ಪತ್ನಿ . ಸಾತವ್ವೆಯನ್ನು ಮೆಚ್ಚುಗೆಯಿಂದ ನೋಡಿದ ಕೇತಯ್ಯನವರು ಆಗ ತಮ್ಮ ಎದೆಯನ್ನು ಹೊಕ್ಕ ಬಿದಿರನ್ನು ಕಿತ್ತು ತೆಗೆಯಲು ಹೇಳಿದರು. ಪತಿಯ ಆಣತಿಯಂತೆ ಬಿದಿರನ್ನು ಕಿತ್ತು ತೆಗೆದ ಪತ್ನಿ ಕೂಡಲೇ ಇಹಲೋಕವನ್ನು ತ್ಯಜಿಸುವ ನಿಟ್ಟಿನಲ್ಲಿದ್ದ ಗಂಡನ ಮುಖದಲ್ಲಿ ತೃಪ್ತಿಯ ಭಾವವನ್ನು ಕಂಡಳು. ರಾತ್ರಿಯೆಲ್ಲ ಪತಿಯ ಮರಣದ ಕುರಿತು ರೋದಿಸುತ್ತಾ ಕುಳಿತುಕೊಂಡಳಾಕೆ.

ಮರುದಿನ ಮುಂಜಾನೆ ಮನೆ ಮನೆಗೆ ಪೂಜೆಯ ಹೂವನ್ನು ಆಯ್ದು ತಂದು ನೀಡುವ ಕಾಯಕದ ಹೂಗಾರ ಮಾದಣ್ಣನವರು ಕೇತಯ್ಯನವರ ಪತ್ನಿಯ ರೋದನವನ್ನು ಕೇಳಿ ಅಲ್ಲಿಗೆ ಬಂದು ನಡೆದುದನ್ನು ಕೇಳಿ ಅರಿತರು. ಕೂಡಲೇ ಬಸವಣ್ಣನವರ ಬಳಿಗೆ ಧಾವಿಸಿದ ಅವರು ಕೇತಯ್ಯನವರು ಇಹಲೋಕ ತ್ಯಜಿಸಿರುವ ವಿಷಯವನ್ನು ಹಾಗೂ ನಡೆದ ಘಟನೆಯನ್ನು ಹೇಳಿದರು. ಇದರಿಂದ ನೊಂದುಕೊಂಡ ಬಸವಣ್ಣ ಕಾಯಕದಲ್ಲಿಯೇ ಪ್ರಾಣವನ್ನು ಬಿಟ್ಟ ಕೇತಯ್ಯನವರನ್ನು ನೋಡಿ ಅತೀವ ದುಃಖದಿಂದ ತಮ್ಮ ಪ್ರಾಣವನ್ನು ಕೇತಯ್ಯನವರಲ್ಲಿ ಲೀನವಾಗಿಸಿದರು.

ಬಸವಣ್ಣನವರು ಹಾಗೂ ಕೇತಯ್ಯನವರು ಈ ರೀತಿ ಮಡಿದುದನ್ನು ಕಂಡು ಅಲ್ಲಿಗೆ ಧಾವಿಸಿ ಬಂದ ಮಡಿವಾಳ ಮಾಚಯ್ಯನವರು ತಮ್ಮ ವೀರಘಂಟೆಯನ್ನು ಜೋರಾಗಿ ಬಾರಿಸಿದಾಗ ಕೇತಯ್ಯ ಹಾಗೂ ಬಸವಣ್ಣನವರು ಶಿವಯೋಗ ನಿದ್ದೆಯಿಂದ ಎಚ್ಚೆತ್ತರೆಂದು ಭಾಸವಾಗುವಂತೆ ನಗುನಗುತ್ತ ಎದ್ದು ಕುಳಿತರು.

ಆಗ ಕೇತಯ್ಯನವರು

"ಎನ್ನ ಕಾಯದ ಕಳವಳ ನಿಲ್ಲಿಸಿ ಗುರುಲಿಂಗವ ತೋರಿದ
ಎನ್ನ ಮನದ ವ್ಯಾಕುಳವ ನಿಲಿಸಿ ಜಂಗಮ ಲಿಂಗನ ತೋರಿದ
ಇಂತು ಅಂತರಂಗ ಬಹಿರಂಗದಲ್ಲಿ ತಾನೇಯಾಗಿ
ಎನ್ನ ಪಾವನವ ಮಾಡಿದ
ಅಮರ ಗಣಂಗಳು ಮುನಿದು ಎನ್ನ ಕೈಲಾಸಕ್ಕೆ ಒಯ್ದಡೆ
ಸದೋನ್ಮುಕ್ತಿಯ ತೋರಲೆಂದು ಮರ್ತ್ಯಕ್ಕೆ
ಮರಳಿ ತಂದ ಸಂಗನಬಸವಣ್ಣನೇ ಗುರುವೆನಗೆ
ಸಂಗನ ಬಸವಣ್ಣನೇ ಪರವೆನಗೆ
ಸಂಗನಬಸವಣ್ಣನ ಕರುಣದಿಂದ ಘನಕ್ಕೆ ಘನಮಹಿಮ
ಅಲ್ಲಮಪ್ರಭುವಿನ ಶ್ರೀಪಾದವ ಕಂಡು
ಬದುಕಿದೆನು ಕಾಣಾ ಗೌರವೇಶ್ವರ

ಎಂದು ಕೇತಯ್ಯ ತಮ್ಮ ವಚನದಲ್ಲಿ ಬಸವಣ್ಣನವರ ಕುರಿತು ಅಭಿಮಾನವನ್ನು ವ್ಯಕ್ತಪಡಿಸಿದ್ದಲ್ಲದೇ ಕಾಯಕ ಮುಂದುವರಿಸುವ, ದಾಸೋಹ ಮಾಡುವ ಭಾಗ್ಯ ಮತ್ತಿ ದೊರೆಯಿತಲ್ಲಾ ಎಂದು ಹಿರಿಹಿರಿ ಹಿಗ್ಗುತ್ತಾನೆ. ಇದು ಜಂಗಮ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಜಂಗಮರ ಪ್ರಾಣವನ್ನು ತಮಗಿಂತ ಮಿಗಿಲಾಗಿ ಬಸವಣ್ಣನವರು ಪ್ರೀತಿಸುತ್ತಿದ್ದರು ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ. ಈ ವಚನವು ಗುರು ಸಿದ್ದ ವೀರಣ್ಣ ಒಡೆಯರವರ ಶೂನ್ಯ ಸಂಪಾದನೆಯಲ್ಲಿ ಬರುತ್ತದೆ.

ಮೇದಾರ ಕೇತಯ್ಯನವರ ಒಟ್ಟು 11 ವಚನಗಳನ್ನು ನಮಗೆ ಲಭ್ಯವಾಗಿದ್ದು ಅವುಗಳಲ್ಲಿ ಶಿವಾನುಭವ ತತ್ವಗಳನ್ನು ನಿರೂಪಿಸಿರುವ ಕೇತಯ್ಯನವರ ಕುರಿತು ಹೆಚ್ಚು ತಿಳಿಯಲು ಸಾಧ್ಯವಾಗದೇ ಹೋದರೂ ಅವರ ಕುರಿತ ಇನ್ನಿತರ ಜಾನಪದ ಪುರಾಣಗಳಲ್ಲಿ ಆಕರಗಳನ್ನು ನಾವು ಪಡೆಯಬಹುದು.ತನು ಮನ ಧನಗಳನ್ನು ಶರಣ ತತ್ವಕ್ಕೆ ಅರ್ಪಿಸಿದ ಮಹಾನ್ ಶಿವಶರಣ ಕಾಯಕವೇ ಪ್ರಾಣವಾದ ಮೇದಾರ ಕೇತಯ್ಯನವರಿಗೆ ನಮೋ ನಮಃ

ಸಂಸಾರ ನೌಕೆಗೆ ಸ್ನೇಹದ ಸಾರಥಿ

ದಾಂಪತ್ಯ ಎಂಬುದು ಕೇವಲ ಇಬ್ಬರು ವ್ಯಕ್ತಿಗಳ ಮಿಲನವಲ್ಲ; ಅದು ಎರಡು ಮನಸ್ಸುಗಳ ಸುದೀರ್ಘ ಪಯಣ. ಈ ಪಯಣ ಸುಗಮವಾಗಿ ಸಾಗಲು ಪ್ರೀತಿಗಿಂತ ಹೆಚ್ಚಾಗಿ 'ಸ್ನೇಹ' ಮತ್ತು 'ಸಮಾಲೋಚನೆ' ಅತಿ ಮುಖ್ಯ. ಹಿಂದಿನ ಕಾಲದ ಸಾಂಪ್ರದಾಯಿಕ ಚೌಕಟ್ಟುಗಳು ಇಂದು ಬದಲಾಗುತ್ತಿವೆ. ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಸಮಾನತೆಯ ಈ ದಿನಗಳಲ್ಲಿ, ಸಂಗಾತಿಯನ್ನು ಅತ್ಯುತ್ತಮ ಸ್ನೇಹಿತನನ್ನಾಗಿ ಕಾಣುವುದು ನೆಮ್ಮದಿಯ ಜೀವನಕ್ಕೆ ಅನಿವಾರ್ಯ ಅಗತ್ಯವಾಗಿದೆ.

ಪರಮ ಆಪ್ತ ಗೆಳೆತನ: ನಂಬಿಕೆಯ ಭದ್ರ ಬುನಾದಿ

ಸಾಮಾನ್ಯವಾಗಿ ನಾವು ಹೊರಗಿನವರಲ್ಲಿ ಗೆಳೆಯರನ್ನು ಹುಡುಕುತ್ತೇವೆ. ಆದರೆ ಮನೆಯೊಳಗೆ ಇರುವ ಸಂಗಾತಿಯೇ ನಮ್ಮ ಮೊದಲ ಮತ್ತು ಅತ್ಯುತ್ತಮ ಸ್ನೇಹಿತನಾಗಬೇಕು. ಸ್ನೇಹವಿದ್ದಲ್ಲಿ ಅಧಿಕಾರ ಚಲಾವಣೆ ಇರುವುದಿಲ್ಲ, ಬದಲಾಗಿ ಸಮಾನತೆ ಇರುತ್ತದೆ. ಪತಿಗೆ ಹೆಂಡತಿ ಕೇವಲ ಗೃಹಿಣಿಯಲ್ಲ, ಜೀವನದ ಏಳುಬೀಳುಗಳಲ್ಲಿ ಹೆಗಲಿಗೆ ಹೆಗಲು ಕೊಡುವ ಆಪ್ತ ಸಮಾಲೋಚಕಿ. ಹಾಗೆಯೇ ಪತ್ನಿಯ ಪಾಲಿಗೆ ಪತಿ ಕೇವಲ ಯಜಮಾನನಲ್ಲ, ಅವಳ ಕನಸುಗಳಿಗೆ ನೀರೆರೆಯುವ ಮತ್ತು ಭಾವನೆಗಳನ್ನು ಗೌರವಿಸುವ ಆತ್ಮೀಯ ಗೆಳೆಯ.

ಮಕ್ಕಳ ಪಾಲನೆ ಮತ್ತು ಭವಿಷ್ಯ: ಹಂಚಿಕೆಯ ಹೊಣೆಗಾರಿಕೆ : ಮಕ್ಕಳನ್ನು ಬೆಳೆಸುವುದು ಕೇವಲ ತಾಯಿಯ ಕೆಲಸವಲ್ಲ ಅಥವಾ ಕೇವಲ ತಂದೆಯ ಆರ್ಥಿಕ ಜವಾಬ್ದಾರಿಯಲ್ಲ. ಬದಲಾಗುತ್ತಿರುವ ಇಂದಿನ ದಿನಗಳಲ್ಲಿ ಮಕ್ಕಳ ಶಿಕ್ಷಣ ಮತ್ತು ವ್ಯಕ್ತಿತ್ವ ರೂಪಿಸುವಲ್ಲಿ ದಂಪತಿಗಳಿಬ್ಬರ ಸಮಾನ ಪಾತ್ರ ಬಹಳ ಮುಖ್ಯ.

- ಶಿಕ್ಷಣ ಮತ್ತು ಮಾರ್ಗದರ್ಶನ: ಮಕ್ಕಳ ಶಾಲಾ ಚಟುವಟಿಕೆಗಳು, ಪಾಠ–ಪ್ರವಚನ ಮತ್ತು ಅವರ ಆಸಕ್ತಿಗಳನ್ನು ಗುರುತಿಸುವಲ್ಲಿ ಇಬ್ಬರೂ ಸಮಯ ಮೀಸಲಿಡಬೇಕು. ತಂದೆ–ತಾಯಿ ಇಬ್ಬರೂ ಶಾಲೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಾಗ ಮಗುವಿನಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ.
- ಶಿಸ್ತು ಮತ್ತು ಸಂಸ್ಕಾರ (Grooming): ಮಕ್ಕಳ ಮುಂದೆ ಪತಿ–ಪತ್ನಿ ಹೇಗೆ ನಡೆದುಕೊಳ್ಳುತ್ತಾರೆ ಎಂಬುದೇ ಮಕ್ಕಳಿಗೆ ಮೊದಲ ಪಾಠ. ಪರಸ್ಪರ ಗೌರವದಿಂದ ವರ್ತಿಸುವ ದಂಪತಿಗಳನ್ನು ನೋಡಿ ಬೆಳೆಯುವ ಮಕ್ಕಳು ಸತ್ಪ್ರಜೆಗಳಾಗುತ್ತಾರೆ. ಶಿಸ್ತು ಕ್ರಮಗಳನ್ನು ಜಾರಿಗೆ ತರುವಾಗ ಇಬ್ಬರ ಅಭಿಪ್ರಾಯ ಒಂದೇ ಆಗಿರಲಿ; ಒಬ್ಬರು ಬೈದಾಗ ಇನ್ನೊಬ್ಬರು ಅತಿಯಾಗಿ ಮುದ್ದಿಸುವುದು ಮಗುವಿನ ವ್ಯಕ್ತಿತ್ವದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು.
- ಗುಣಮಟ್ಟದ ಸಮಯ: ವೃತ್ತಿಜೀವನದ ಒತ್ತಡದ ನಡುವೆಯೂ ಮಕ್ಕಳೊಂದಿಗೆ ಆಟವಾಡುವುದು, ಅವರಿಗೆ ಕಥೆ ಹೇಳುವುದು ಅಥವಾ ಅವರ ಮನದ ಮಾತುಗಳನ್ನು ಕೇಳಿಸಿಕೊಳ್ಳುವುದನ್ನು ದಂಪತಿಗಳು ಹಂಚಿಕೊಳ್ಳಬೇಕು.

ಉದ್ಯೋಗಸ್ಥ ದಂಪತಿಗಳು ಮತ್ತು ಆರ್ಥಿಕ ಸಬಲತೆ : ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಪತಿ–ಪತ್ನಿ ಇಬ್ಬರೂ ಉದ್ಯೋಗಸ್ಥರಾಗಿರುವುದು ಸಾಮಾನ್ಯ. ಇಲ್ಲಿ "ನನ್ನ ಹಣ" ಅಥವಾ "ನಿನ್ನ ಹಣ" ಎನ್ನುವ ಬದಲು "ನಮ್ಮ ಆದಾಯ" ಎಂಬ ಭಾವನೆ ಮೂಡುವುದು ಮುಖ್ಯ. ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಪರಸ್ಪರ ಸಮಾಲೋಚನೆ ನಡೆಸುವುದರಿಂದ ಹಣಕಾಸಿನ ಶಿಸ್ತು ಮೂಡುತ್ತದೆ. ಹೂಡಿಕೆಗಳು, ಸಾಲ ತೀರಿಸುವಿಕೆ ಅಥವಾ ಮಕ್ಕಳ ಭವಿಷ್ಯದ ಉಳಿತಾಯದ ಬಗ್ಗೆ ಮುಕ್ತವಾಗಿ ಚರ್ಚಿಸುವ ದಂಪತಿಗಳ ನಡುವೆ ಅಸುರಕ್ಷತೆ ಉಂಟಾಗುವುದಿಲ್ಲ.

ಮನೆಗೆಲಸ ಮತ್ತು ದೈನಂದಿನ ಸಹಕಾರ

ದಿನದ ಬಹುಪಾಲು ಸಮಯವನ್ನು ಕಚೇರಿಯಲ್ಲಿ ಕಳೆದು ಮನೆಗೆ ಬಂದಾಗ ಇಬ್ಬರೂ ದಣಿದಿರುತ್ತಾರೆ. ಇಂತಹ ಸಂದರ್ಭದಲ್ಲಿ ಕೆಲಸಗಳನ್ನು ಹಂಚಿಕೊಳ್ಳುವುದು ಈ ಕಾಲದ ಅಗತ್ಯ. ಅಡುಗೆಗೆ ನೆರವಾಗುವುದು, ಮನೆಯನ್ನು ಅಚ್ಚುಕಟ್ಟಾಗಿಡುವುದು ಅಥವಾ ದಿನಸಿ ತರುವುದು?ಹೀಗೆ ಪ್ರತಿಯೊಂದು ಕೆಲಸದಲ್ಲೂ ಪರಸ್ಪರ ಸಹಕರಿಸಿದಾಗ ಸಂಗಾತಿಗೆ ನೀಡುವ ಅತಿದೊಡ್ಡ ಗೌರವವದು. ಒಬ್ಬರ ಕೆಲಸದ ಒತ್ತಡವನ್ನು ಇನ್ನೊಬ್ಬರು ಅರ್ಥಮಾಡಿಕೊಂಡಾಗ ಮನೆಯ ಪರಿಸರವು ಒತ್ತಡಮುಕ್ತವಾಗಿರುತ್ತದೆ.

ಸಮಾಲೋಚನೆಯ ಮೂಲಕ ನಿರ್ಧಾರ: ಸಂಘರ್ಷಕ್ಕೆ ಪರಿಹಾರ : ಬಹಳಷ್ಟು ಕುಟುಂಬಗಳಲ್ಲಿ ಅಶಾಂತಿಗೆ ಕಾರಣವಾಗುವುದು 'ಏಕಪಕ್ಷೀಯ ನಿರ್ಧಾರಗಳು'. ಜೀವನದ ಪ್ರಮುಖ ಹಂತಗಳಲ್ಲಿ ಇಬ್ಬರೂ ಕುಳಿತು ಸಮಾಲೋಚನೆ ಮಾಡುವುದರಿಂದ ನಿರ್ಧಾರಗಳು ಹೆಚ್ಚು ಬಲಿಷ್ಠವಾಗುತ್ತವೆ.

- ಹಂಚಿಕೆಯ ಜವಾಬ್ದಾರಿ: ನಿರ್ಧಾರವನ್ನು ಒಟ್ಟಾಗಿ ತೆಗೆದುಕೊಂಡಾಗ, ಫಲಿತಾಂಶ ಏನೇ ಇರಲಿ ಇಬ್ಬರೂ ಜವಾಬ್ದಾರಿ ವಹಿಸಿಕೊಳ್ಳುತ್ತಾರೆ.
- ಗೌರವದ ಸಂಕೇತ: ಸಂಗಾತಿಯ ಸಲಹೆ ಕೇಳುವುದು ಎಂದರೆ ಅವರ ಬೌದ್ಧಿಕ ಅಸ್ತಿತ್ವಕ್ಕೆ ಗೌರವ ನೀಡಿದಂತೆ.

ಶಾಂತಿಯುತ ಜೀವನ ಎಂದರೆ ಕೇವಲ ಸೌಕರ್ಯಗಳಿರುವ ಜೀವನವಲ್ಲ, ಅದು ಮನಸ್ಸಿನ ನೆಮ್ಮದಿಯಿರುವ ಜೀವನ. ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳು ಎಷ್ಟೇ ಆದರೂ, ಸಂಸಾರವೆಂಬ ನೌಕೆ ಸುಗಮವಾಗಿ ಸಾಗಲು ಪತಿ–ಪತ್ನಿಯರ ನಡುವಿನ ನಂಬಿಕೆ ಮತ್ತು ಗೆಳೆತನವೇ ಇಂಧನ. ಜವಾಬ್ದಾರಿಗಳನ್ನು ಹಂಚಿಕೊಂಡು, ಮಕ್ಕಳನ್ನು ಪ್ರೀತಿ ಮತ್ತು ಶಿಸ್ತಿನಿಂದ ಬೆಳೆಸುತ್ತಾ, ನಿರ್ಧಾರಗಳನ್ನು ಒಟ್ಟಾಗಿ ತೆಗೆದುಕೊಳ್ಳುವ ದಂಪತಿಗಳಿಗೆ ವೃತ್ತಿಜೀವನದ ಯಶಸ್ಸಿನ ಜೊತೆಗೆ ಕೌಟುಂಬಿಕ ಸುಖವೂ ಲಭಿಸುತ್ತದೆ.

। ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

ಬದುಕು v/s ಬಾಳು

। ಪುಷ್ಪ ಪ್ರಸಾದ್

ಒಂದು ಕಡೆ ಹುಟ್ಟು, ಇನ್ನೊಂದು ಕಡೆ ಸಾವು. ಹುಟ್ಟಿದ ಕ್ಷಣ ಉಸಿರಾಟ ಪ್ರಾರಂಭ. ಉಸಿರಾಡುತ್ತ ಜೀವ ಹಿಡಿದುಕೊಂಡು ಇದ್ದರೆ ಬದುಕಿರುವುದು. ಹುಟ್ಟು ಸಾವುಗಳ ಮಧ್ಯದ ನಿರಂತರ ಕಾಲವೆ ಬದುಕು. ಸಾಯುವವರೆಗೂ ಬದುಕು ಅನಿವಾರ್ಯ. ಬದುಕು ವ್ಯರ್ಥ ಮಾಡದೆ ಸಮಯ ಅರ್ಥ ಮಾಡಿಕೊಂಡು ಬದುಕಬೇಕು, ಒಳ್ಳೆಯ ಸಂಸ್ಕಾರ ನಮ್ಮ ಬದುಕನ್ನೇ ಬದಲಿಸುತ್ತದೆ. ನಮ್ಮ ಬದುಕನ್ನು ಮತ್ತೊಬ್ಬರ ಬದುಕಿನೊಡನೆ ಹೋಲಿಸಿ ಹಿಗ್ಗುವ, ಕುಗ್ಗುವ ಅವಶ್ಯಕತೆ ಇರಬಾರದು. ನಮ್ಮ ಜೀವನ ನಮಗೆ. ಅದನ್ನು ಸಂಭ್ರಮದಿಂದ ಇರುವಷ್ಟರಲ್ಲೆ? ಸಂತೋಷದಿಂದ ಎಲ್ಲರೊಡನೆ ಹಂಚಿ ಬದುಕಿದಾಗ ಸಾರ್ಥಕ ಬದುಕಾಗುತ್ತದೆ. ಬದುಕು (living) ಎಂದರೆ ಒಬ್ಬರ ಜೀವನೋಪಾಯದ ಸಾಧನವಾಗಿ ಸಂಪತ್ತು, ಸಂಪತ್ತು, ವೃತ್ತಿ, ಇತ್ಯಾದಿ; ಕೈಯಲ್ಲಿರುವ ಕೆಲಸ; ಈ ಸಮಯದಲ್ಲಿ ಮಾಡಲಾಗುತ್ತಿರುವ ಅಥವಾ ಮಾಡಬೇಕಾದ ಕೆಲಸ; ಅಸ್ತಿತ್ವ; ಜೀವಿತಾವಧಿ; ಜೀವಂತವಾಗಿರುವುದು. ಪ್ರಪಂಚದಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಮಾಡಿದ್ದುಣ್ಣುವ ಮಹರಾಯನಾಗಿ ಇರುವುದು ಬಾಳು. ಗೃಹಸ್ಥ ಜೀವನ ಎನ್ನುವ ಅರ್ಥವೂ ಇದೆ. ಅಂದರೆ, ಸಂಬಂಧಗಳನ್ನು ಬೆಳಸಿ ಸಂಸಾರದಲ್ಲಿ ಸ್ವೇಚ್ಛೆಯಿಂದ ತೊಡಗಿರುವುದು ಬಾಳು. ಬಾಳು ಯಾವಾಗಲೋ ಪ್ರಾರಂಭವಾಗಿ ಯಾವಾಗಲೋ ನಿಲ್ಲಬಹುದು. ಕೆಲ ಕಾಲ ನಿಂತರೂ ಮತ್ತೆ ಪ್ರಾರಂಭಿಸಬಹುದು, ಒಂದು ಕೆಲಸದಿಂದ ನಿವೃತ್ತಿ ಹೊಂದಿ, ಬೇಸತ್ತ ಮೇಲೆ, ಇನ್ನೊಂದನ್ನು ಪ್ರಾರಂಭಿಸಿದ ಹಾಗೆ.

ಬದುಕು ಜಟಕಾ ಬಂಡಿ. ಇಲ್ಲಿ ಬಾಳು ಜಟಕಾ ಬಂಡಿ ಎನ್ನಲಾಗುವುದಿಲ್ಲ. ಪ್ರಪಂಚ , ಸಂಸಾರ, ಸಂಬಂಧಗಳಿಗೆ ಅಂಟಿಕೊಂಡ ಬಾಳು ಬರಿ ಮಾಯೆ. ಅದು ಹುಸಿ ಎಂದ ಮೇಲೆ ಅದರ ಪ್ರಸ್ತಾಪವೆ ಸಲ್ಲದು. ಹುಟ್ಟು ಸಾವುಗಳ ಮಧ್ಯ ಏನು ಮಾಡಬಲ್ಲೆ ಎನ್ನುವುದು ಸಂಪೂರ್ಣ ವಿಧಿಯ ಕೈಯಲ್ಲಿದೆ ಎನ್ನುವ ತಾತ್ವಿಕ ನೆಲೆಯಲ್ಲಿ ಡಿ. ವಿ. ಗುಂಡಪ್ಪನವರು ಹೇಳಿದ್ದಾರೆ. ಬದುವು, ಬಾಳ್ತೆ, ಬಾಳ್ಕೆ, ಬಾಳ್ವೆ, ಬಾಳುವೆ, ಬಾಳ್ವಿಕೆ, ಬಾಳುವಿಕೆ, ಬದು ಎನ್ನುವ ಪದಗಳು ಹೊಲ ಗದ್ದೆಗಳಲ್ಲಿ ನೀರು ಹಿಡಿಯಲು ಮಣ್ಣು ಎತ್ತರಿಸಿ ಕಟ್ಟಿದ ತಡೆ ಅಥವ ಕಟ್ಟೆ, ಬದುವಿನಲ್ಲಿ ನೀರು ಹಿಡಿದಿಟ್ಟಂತೆ ಮೈಯಲ್ಲಿ ಜೀವ ಹಿಡಿದುಕೊಂಡು ಇರುವುದು ಬದುಕು. ಆ ನೀರು, ಸುಮ್ಮನೆ ಬತ್ತಿ ಹೋಗದೆ, ಬಳಕೆಯಾಗಿ ಬೆಳೆ ಕೊಡುವಂತೆ ಪ್ರಯೋಜನಕಾರಿಯಾದರೆ ಅದು ಬಾಳು. ಬದುವಿಗೂ ಬದುಕಿಗೂ ಪದಹುಟ್ಟ (etymological) ಸಂಬಂಧ ಇಲ್ಲದಿದ್ದರೂ ಇದೊಂದು ಸೂಕ್ತ ಹೋಲಿಕೆ. ಬಾಳ್ತೆ, ಬಾಳ್ಕೆ, ಬಾಳ್ವೆ, ಬಾಳುವೆ, ಬಾಳ್ವಿಕೆ, ಬಾಳುವಿಕೆ – ಇವು ಜೀವನದ ಶೈಲಿ, ಸ್ಥಿತಿ, ಏಳ್ಗೆ ಗಳನ್ನು ಸೂಚಿಸುತ್ತವೆ. ಲಾಭ, ಪ್ರಯೋಜನ ಎನ್ನುವ ಅರ್ಥಗಳೂ ಇವೆ. ಅಂದರೆ ಬದುಕಿನಿಂದ ಲಾಭ ಅಥವಾ ಪ್ರಯೋಜನ ಆದರೆ ಅದು ಬಾಳ್ತೆ. ಲಾಭ ನಿಮಗಾದರೆ ಒಳ್ಳೆಯದೆ. ಬೇರೆಯವರಿಗೂ ಅದರೆ ಇನ್ನೂ ಚೆನ್ನ. ದುಡಿಮೆಗೊಂದು ದಾರಿ ಮಾಡಿಕೊಂಡು ಕಷ್ಟದಲ್ಲೋ, ಸುಖದಲ್ಲೋ ಜೀವನ ಸಾಗಿಸುವುದು ಬದುಕು.ಉತ್ತಮ ಮಾರ್ಗದಲ್ಲಿ ಜೀವನ ಸಾಗಿಸುತ್ತ ಬಹು ದಿನಗಳವರೆಗೆ ಬದುಕುವುದು ಬಾಳು. ಹೇಗೋ ಬದುಕಬಹುದು ಆದರೆ ಬಾಳುವುದು ಕಷ್ಟ.ಬದುಕು ಜೀವನ ನಿರ್ವಹಣೆ, ಬಹುದಿನಗಳ ಉತ್ತಮ ಬದುಕು ಬಾಳು. ಬಾಳು ಎಂಬುದು ಬಾಳಿಕೆ ಎಂಬುದರ ಧ್ವನಿ; ಆದರದು ದೀರ್ಘಕಾಲದ ಉತ್ತಮ ಬದುಕು. ಆ ಸೀರೆ ತುಂಬಾ ದಿನ ಬಾಳಿಕೆ ಬಂತು ಎಂಬುದನ್ನು ಗಮನಿಸಿ.ಸೀರೆ ಗುಣಮಟ್ಟದ ದಾರದಿಂದ ಕೂಡಿದ್ದರಿಂದ ಅದು ದೀರ್ಘ ಕಾಲದವರೆಗೆ ಬಾಳಿಕೆ ಬಂತು.ಹಾಗೆಯೇ ಬದುಕು ಉತ್ತಮವಾಗಿದ್ದರೆ ಬಾಳು ಹಸನಾಗಿರುತ್ತದೆ. ಬದುಕು ಜೀವನ ಕ್ರಮ, ಬಾಳು ಅದರ ಪ್ರತಿಬಿಂಬ. ಬಾಳು (Life) ಎಂದರೆ ಮೌಲ್ಯ; ಮೂಲ ಬೆಲೆ; ದೀರ್ಘಕಾಲದವರೆಗೆ, ನಿವಾಸಿಯಾಗಿ ಒಂದು ಸ್ಥಳದಲ್ಲಿ ನೆಲೆಸುವುದು; ಮನೆತನ, ವೈವಾಹಿಕ ಜೀವನವನ್ನು ಮುಂದುವರೆಸುವುದು; ಶಾಂತ ಜೀವನವನ್ನು ನಡೆಸುವುದು; ಜೀವನೋಪಾಯಕ್ಕಾಗಿ ಕೆಲಸ ಮಾಡುವುದು ಅಥವಾ ಯಾವುದಾದರೂ ವೃತ್ತಿಯನ್ನು ಮುಂದುವರಿಸುವುದು. ದೀರ್ಘಾಯುಷ್ಯದ ಗುಟ್ಟು ಬಾಳಿಕೆ – ವಸ್ತು ಬಾಳಿಕೆ ಬರುತ್ತದೆ ಅಂದರೆ ಬಹು ಕಾಲ ತಾಳುತ್ತದೆ, ವಸ್ತು ಉಪಯೋಗಕಾರಿ ಆಗಿದೆ ಎಂದು ಅರ್ಥ. ಹಾಗಾದರೆ, ಪ್ರಯೋಜನಕಾರಿಯಾಗಿ ಹೊಂದಿಕೊಂಡು ಬಾಳುವೆ ಮಾಡಿದರೆ ಬಾಳಿಕೆ ಖಚಿತ. ?ತಾಳಿದವನು ಬಾಳ್ಯಾನು? ಎನ್ನುವುದು ಗಾದೆ ಮಾತು. ಜೊತೆಗೆ, ಬಾಳಿದವನು ತಾಳ್ಯಾನು ಎಂದೂ ಹೇಳಬಹುದು. ಪ್ರಯೋಜನಕಾರಿ ಬಾಳುವೆ – ಇದೆ ದೀರ್ಘಾಯುಷ್ಯದ ಗುಟ್ಟು. ಬದುಕಿ ಮುದುಕನಾಗು ಬಾಳಿ ಬಂಗಾರವಾಗು.

ಬರಿ ಬದುಕಿದ್ದರೆ ಕಾಲ ಜರೆಯುತ್ತದೆ, ವಯಸ್ಸು ಏರುತ್ತದೆ, ಮುಪ್ಪು ತಾನಾಗಿಯೆ ಆವರಿಸಿಕೊಳ್ಳುತ್ತದೆ. ಪ್ರಪಂಚದಲ್ಲಿ ಮುಳುಗಿ, ಬೇರೆಯವರಿಗ ಬೇಕಾದಾಗ, ಬದುಕು ತಾನೇ ಬಂಗಾರವಾಗುತ್ತದೆ. ಬಾಳಲು ಬದುಕಿರಬೇಕು, ಬರಿ ಬದುಕಿರಲು ಬಾಳಬೇಕಿಲ್ಲ. ಒಂದು ರೀತಿಯಲ್ಲಿ ಬದುಕು ಮುಗಿದರೂ ಬಾಳಿರಬಹುದು. ಇದೆ ಬಾಳಿಕೆ–ಬದುಕಿದ್ದಾಗ ನಡೆಸಿದ ಬಾಳುವೆಯ ಕರ್ಮಗಳ ಅನುಸಾರ ತೀರಿಕೊಂಡ ಮೇಲೂ ಜನರ ಮನಸ್ಸಿನಲ್ಲಿ ಜೀವಂತವಾಗಿದ್ದು ಉನ್ನತ ವಿಚಾರ ಆಚಾರಗಳಿಂದ ಆದರ್ಶವಾಗಿ, ಅವರನ್ನು ಪ್ರಭಾವಿಸುತ್ತ, ಅವರ ಜೀವನದಲ್ಲಿ ಬೆರೆತು ಬಾಳಬಹುದು. ರಾಮ, ಕೃಷ್ಣ, ಶಂಕರ, ಬುದ್ಧ, ಬಸವ, ಗಾಂಧಿ, ಅರಿಸ್ಟಾಟಲ್, ಗೆಲಿಲಿಯೊ, ಆರ್ಯಭಟ, ಡಾರ್ವಿನ್, ಐನ್ ಸ್ಟೈನ್, ಅಶೋಕ, ವಿಶ್ವೇಶ್ವರಯ್ಯ, ಪುರಂದರ ದಾಸ ಹೀಗೆ ಬದುಕು ಮುಗಿದರೂ ಬಾಳುತ್ತಿರುವ ಮಹನೀಯರ ಉದಾಹರಣೆಗಳು ಅಗಣಿತ. ಅವರು ಬದುಕಿ ಬಾಳಿದವರು, ಅವನ ಜೊತೆ ಬದುಕೋದು ಕಷ್ಟ, ಅವನದೂ ಒಂದು ಬದುಕೇ? ಅದೂ ಒಂದು ಬಾಳೆ? ಅವಳು ಬಾಳುಮೆ ಮಾಡಾಳೇ? ಮೊದಲಾದ ಮಾತುಗಳಿವೆ. ಬದುಕು ಎಂಬುದು ಬದುಕುವುದು ಅಥವಾ ಜೀವನ ನಡೆಸುವುದನ್ನು ಸೂಚಿಸುತ್ತದೆ. ಬಾಳು ಎಂಬುದು ತುಂಬಾ ಸವಾಲುಗಳಿಂದ ಕೂಡಿರುವುದಾಗಿದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,